
"Badavara Bandhu"
Special Number.



His Holiness Sri Narayan Gurudev the "Prophet of Peace" who advocated **One Caste, One Religion & One God** and uplift of the Poor.



"ಬಡವರ ಬಂಧು" ಮಹಾಮುನಿಯವರು.

"ಭರತವರ್ಷದ ದೀನ ಜನರಿಗೆ ಎನ್ನ ಪ್ರಾಣವಿದರ್ಪಣ ।
ಭರತಭೂಮಿಯನೆತ್ತಿ ಹಿಡಿಯಲು ಎನ್ನ ಕಾಯ ಸಮರ್ಪಣ" ॥

M. K. Gandhi



ಪೂಜೆ—ಪ್ರಾರ್ಥನೆ—ಭಕ್ತಿ.

ಅಭಿವಂದನೆ

ಇದು "ಬಡವರ ಬಂಧು"ವಿನ ದ್ವಿತೀಯ ವರ್ಷದ ಪ್ರಥಮ ವಿಶೇಷ ಸಂಚಿಕೆ. ಜೂನ್ ಒಂದನೇ ತಾರೀಕಿಗೆ ನಮ್ಮ ಸಮಸ್ತ ವಾಚಕರ ಕೈ ಸೇರಬೇಕಾಗಿತ್ತಾದರೂ, ಅನಿವಾರ್ಯ ಮುದ್ರಣ ತೊಂದರೆಗಳಿಂದಾಗಿಯೂ, ಹೇರಳ ಪ್ರತಿಗಳನ್ನು ಮುದ್ರಿಸಲಿದ್ದುದರಿಂದಲೂ ಒಂದು ತಿಂಗಳ ಸಮಯವನ್ನು ನುಂಗಿ ಇದನ್ನು ಪ್ರಕಟಿಸಬೇಕಾಯಿತು. ಇಷ್ಟರ ತನಕ ಸಹನೆಯಿಂದಿದ್ದ ನಮ್ಮ ಎಲ್ಲಾ ವಾಚಕರಿಗೆ ಮನಃಪೂರ್ವಕ ಅಭಿವಂದನೆಗಳು!

ಇದಕ್ಕೆ "ವಿಶೇಷ ಸಂಚಿಕೆ"ಯೆಂದು ಹೆಸರಿಟ್ಟು, ಈ ಸಲ ಇದನ್ನು ಗಣ್ಯ ಲೇಖಕರ ಬರೆಹಗಳಿಂದಲೂ, ಹೆಚ್ಚಿನ ಪ್ರಾಂತ್ಯ ಪರಪ್ರಾಂತ್ಯಗಳ ಜಾಹೀರಾತುಗಳಿಂದಲೂ. ಮತ್ತು ಚಿತ್ರಪಟಗಳಿಂದಲೂ ಕೂಡಿದಷ್ಟು ಮಟ್ಟಿಗೆ ಸುಂದರಗೊಳಿಸಿದ್ದೇವೆ. ಇದರ ಬರೆಹಗಾರರಿಗೂ ಮತ್ತು ಜಾಹೀರಾತುದಾತರಿಗೂ ವಿನಯಪೂರ್ವಕ ಅಭಿವಂದನೆಗಳು!

ಕೊನೆಯದಾಗಿ, ಈ ವರ್ಷದಲ್ಲಿ ನಮ್ಮ ಪೋಷಕ—ಆಶ್ರಯದಾತರಾಗಿ ನಮಗೆ ತಮ್ಮ ಅಮೂಲ್ಯ ವರಗಳನ್ನು ಕೊಟ್ಟಿರುವ, ಕೊಡಲಿರುವ, ಸರ್ವ ಮಹಾಶಯರುಗಳಿಗೆ ನಮ್ಮ ಹೃತ್ಪೂರ್ವಕ ಅಭಿವಂದನೆಗಳು!

ಇಂತಿ ಸಜ್ಜನ ವಿಧೇಯರು,

ತಾ. ೧–೬–'೩೩

ಸಂಪಾದಕರು.

‘ಸಿರಿಗನ್ನಡಂಗೆಲ್ಗೆ’

ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು

,,ಆಹಾ! ನಮ್ಮ ಭೂಮಿಯಲ್ಲಿ ಪತಿತರಿಗಾಗಿ ಕೊರಗುವವರಿಲ್ಲವಲ್ಲ! ಬಡವರಿಗಾಗಿ, ಕಂಗಾಲಾದವರಿಗಾಗಿ ಮರುಗುವವರಿಲ್ಲವಲ್ಲ! ಯಾರು ರಾಷ್ಟ್ರದ ಬೆನ್ನೆಲುಬಿನಂತಿರುವರೋ, ಯಾರ ಒಂದು ದಿನದ ಮುಷ್ಕರವು ಪಟ್ಟಣದಲ್ಲಿ ಕ್ಷೋಭೆಯನ್ನುಂಟುಮಾಡುತ್ತದೋ, ಅಂಥವರ ಮೇಲೆ ಸಹಾನುಭೂತಿದೋರುವವರು ನಮ್ಮ ದೇಶದಲ್ಲಾರಿರುವರು?''

ಸ್ವಾಮಿ ವಿವೇಕಾನಂದ



ವಿದ್ವಾನ್ ಕಡೆಂಗೋಡ್ಲು ಶಂಕರ ಭಟ್ಟರು

ದಿವಂಗತ ಶ್ರೀ ವಡೇರಬೆಟ್ಟು ಶ್ರೀನಿವಾಸ ಕಾಮತರು

ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು



ಸಂಪುಟ ೨ ಜುಲಾಯಿ, ೧೯೩೩. ಸಂಚಿಕೆ ೧

ಶುಭಸಂದೇಶ.

(ಕವಿಗಳು:—ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು.)

ಬಡವರ ಕಷ್ಟಂಗಳ ತಿಳಿ ।
ದೊಡನವುಗಳ ನೀಗಿಸಲ್ಕೆ ಘನ ಸೂಚನೆಯಂ ॥
ಕೊಡುತಂ-ಸಾಹಸ ಪಡುತಂ ।
ಬಡ ಜನಹಿತನೆನಿಸಿ ಬಾಳು-ಬಡವರ ಬಂಧೋ! ॥ ೧ ॥

ಧನಿಕರ್ ಹಲವರ್ ಬಡವರ ।
ಕುಣಿಸುವರಕಟಕಟ ಮನಕೆ ಬಂದಂದದೊಳಾ ॥
ಗುಣಮುಂ ತೊಲ್ಗಿಸಿ ತಮ್ಮಾ ।
ಮನಮಂ ಸರಿಗೊಳಿಸುತಿರಲಿ-ಬಡವರ ಬಂಧೋ! ॥ ೨ ॥

ಆರ್ಯಸನಾತನ ಧರ್ಮಾ ।
ಚಾರ್ಯರ್ ತಾವೆಂದು ಕೆಲರು ಬಡ ಹರಿಜನರಂ ॥
ಕ್ರೌರ್ಯಕಲಾಪದೆ ಬಳಲಿಪ ।
ಕಾರ್ಯಕ್ಕಳಿಗಾಲವಿರಲಿ-ಬಡವರ ಬಂಧೋ! ॥ ೩ ॥

ರಾಜಂ ದುಶ್ಯಾಸನದಿಂ ।
ದೀ ಜಗವಾಳ್ವಾ ಪ್ರಚಂಡ ರೀತಿಯನುಳಿದಾ ॥
ರಾಜಂ ಪ್ರಜಾನುರಂಜನ ।
ತೇಜಂ ತಾನೆನಿಸಿಕೊಳಲಿ-ಬಡವರ ಬಂಧೋ! ॥ ೪ ॥

ವಿಶ್ವೇಶ್ವನ ಬಲದಿಂದೀ ।
ವಿಶ್ವಜಗತ್ತಿಹುದು-ವಿಶ್ವಮಾನವರಿದರೊಳ್ ॥
ವಿಶ್ವಸ್ವಾತಂತ್ರ್ಯಾರ್ಹರ್ ।
ದಾಸ್ಯಕೆ ಬಲಿಯಾಗದಿರಲಿ-ಬಡವರ ಬಂಧೋ! ॥ ೫ ॥


ಬಡವರ ಬಂಧು ಮಹಾತ್ಮರ್ ।
ಪೊಡವಿಯನುದ್ಧರಿಸಿ ಲೋಕಹಿತಮಂ ಗೈವರ್ ॥
ಸಡಗರದೊಳವರ ಪಥದಲಿ ।
ನಡೆಯುಲಿ ಧರೆ ಬೆಳಗುತಿರಲಿ-ಬಡವರ ಬಂಧೋ! ॥ ೬ ॥

ಶ್ರೀಶಂ ಶ್ರಿತಜನ ಸುಖಸಂ ।
ತೋಷಂ ಗೌರೀಶನಮಿತ ದುರಿತ ವಿನಾಶಂ ॥
ಕ್ಲೇಶಹರಂ ವಾಣೀಶಂ ।
ಪೋಷಿಸಲನುಗಾಲ-ನಿನ್ನ-ಬಡವರ-ಬಂಧೋ! ॥ ೭ ॥

P. L. Puninchattaya.

ಎರಡನೆಯ ಜನ್ಮದಿನ.

ಲೇಖಕರು—ಶ್ರೀ ಎಮ್. ಎನ್. ಕಾಮತ್, ಮಂಗಳೂರು



ಹೊಳೇ ದಡದ ಬಳಿಯ ಹಳೆಯ ಹರಿ ದೇವಾಲಯವನ್ನು, ಹೊಳೆ ನೀರಂತೆ ಧಾರಾಳವಾಗಿ ಧನ ವ್ಯಯಿಸಿ, ಪ್ರಶಸ್ತವಾಗುವಂತೆ ರೂಪಾಂತರಗೊಳಿಸಿದವರು ರಾಜಮಾನ್ಯ ಮೊಕ್ತೇಸರರು. ಇಂದೇ ಹೊಸ ಪ್ರತಿಷ್ಠೆಯಾಗಿದೆ; ಆ ಹರಿದೇವಾಲಯಕ್ಕೆ ಇಂದೇ ಎರಡನೆಯ ಜನ್ಮದಿನ. ಸುತ್ತಲಿನ ಭಕ್ತಮಂಡಲಿಯಲ್ಲಿ ತೀರ್ಥಸ್ನಾನ, ದೇವದರ್ಶನ ಮೊದಲಾದ ಪುಣ್ಯಕಾರ್ಯಗಳನ್ನು ಮಾಡಲು ನೆರೆದೇ ಇದೆ. ಭಕ್ತರೆಲ್ಲ ಮೊಕ್ತೇಸರರಲ್ಲೇ ಹೆಚ್ಚಿನ ಆದರವನ್ನಿಟ್ಟಿದ್ದಾರಾದರೂ, ಕೆಲವು ಭಜಕರು ಮಾತ್ರ 'ಹೇಗೋ ಹಾಗೆ ಗಳಿಸಿದ ಹಣ, ಹೀಗೆ ಖರ್ಚು ಮಾಡಿ ಪ್ರಾಯಶ್ಚಿತ್ತ ಮಾಡಿದ್ದಾರೆ' ಎಂದು ಮೊಕ್ತೇಸರರನ್ನು ಪಿಸುಮಾತಿನಲ್ಲಿ ನಿಂದಿಸುತಿದ್ದಾರೆ. ಋಷಿಗಳ ಕುಲವನ್ನೂ ಸಂಪತ್ತಿನ ಮೂಲವನ್ನೂ ಶೋಧಿಸುವುದು, ಈ ಪುಣ್ಯತೀರ್ಥದ ಮೂಲವನ್ನೂ ಶೋಧಿಸ ಹೋಗುವಷ್ಟೆ ಕೆಡುಕಿನದೆಂದು ಅವರಿಗೇನು ಗೊತ್ತು? ಇರಲಿ, ಸಾರ್ವಜನಿಕವಾದ ದೇವಾಲಯವನ್ನು ಸ್ವಾರ್ಜಿತ ಸಂಪತ್ತಿನಿಂದ ಜೀರ್ಣೋದ್ಧಾರ ಮಾಡಿರುವ ಮೊಕ್ತೇಸರರು ಮಾತ್ರ, ತನ್ನ ಮನೆಯೆಂದೇ ಒಂದು ವೇಳೆ ಭಾವಿಸಿದ್ದರೂ ಅಂದು ಅನ್ಯಾಯವೆನಿಸುತಿರಲಿಲ್ಲ.

ಈ ಜನಸ್ತೋಮವು ಅತ್ಯಾದರದಿಂದ ಕಾಣುತಿದ್ದ ಮತ್ತೊಬ್ಬನೂ ಅಲ್ಲಿದ್ದನು. ಅವನ ಹೆಸರು ವಿಠೂ; ಜಾತಿಯಲ್ಲಿ ಹೊಲೆಯ, ಊರ ಹೊರಗಿನವ. ಅವನ ಜಾತಿಯ ಸಮಸ್ತರು ಅವನಲ್ಲಿ ವಿಶೇಷ ಶ್ರದ್ಧೆಯನ್ನಿಟ್ಟಿದ್ದರು. ಅವನ ಉಪದೇಶದ ಫಲವಾಗಿ ಅವರೀಗ ಮದ್ಯವನ್ನು ಮುಟ್ಟುವುದಂತಿರಲಿ; ಅದರ ವಾಸನೆಯನ್ನೂ ಸಹಿಸರು. ಅವನವರು ಊರಲ್ಲಿ ಯಾರೂ ಇದ್ದಿಲ್ಲ; ಆದರೆ, ಊರವರಲ್ಲಿ ಅವನ ವಿಶೇಷ ಚರಿತ್ರೆಗಾಗಿ ಶ್ರದ್ಧೆಯಿದ್ದಿತು. ಅವನ ಹಸ್ತಕೌಶಲವನ್ನು ನೋಡಿ, ಕಲೆಕ್ಟರ ಸಾಹೇಬರೂ ಅವನನ್ನು ಹೊಗಳಿದ್ದರು. ಮೊಕ್ತೇಸರರೂ ಅವನಲ್ಲಿ ವಾತ್ಸಲ್ಯವನ್ನಿಟ್ಟಿದ್ದರೆಂದು ಎಲ್ಲರೂ ತಿಳಿದಿದ್ದರು. ಅದಕ್ಕಾಗಿ, ಸಂಧ್ಯಾಕಾಲದಲ್ಲಿ ವಿಗ್ರಹದ ಮುಂದೆ ದೀಪಮಾಲೆಯನ್ನು ಬೆಳಗಿಸಿದೊಡನೆ, ದೇವಾಲಯದಿಂದ ಇಪ್ಪತ್ತು ಮಾರು ದೂರದಿಂದ ಅವನು ವಿಗ್ರಹವನ್ನು ನಮಸ್ಕರಿಸುವಾಗ ಯಾರೂ ಆಕ್ಷೇಪಿಸುತ್ತಿರಲಿಲ್ಲ. ಪುರೋಹಿತರು ಅಷ್ಟು ದೂರದಿಂದ ಒಮ್ಮೆ ಅವನನ್ನು ಕಂಡು ನಕ್ಕರೆ, ತಾನು ಕೃತಕೃತ್ಯನಾದೆನೆಂದು ಅವನು ಹಿಗ್ಗಿಕೊಳ್ಳುತಿದ್ದನು. ಇಂದು ಮಾತ್ರ ಅವನು "ದೇವರೇ ನನ್ನನ್ನು ಇತ್ತ ಕರೆದಿರುವನು. ಒಳಕ್ಕೆ ಬಂದು ದರ್ಶನ ತೆಗೆದುಕೊಳ್ಳೆಂದು ಆತನ ಆಜ್ಞೆಯಾಗಿದೆ!' ಎಂದು ಅವನು ಧ್ವಜಸ್ತಂಭದ ಬಳಿಯಲ್ಲೇ ಸುಮ್ಮನೆ ಮೌನವಾಗಿ, ಧೀರನಾಗಿ, ಶಾಂತನಾಗಿ ಕುಳಿತಿದ್ದನು. ಪ್ರತಿಷ್ಠೆಯ ಉತ್ಸವಕ್ಕಾಗಿ ನೆರೆದವರೆಲ್ಲರು "ಇಂದೀಗ ಇವನಿಗೆ ಹುಚ್ಚು ಹಿಡಿದಿದೆ!" ಎಂದಷ್ಟೆ ಅಭಿಪ್ರಾಯ ಹೇಳುತಿದ್ದರು. ದೇವರನ್ನು ಕಾಣ ಹೋಗುವವರು ಅವನನ್ನು ನೋಡಿ ಮುಂದರಿವರು; ಹಿಂದಿರುಗುವವರೂ ಅವನ ಬಳಿಯಿಂದಲೇ ನಡೆವರು; ಹೋಗುತ್ತಲೂ ಬರುತ್ತಲೂ ಇವನ ಚರ್ಯೆಯ ವಿಚಾರಗಳೇ ಅವರೆಲ್ಲರ ಅಂತರಂಗವನ್ನು ತುಂಬಿ, ದೇವರ ಬಳಿಯಲ್ಲಿ ನಿಂತಾಗಲೂ ಇತರ ವಿಷಯವೇ ಅವರಿಗೆ ಕಾಣಿಸದಿದ್ದು, ಹಿಂದಿರುಗುವಾಗಲೂ ಅದನ್ನೇ ಚಿಂತಿಸಿ ವಾದವಿವಾದ ನಡೆಸುತ್ತಿದ್ದರು. ಅವನ ಪರಿಚಿತಿಯಿಲ್ಲದ ಸಾವಿರಾರು ಹಳ್ಳಿಗರು ಈ ವಿಚಿತ್ರ ಲೀಲೆಯನ್ನು ದೂರದಿಂದ ಸುತ್ತುಗಟ್ಟಿ ನೋಡುತಿದ್ದರು. ಅವನ ಜಾತಿ ಬಂಧುಗಳು ಅವನಿಗೆ ಆಹಾರವಸ್ತುಗಳನ್ನು ತಂದುಕೊಟ್ಟರೂ ಅವನವುಗಳನ್ನು ನೋಡದೆ, "ತನ್ನ ಚರಣಗಳ ಕಡೆಗೆ ದೇವರು ನನ್ನನ್ನು ಕರೆಯಿಸಿಕೊಂಡಿರುವನು. ತನ್ನ ಅಪ್ಪಣೆಯನ್ನು ಆತನೆ ಪಾಲಿಸಿಕೊಳ್ಳಲು ಶಕ್ತನು" ಎಂದು ಹೇಳುತಿದ್ದನು. ಮೊಕ್ತೇಸರರು ಅವನ ಉಪವಾಸವ್ರತವನ್ನು ಕಂಡು, ಅವನಲ್ಲಿ ದಯಾಭಾವದಿಂದ ಇದ್ದರಾದರೂ, ಮುಂದೇನೂ ಮಾಡಲಾರದಾದರು. ವಿಠೂ ಇಷ್ಟರಲ್ಲೇ ಧ್ಯಾನಮಗ್ನನಾಗಿ ದೇಹಭಾವ ಮರೆತಿದ್ದನೆಂಬಂತೆ ತೋರಲು, ಪುರೋಹಿತರನ್ನು ಕುರಿತು "ಇನ್ನೇನು ಮಾಡೋಣ" ಎಂದು ಮೊಕ್ತೇಸರರು ಕೇಳಿದರೂ, ವೇದಮೂರ್ತಿಯವರು ಮಾರ್ನುಡಿಯದೆ "ಹೂಂ!" ಎಂದು ಸಿಟ್ಟು ತಿರಸ್ಕಾರಗಳಿಂದ ಹೂಂಕರಿಸಿ, ಕೊನೆಗೆ ನಕ್ಕರು!

ಪ್ರತಿಷ್ಠೆಯುತ್ಸವವು ಐದು ದಿನ. ಮೂರು ದಿನಗಳ ವಿಧಿ ಮುಗಿಯಿತು. ಆದರೂ ವಿಠೂ ಅಲ್ಲಿಯೇ ಇದ್ದು, ನಿರಾಹಾರಿಯಾಗಿ ಧ್ಯಾನಮಗ್ನಮುದ್ರೆಯಿಂದ ಇದ್ದನು. ಅದುವರೆಗೆ ಎಷ್ಟೋ ಜನರು ಅವನನ್ನು ಬೆದರಿಸಿ, ಬೋಧಿಸಿ, ಪ್ರೀತಿಸಿ, ಬೇಡಿ, ಕಾಡಿ, ಅಲ್ಲಿಂದ ಎದ್ದೇಳೆಂದರೆ ಅವನ ಉತ್ತರ ಒಂದೇ— ದೇವರೇ ಚರಣದರ್ಶನಕ್ಕಾಗಿ ಕರೆಯಿಸಿಕೊಂಡಿರುವನು, ಅವನು ಅಪ್ಪಣೆ ಕೊಟ್ಟರೆ ಹೋಗುವೆನು. ಮೂರನೆ ಉತ್ಸವದ ರಾತ್ರಿಯಲ್ಲಿ, ಪುರೋಹಿತನು ಬೀಗಮುದ್ರೆ ಹಾಕಿ ಮನೆಗೆ ಮರಳುವಾಗ,– "ವಿಠೂ, ಯುಗಾಂತ್ಯದ ವರೆಗೆ ಪ್ರಳಯಕಾಲದ ವರೆಗೆ ನೀನಿಲ್ಲೇ ಹಟ ಹಿಡಿದು ಕೂತರೂ, ಯಾವನೊಬ್ಬನು ನಿನ್ನನ್ನು ಒಳಹೋಗ ಬಿಡಲಾರನು" ಎಂದು ಸೂಚಿಸಿದಾಗ, ವಿಠೂವು "ಮನುಷ್ಯರಿಗೆ ಅದೆಲ್ಲವು ಅಸಾಧ್ಯವಾಗಿರಬಹುದು. ಏನು ಮಾಡುವೆನು? ದೇವರೇ ಮನುಷ್ಯನಿಗಿಂತ ಶ್ರೇಷ್ಠನಲ್ಲವೆ? ಅವನೇ ಬಲ್ಲ" ನೆಂದನು.

ಅಂದಿನ ಸಂಜೆ ಮೋಡ ಕಟ್ಟಿದ್ದಿತು; ಬಿರುಗಾಳಿಯೂ ಇದ್ದಿತು. ಜಡಿಮಳೆ ಸುರಿಯುವ ಮೊದಲೇ ಪಲಾಯನವು ಉತ್ತಮವೆಂದು, ಉತ್ಸವಾದಿಗಳನ್ನು ಬೇಗಬೇಗನೆ ಮುಗಿಸಿ ಮನೆಗೆ ಪ್ರಸಾದದೊಡನೆ ತೆರಳಿದ್ದರು. ಹತ್ತು ಗಳಿಗೆ ರಾತ್ರಿಗೆ ಗುಡುಗು ಮಿಂಚುಗಳೊಡನೆ ಜಡಿಮಳೆ ಸುರಿಯಿತು. ಬರಗಾಲದ ಭೀಕರ ತೃಷೆಯಿಂದ ಬಾಯಿಬಿಟ್ಟ ನೆಲವು ಮಳೆನೀರನ್ನು ಗಳಗಳನೆ ಕುಡಿಯುತ್ತಲೇ ಇದ್ದಿತು. ಬೆಳಗ್ಗಿನ ವರೆಗೆ ಮಳೆ ಸುರಿದರೂ ಒಂದಿಷ್ಟು ಮಾತ್ರ ಹಸಿಮನೆಯಾಗಿ ಮುಗಿದಂತೆ ತೋರುತಿತ್ತು. ನಾಲ್ಕನೆ ದಿನದ ಉತ್ಸವಕ್ಕೆ ಪ್ರಾರಂಭವಾಗುವ ಮೊದಲೇ ಮೋಡಗಳ ಮುಸುಕು ಇನ್ನಷ್ಟು ದಪ್ಪವಾಗಿ ಸೂರ್ಯನನ್ನೆ ಮರೆಯಲ್ಲಿರಿಸಿ, ಸೂರ್ಯನು ನಡುನೆತ್ತಿಗೇರುವ ತನಕವೂ ಬೆಳಗಾಗುತ್ತಲಿದೆಯೋ ಎಂಬಷ್ಟು ಮಾತ್ರ ಬೆಳಕು ಹರಿಯು

ಗೊಡುತಿದ್ದಿತು. ಮಳೆಯಂತೂ ಇನ್ನಷ್ಟು ಬಲವಾಗಿ ಸುರಿಯ ತೊಡಗಿ, ಅಲ್ಲಲ್ಲಿ ಹಳ್ಳಗಳು ತುಂಬಿದುವು. ತೋಡುಗಳು ತುಂಬಿದುವು. ಕೆರೆಗಳು ತುಂಬಿದುವು. ಒಂದು ಮಾರು ಅಗಲವಾಗಿ ಹರಿಯುತಿದ್ದ ಹೊಳೆಯು ಎರಡೂ ದಡಗಳ ಕಡೆಗೆ ಹರಡಲೆತ್ನಿಸಿತು. ಸಂಜೆಯೊಳಗೆ ದಡ ಮೀರಿ ನೀರೆದ್ದು ಊರಲ್ಲಿ ಎರಡಡಿ ಎತ್ತರಕ್ಕೆ ನಿಂತಿತು. ಉತ್ಸವವಾಗದೆ ಉಳಿಯಿತು. ಪರವೂರಿನಿಂದ ಬಂದವರು ಬೆಳಗ್ಗೆಯೇ ಹಿಂತೆರಳಿದ್ದರು. ಊರವರು ಮೆಲ್ಲನೆ ಪೊಡವೆವಸ್ತುಗಳನ್ನು ನೆರೆ ಬಂದರೆ ಉಳಿಸಿಕೊಳ್ಳುವುದಕ್ಕೆಂದು ಕಟ್ಟಿಟ್ಟರು. ಸಂಜೆಯಾಗುವುದರೊಳಗೆ ಮನೆಮನೆಗಳನ್ನು ನೀರು ಬಳಸಿ ಒಳಕ್ಕೂ ಹರಿಯಿತು. ವಿಠೂ ಕೂತಲ್ಲೇ: ತಲೆಮಾತ್ರ ನೀರಮೇಲೆ ಕಾಣುತಿತ್ತು. ಹೊಲೆಯರೆಲ್ಲ ಅವನನ್ನು ಬಳಸಿ ನಿಂದು ಬೇಡಿದರು, ಎತ್ತಿ ನಡೆವೆವೆಂದರು. ಅದೂ ವ್ಯರ್ಥವಾಯಿತು. ಗುಡಿಯೊಳಗೆಲ್ಲ ನೀರು ನಿಂತಿದ್ದು, ಮೊಳದೆತ್ತರಕ್ಕೆ ಏರಿಯೇ ಇದ್ದಿತು. ವಿಠೂವನ್ನು, ಅವನ ಹಟಕ್ಕೆ ಮರುಗಿದವರಲ್ಲಿ, ದಯೆಯಿಂದ ಕಂಡವರು ನೂರಾರು; ಅವನ ವಿಷಯ ಪಟೇಲರಾದಿಯರಿಗೆ ತಿಳಿಸಿ, ಬಲಾತ್ಕಾರದಿಂದ ಸರಕಾರವೇ ಓಡಿಸಲೆಂದು ದೂರು ಕೊಡಬೇಕೆಂದವರು ನೂರಾರು. ಮಳೆ ಇನ್ನೂ ಜಡಿಯುತ್ತಲಿದ್ದ ಕಾರಣ, ದೂರು ಕೊಡುವುದಕ್ಕೆ ಓಡುವ ಬದಲು, ಮನೆಗಳ ಸೊತ್ತನ್ನು ಉಳಿಸಿಕೊಂಡು, ಊರ ಹೊರಗಣ ಮನೆಯ ಪ್ರದೇಶಕ್ಕೆ ಓಡೋಣವೆಂದು ಎಲ್ಲರೂ ಓಡಿದರು. ಹಿಂದುಳಿದವರೆಂದರೆ ದೇವಾಲಯದ ದೇವರು; ದೇವಾಲಯದ ಹೊರಗೆ ವಿಠೂ, ಇವರಿಬ್ಬರಗೊಡವೆ ಯಾರಿಗೂ ಇನ್ನಿಲ್ಲ. ಅಂತು, ಊರ ಜನರು ಸೊತ್ತುಗಳೊಡನೆ ಊರ ಹೊರಕ್ಕೆ ತೆರಳಿ, ಅಲ್ಲಿನ ಹೊಲೆಬೀಡಿನಲ್ಲೇ ಇಳಿದುಕೊಂಡರು. ಸುಮ್ಮನೆ ಹಾಗೆ ಮಾಡಿದರೇ? ಜಾತಿಯ ಮಾತನ್ನು ಎಲ್ಲರೂ ಮರೆತರು. ಜೀವ ಉಳಿಸಬೇಕು, ಧನ ಉಳಿಯಬೇಕು, ಅಷ್ಟೆ. ಅದಕ್ಕಾಗಿ ಹೊಲೆಯರ ಗುಡಿಗಳಲ್ಲೇ ನುಗ್ಗಿ ಆಕ್ಷೇಪವೆತ್ತದೆ ಬದುಕಿಕೊಂಡರು. ಆಪದ್ಧರ್ಮ!

* * * * * * *

ಐದನೆ ದಿನದ ವರೆಗೂ ಎಡೆಬಿಡದೆ ಮಳೆಯೇ, ಮೋಡವೇ ಆಗಾಗ ಸಿಡಿಲೇ. ದಿಣ್ಣೆಯ ಹೊಲಗೇರಿಯಲ್ಲಾದರೂ ಇರುವವರಿಗೆ ಕಣ್ಣೆದುರು ಕಾಣಿಸುತಿದ್ದುದೆಲ್ಲ ಜಲಮಗ್ನವಾಗಿಯೇ ಇದ್ದು, ಆ ರಭಸದಿಂದೋಡುವ ನೆರೆಯ ಪ್ರವಾಹದಲ್ಲಿ ತೇಲಿಕೊಂಡು ಕೊಚ್ಚಿಕೊಂಡು ಹೋಗುತಿದ್ದ ಜಾನುವಾರುಗಳೆಷ್ಟು, ಮನೆಮಾಡುಗಳೆಷ್ಟು, ಮರಗಳೆಷ್ಟು, ಕ್ಷಣಕ್ಷಣಕ್ಕೂ ಗೋಚರವಾಗುತಿದ್ದುವು! ಪ್ರಲಯವೇ ಏನು?

ನೆರೆ ಮೀರಿತು. ಇನ್ನೇನು? ಗಾಳಿಯಿಲ್ಲ, ಮೋಡವಿಲ್ಲ, ಮಳೆಯಿಲ್ಲ, ಎಲ್ಲ ಶಾಂತವಾಯಿತು. ಸಂಧ್ಯಾಕಾಲಕ್ಕೆ ಊರ ಕೆಳಗೆ ಮೂರು ಮೈಲು ದೂರದಲ್ಲಿ ನದಿಗೆ ಅಡ್ಡವಾಗಿದ್ದ ನಾಯಕರ ಕಾಲದ ಅಣೆಕಟ್ಟು ಒಡೆಯಿತು. ನಂತರ ಬಲು ಬೇಗನೆ ನೀರಿಳಿಯಿತು. ಮರುದಿನ ಬೆಳಗಾಗುವಾಗ, ಇಷ್ಟು ದಿನಗಳ ಕ್ಲೇಶವನ್ನು ಅನುಭವಿಸಿದ ಪ್ರವಾಸಿಗಳಿಗೆ ಅದೊಂದು ಹೊಸ ಯುಗದ ಹೊಸ ಸೃಷ್ಟಿಯ ಯುಗಾದಿಯ ಅರುಣೋದಯವಾದಂತೆ ಅನುಭವಕ್ಕೆ ಬಂದಿತು.

ಸರಿ, ಇನ್ನೆಲ್ಲರೂ ಊರಿಂದ ಗಂಟುಮೂಟೆ ಕಟ್ಟಿಕೊಂಡು ಹೊಲಗೇರಿಗೆ ಹೋದಂತೆ, ಸ್ವಗೃಹಾಭಿಮುಖವಾಗಿ ಹಿಂತೆರಳಿದರು. ಜತೆಯಲ್ಲಿ ಹೊಲೆಯರೂ ಬಂದರು. ಅಲ್ಲಿದ್ದಾಗ, ಒಂದಾಗಿ ಬೀಡುಗಳಲ್ಲಿದ್ದರಾದರೂ, ಈಗ ಜಾತಿ ಪಂಗಡಗಳಾಗಿ ನಡೆದುಬರುತಿದ್ದ ಕಾರಣ, ಹೊಲೆಯರು ಎಂದಿನಂತೆ ಬಲು ಹಿಂದೆ, ಬಲು ದೂರ, ಬೆಳಗ್ಗಿನ ನೆರಳಷ್ಟು ದೂರವಾಗಿಯೆ ಹಿಂದೆ ಬರುತಿದ್ದರು.

ದೇವಾಲಯದ ಬಳಿಗೆ ನೆಲದ ಮೇಲೆಲ್ಲ ನಾಲ್ಕಂಗುಲ ಕೆಸರು ಮಣ್ಣು ಒದ್ದೆಯಾಗಿ ಹರಡಿದ್ದಿತು. ಪುರೋಹಿತರು, ಇಷ್ಟು ದಿನ ಮರೆತಿದ್ದ ಆ ದೇವರೇನು ಮಾಡುತ್ತಿರುವರೆಂದು ನೋಡಲು, ಕೆಸರಲ್ಲಿ ಜಾರಿ ಬೀಳದಂತೆ ಜಾಗ್ರತೆಯಾಗಿ ಮುನ್ನಡೆದರು. ಹೊರ ಗೋಡೆಗಳು ಕುಸಿದು ಬಿದ್ದುದರಿಂದ, ದೇವಾಲಯದ ದ್ವಾರವು ತಾನಾಗಿ ಬಿದ್ದಿದೆ. ನೀರು ಒಳಕ್ಕೆ ದೇವರ ಬಳಿಗೂ ನಡೆದಿದೆ.. ಎಲ್ಲಿಯ ತನಕ, ದೇವರ ಚರಣಗಳನ್ನು ಮೀಯಿಸಿಯದೆ. ಅಲ್ಲೇ ಬಿದ್ದುಕೊಂಡಿರುವುದೇನು?

ಪುರೋಹಿತರಿಗೆ ದಿಗಿಲುಂಟಾಯಿತು. ಹೊರಕ್ಕೆ ಬಂದು ಊರವರನ್ನು ಕರೆಯಿಸಿದರು. ದೇವರ ಪರಿಯನ್ನು ತೋರಿಸಿದರು, ಮೊಕ್ತೇಸರರು ಮತ್ತೇನು ಮಾಡುವರು? ಅವರೂ ಚಕಿತರಾದರು.


ಅತ್ತ ವಿಠೂ ಏನಾದನೆಂದು ನೋಡಲು, ಹೊಲೆಯರು ಬಂದಿದ್ದರು. ಅವರು ಸುದೂರದಿಂದ ದೇವಾಲಯದೊಳಗೆ ನೋಡುವಾಗ ವಿಠೂವಿನ ಕಳೇಬರವು ದೇವರ ಶ್ರೀ ಚರಣಸನ್ನಿಧಿಯಲ್ಲಿ ಕೈಜೋಡಿಸಿ ಸಾಷ್ಟಾಂಗವಾಗಿ ಬಿದ್ದುಕೊಂಡಿದೆ. ದೇವರ ಹೂಮಾಲೆಗಳೆಲ್ಲವನ್ನು ಹಿಂದೆ ಹರಿದ ನೆರೆಯ ನೀರು, ವಿಠೂವಿನ ಕಳೇಬರದ ಮೇಲೆ ರಾಶಿ ಹಾಕಿಟ್ಟಿದೆ.

ಪ್ರಲಯವಾದುದೂ ನಿಜ. ಇಷ್ಟು ದಿನಗಳ ದುಃಖಜೀವನವು ಮುಗಿದು ಜನಗಳಿಗೆ ಹೊಸ ಯುಗವು ಮೂಡಿದಂತಾದುದೂ ನಿಜ. ದೇವರು ದರ್ಶನಕ್ಕಾಗಿ ವಿಠೂವನ್ನು ತನ್ನ ಬಳಿಗೆ ಕರೆಸಿಕೊಂಡನು, ದರ್ಶನ ಮುಗಿದ ಬಳಿಕ, ಸ್ವರ್ಗಸ್ಥನಾದ ಅವನ ಉತ್ಸವವಾದರೂ,— ಅವನ ಈ ಜನ್ಮದ ಕೊನೆಯ ಮತ್ತು ದೇವರ ಪ್ರತಿಷ್ಠೆಯುತ್ಸವಗಳಲ್ಲಿ ಉಳಿದ, ಉತ್ಸವವನ್ನು ಮಾಡುವುದಕ್ಕೆ ಅವನನ್ನೆತ್ತಿ ಹೊರ ತರುವವರಾರು?

ಮೊಕ್ತೇಸರರನ್ನು ಕುರಿತು, ದುಃಖಪೂರ್ಣ ವಿನಯದಿಂದ, ಹೊಲೆಯರ ಗೊತ್ತುಗಾರನು,—ವಿಠೂವಿನ ಹೆಣವನ್ನು ಹೊರಕ್ಕೆ ತರಿಸಿ ನಮಗೆ ಕೊಡಿಸಿ ಮಾನ ಕಾಪಾಡಿ ಕೊಡಬೇಕು, ಎಂದು (ಸಾಷ್ಟಾಂಗ ವಂದಿಸಿ) ಅಡ್ಡಬಿದ್ದನು.

‘‘ದೇವರೇ ನಿಮಗಿಲ್ಲಿ ಪ್ರವೇಶವನ್ನು ತಾನಾಗಿ ಕೊಟ್ಟಿರುವಾಗ, ಅದನ್ನು ನಿಷೇಧಿಸುವುದಕ್ಕೆ ನಾವ್ಯಾರು? ನಮಗೆಲ್ಲಿಯ ಅಧಿಕಾರ?’’ ಎಂದರು ಮೊಕ್ತೇಸರರು.

ನೆರೆದ ಊರ ಜನಸ್ತೋಮವು ಉಸಿರು ತಡೆದುಕೊಂಡಿತು. ಪುನರುದ್ಧಾರ ಹೊಂದಿದ ಆ ಹರಿದೇವಾಲಯವು, ವಿಠೂಮಹಾರನ ದೇವಾಲಯವಾಗಿ, ಪ್ರಲಯದ ನಂತರ ನವಯುಗಾದಿಯ ದಿನ, ಹರಿಜನರಿಗೆ ನಿರಾತಂಕವಾದ ಪ್ರವೇಶ–ಪೂಜಾದಿಗಳಿಗೂ ಚಿರಸ್ಮಾರಕವಾಗಿ ಉಳಿಯಿತು. ಅದೇ ಹರಿದೇವಾಲಯದ **ಎರಡನೆ ಜನ್ಮದಿನದ** ಉತ್ಸವದ ಉಂಬಳಿ.



ಶ್ರೀ ರಾಮ ಸಹಾಯಂ.

ಬಡವರ ಮಕ್ಕಳು.

ಲೇಖಕರು—ಶ್ರೀ. ಎಮ್. ರಾಮರಾವ್, ಸಂಪಾದಕ, "ಸುಬೋಧ" ಬೆಂಗಳೂರು

"ಬಡವರ ಬಂಧು" ಪತ್ರಿಕಾಕರ್ತರು, ತಮ್ಮ ವಿಶೇಷ ಸಂಚಿಕೆಗೊಂದು ಲೇಖನವನ್ನು ಕಳುಹಿಸಬೇಕೆಂದು ಬಹು ದಿನಗಳ ಹಿಂದೆಯೆ ವಿಜ್ಞಾಪಿಸಿದ್ದರು—ಅಲ್ಲಲ್ಲ-ಅಜ್ಞಾಪಿಸಿದ್ದರು. ಬರೆದು ಕಳುಹಿಸಬೇಕೆಂದು ಅನೇಕ ಸಾರಿ ಯೋಚಿಸಿಕೊಂಡೆನಾದರೂ, ಕುಳಿತು, ಬರೆದು ಸಕಾಲಕ್ಕೆ ಕಳುಹಿಸಲು ಏಕೋ ಸಾಧ್ಯವಾಗಲಿಲ್ಲ. ಈ ದಿನ-'ಅವಧಿ ಮೀರಿ ಹೋಗುತ್ತದೆ. ಶೀಘ್ರವಾಗಿ ಕಳುಹಿಸಬೇಕು' ಎಂದು ಒಂದು 'ನೋಟೀಸು' (ಕಾರ್ಡು) ತಲ್ಪಿತು. ಇನ್ನು ಸಾವಕಾಶ ಮಾಡುವುದು ಉಚಿತವಲ್ಲವೆಂದು ಬರೆಯಲು ಕುಳಿತದ್ದಾಯಿತು. ಆದರೆ ಯಾವ ವಿಚಾರವನ್ನು ಕುರಿತು ಬರೆಯಲಿ? ಬಹಳ ಯೋಚಿಸಿದ್ದಾಯಿತು. 'ಬಡವರ ಬಂಧು'ವಿಗೆ ಬರೆವ ಲೇಖನವು ಬಡವರಿಗೆ ಸಂಬಂಧಿಸಿದುದಾಗಿರಬೇಕು. ಬಡವರನ್ನು ಕುರಿತು ಮರುಗಿ, ಅವರ ಬಡತನದೊಂದಿಗೆ ಸಹಾನುಭೂತಿ ತೋರಿಸಿ, ಬಡತನದ ಹತಾಶ ಸ್ಥಿತಿಯಿಂದ ಅವರನ್ನು ಮೇಲಕ್ಕೆತ್ತಲು ಅವರಿಗೆ ಉತ್ತೇಜನ ಕೊಡುವಂತಹ ನಾಲ್ಕು ಮಾತುಗಳನ್ನು ಹೇಳುವುದಾಗಿರಬೇಕು—ಎನ್ನಿಸಿತು. ಬಡವರಿಗಾಗಿಯೇ ಜನ್ಮವೆತ್ತಿರುವ ಆ ಪತ್ರಿಕೆಯು ಈ ವಿಚಾರವನ್ನು ಈ ವರೆಗೆ ಚರ್ಚಿಸಿ ಬರೆದಿರಲಿಕ್ಕಿಲ್ಲವೇ? ಆವರೇನು, ಅವೆಲ್ಲವುಗಳೊಂದಿಗೆ ನನ್ನದೂ ಒಂದು ಮಾತಿರಲಿ.

ಲೋಕದಲ್ಲಿ ಬಡತನವನ್ನು ಹೊಗಳುವವರೂ ಇದ್ದಾರೆ ತೆಗಳುವವರೂ ಇದ್ದಾರೆ. ಮನುಷ್ಯನ ಜೀವಿತದಲ್ಲಿ ಐಶ್ವರ್ಯದ ಆವಶ್ಯಕವಿರುವಂತೆ ಬಡತನದ ಆವಶ್ಯಕವಿರುವ ಸ್ಥಿತಿಯೂ ಒಂದು ಬರುವುದು. ಬಡತನವು ತಾನಾಗಿ ನಮಗೆ ಪ್ರಾಪ್ತವಾದಾಗಲೆಲ್ಲ-ನಾವಾಗಿ ಅಪೇಕ್ಷಿಸಿ ಅದು ಬಂದಾಗ ಮನಸ್ಸಿಗೆ ಅತಿ ಹಿತಕರವಾಗಿರುವುದು. ಆದರೆ ಲೋಕಸಾಮಾನ್ಯವಾಗಿ ಬಡತನವನ್ನು ಅಪೇಕ್ಷಿಸಿ ಪಡೆಯುವವರೂ, ಪಡೆದು ಆನಂದಿಸುವವರೂ ಬಹು ಅಪೂರ್ವ! ಹಾಗೆ ಅದನ್ನು ಅಪೇಕ್ಷಿಸಿ ಪಡೆಯುವವರು ಆ ವರೆಗೆ ಅಗಾಧ ಐಶ್ವರ್ಯ ಸುಖಸಂಪತ್ತುಗಳಲ್ಲಿ ಮುಳುಗಿದ್ದವರಾಗಿರಬೇಕು. ಹಾಗಲ್ಲದೆ ಏನೂ ಇಲ್ಲದಿದ್ದ ಜ್ಯೇಷ್ಠಾದೇವಿಯ ಜ್ಯೇಷ್ಠಪುತ್ರನು ತನಗೆ ಬಡತನ ಬರಲೆಂದು ಅಪೇಕ್ಷಿಸಬೇಕಾದ ಕಾರಣವೇನಿದೆ? ಲಕ್ಷ್ಮೀಪುತ್ರನೊಬ್ಬನು ತನಗೆ ಲಭ್ಯವಾಗಿರುವ ಸಕಲ ಐಶ್ವರ್ಯ-ಸುಖಸಾಧನಗಳು ಈ ಎಲ್ಲವನ್ನೂ ತೃಣಕ್ಕಿಂತ ಕಡೆಯಾಗಿ ತ್ಯಜಿಸಿ ಮಿತವಾದ ವಸ್ತುಗಳಲ್ಲೇ ಮನಶ್ಶಾಂತಿ ಹೊಂದಬಲ್ಲವನಾದರೆ ಅವನ ಬಡತನವೂ ಬೆಲೆಯುಳ್ಳದಾಗುವುದು. ಅವನು ತನ್ನ ರಿಕ್ತ ಸ್ಥಿತಿಗಾಗಿ ಆಗ ಮರುಗುವುದಿಲ್ಲ—ಆನಂದಿಸುವನು. ಹತಾಶನಾಗುವುದಿಲ್ಲ—ಹಿರಿ ಹಿರಿ ಹಿಗ್ಗುವನು. ಸ್ವಾರ್ಜಿತವಾದ ನವಕೋಟಿ ಧನವನ್ನೂ ದಾನ ಮಾಡಿ ಬಡತನವೆಂಬ ಭಾಗ್ಯಲಕ್ಷ್ಮಿಯನ್ನು ಬೇಕೆಂದು ಬೇಡಿ ಬರಮಾಡಿಕೊಂಡು ಆನಂದಿಸಿದ ಮಹಾಮಹಿಮರು ನಮ್ಮಲ್ಲೊಬ್ಬರುಂಟು. ಅವರು ಕನ್ನಡಿಗರೆಲ್ಲರಿಗೂ ಪರಿಚಯವಿರುವ ಮಹಾನ್ ವ್ಯಕ್ತಿಗಳು—ಪುರಂದರ ದಾಸರು.

ಮಹಾತ್ಮಾ ಗಾಂಧಿಯವರು ಭಾರತದೇಶಕ್ಕೆ ಕಾಲಿಡುವ ವರೆಗೆ (೧೯೧೫) ನಮ್ಮಲ್ಲಿ 'ಪುರಂದರ ದಾಸರ ಬಡತನ'ವನ್ನು ತುಚ್ಛ ಭಾವದಿಂದ ಕಾಣುತ್ತಿದ್ದುದು ಸ್ವಾಭಾವಿಕವಾಗಿದ್ದಿತು. ಅವನೇನು—ಪುರಂದರ ದಾಸ! ಎಂದರೆ ದಿಕ್ಕುದೆಸೆಯಿಲ್ಲದ ಕಡು ಬಡವ ಎಂದು ಅದರರ್ಥ. ಆದರೆ ಮಹಾತ್ಮರು ಶ್ರೀಮಂತ ಮಾತಾಪಿತೃಗಳ ಉದರ ಸಂಭೂತರಾಗಿದ್ದು, ದಕ್ಷಿಣಾಫ್ರಿಕದಲ್ಲಿ ವರ್ಷವೊಂದಕ್ಕೆ ಲಕ್ಷಾಂತರ ದ್ರವ್ಯ ಸಂಪಾದನೆ ಮಾಡುತ್ತಿದ್ದು ತಮ್ಮ ಸರ್ವಸ್ವವನ್ನೂ ಲೋಕಸೇವೆಗಾಗಿ ಅರ್ಪಿಸಿ, ಬಡತನವನ್ನು ಆಹ್ವಾನ ಕೊಟ್ಟು ಬರಮಾಡಿಕೊಂಡು ಆದರೂ ಮಹನೀಯರೆಂದೂ, ಲೋಕಪೂಜ್ಯರೆಂದೂ ಸರ್ವರಿಂದಲೂ ವಂದನೀಯರಾಗಿದ್ದುದನ್ನು ಕಂಡೊಡನೆಯೇ ನಮ್ಮ ದೇಶೀಯರಿಗೆ ಈ ಮಹನೀಯರಂತಹ ಪುರಂದರ ದಾಸರ ಬಡತನಕ್ಕೂ ಬೆಲೆಯುಂಟೆಂದು ತೋರಿಸಾಗಿತು. ಮಹಾತ್ಮರು ತಾವೊಬ್ಬರು ಮಾತ್ರವಲ್ಲ-ತಮ್ಮಂತೆಯೇ ಅನೇಕರಿಗೆ ಇಂತಹ ಬಡತನವೆಂಬ ಸೌಭಾಗ್ಯದೆಸೆಯ ರುಚಿಯನ್ನು ತೋರಿಸಿ ಕೊಟ್ಟರು. ಹಾಗೆ ಮಹಾತ್ಮರ ಬಡತನವನ್ನು ಅಂಗೀಕರಿಸಿದವರಲ್ಲಿ ಇಬ್ಬರು ಮುಖ್ಯರು. ಒಬ್ಬರು ಚಿತ್ತರಂಜನ ದಾಸರು, ಮತ್ತೊಬ್ಬರು ಮೋತಿಲಾಲ ನೆಹರು ಮಹಾಶಯರು. ಇಂದು ಭಾರತದೇಶದಲ್ಲಿ ಬೇಕೆಂದು ಬಡತನವನ್ನು ಸ್ವೀಕರಿಸಿ ಲೋಕಸೇವೆಯಲ್ಲಿ ತೊಡಗಿರುವ ಮಹನೀಯರು ಅಸಂಖ್ಯರಿದ್ದಾರೆ.

'ಬಡವರ ಬಂಧು'ವು ಯಾರ ಸೇವೆಗಾಗಿ ನಡು ಕಟ್ಟಿ ನಿಂತಿದೆಯೋ ಅದು ಇಂತಹ, ಬಯಸಿ ಬಯಸಿ ಬೇಕೆಂದು ಬಡವರಾದವರಿಗಾಗಿಯಲ್ಲ. ಬಡತನವು ತಾನೇ ಯಾರ ಮೇಲೆ ಪರಮಾನುಗ್ರಹಮಾಡಿ ಆಗರ್ಭವಾಗಿ ನೆಲೆಸಿ, ಅನುರಣವಾಗಿ ಬೆನ್ನಂಟಿದೆಯೋ ಅಂತಹ ಮಹಾನುಭಾವರಿಗಾಗಿ. ಯಾರು ತಮ್ಮ ನವನಿಧಿಗಳನ್ನೂ ಧನಕನಕಗಳನ್ನೂ ಮನೆಬಾಗಿಲುಗಳನ್ನೂ ಅನಿತ್ಯವೆಂದು ತ್ಯಜಿಸಿ, ಕೈಲಿ ತೆಂಗಿನ ಪರಟೆಯನ್ನು ಹಿಡಿದು, ಬುದ್ಧದೇವನಂತೆ ಆತ್ಮಸಂತೋಷದಿಂದ ಕಡು ಬಡವರಾಗಿ ಭಿಕ್ಷುಕ ಸ್ಥಿತಿಗಿಳಿದರೋ, ಅಂಥವರಿಗಾಗಿಯಲ್ಲ—ಯಾರನ್ನು ಬಡತನವು ಎಂದಿಗೂ ಬಿಡದೆ ಆಶ್ರಯಿಸಿ, ಹದಿನಾರು ಹಲ್ಗಿಂದು ಯಾಚಿಸಿದರೂ ಹೊಟ್ಟೆಗೊಂದು ತುತ್ತು ಕೂಳು ಸಹ ದೊರಕದಂತೆ ಕಾಡುತ್ತಿರುವುದೋ, ಅಂತಹ ನಿರ್ಭಾಗ್ಯರಿಗಾಗಿ. ಬಲ್ಲಿದರ ಕೋಪಕ್ಕೂ, ಧನವಂತರ ತಿರಸ್ಕಾರಕ್ಕೂ, ರಾಜರ ಉದಾ

[illegible]ಕ್ಷ್ಮಿ, ಸರ್ವರ ಅನಾದರಣೆಗೂ ಪಾತ್ರರಾಗಿರುವ ಹತಭಾಗ್ಯರಾದ ಇಂತಹ ಬಡವರ ಸೇವೆಯನ್ನೇ ಪವಿತ್ರಕರ್ಮವೆಂದು ಎಣಿಸಿರುವ **"ಬಡವರ ಬಂಧು"**ವು ಚಿರಾಯುವಾಗಿರಲಿ.

ವಾಚಕ ಮಹಾಶಯರೇ! ಬಡತನದ ರುಚಿಯು ಅನುಭವಿಸುವವರಿಗಲ್ಲದೆ ಇತರರಿಗೆ ತಿಳಿಯುವುದು ಅಸಾಧ್ಯ. ನಾವೆಲ್ಲರೂ ಬಡವರೇ ಆದರೂ, ಬಡತನದ ನಿಜವಾದ ಅನುಭವವು ನಮಗಿಲ್ಲ. ನಾವು ನಮ್ಮ ಈಗಿರುವ ಅಂತಸ್ತಿನಿಂದಲೇ ಬಡತನವೆಂಬ ಸಮುದ್ರದ ಅಷ್ಟು ಆಳಕ್ಕೆ ಪ್ರವೇಶಿಸಿ ಅದರ ನಿಶ್ಚಯವಾದ ಅನುಭವವನ್ನು ಪಡೆಯಲು ಸಾಧ್ಯವಿಲ್ಲ. ಆದರೆ ರವಿ ಕಾಣದುದನ್ನು ಕವಿಯು ಕಾಣುವನೆಂಬ ಲೋಕೋಕ್ತಿಯುಂಟಲ್ಲವೇ? ಅದರಂತೆಯೇ ಒಬ್ಬಾನೊಬ್ಬ ಕವಿಯು ಬಡತನದ ನಿಶ್ಚಯಸ್ವರೂಪವನ್ನು ಹೀಗೆಂದು ವರ್ಣಿಸಿದ್ದಾನೆ:

ಬಡತನದಂತೆ ವೊಲಾವುದು
ಕಂದ:— ಪೊಡಪಿಯೊಳೊಡನಿಪ್ಪುದು ದುಗುಡಮುಂ ಮುನುಜಂಗಂ ।
ದಡೆಬಿಡದಾಲೋಚಿಸಿ ನೋ
ಳ್ಪೊಡೆ. ಬಡತನದಂತೆ ದುಃಖದಂ ಬಡತನಮೇ ॥
(ನೀತಿಮಂಜರಿ)

"ಗಗನಂ ಗಗನಾಕಾರಂ—ಸಾಗರಂ ಸಾಗರೋಪಮಂ' ಎಂಬಂತೆ ಬಡತನಕ್ಕೆ ಸರಿಯಾದುದೆಂದರೆ ಬಡತನವೇ! ಬಡತನದಂತೆ ದುಃಖದಾಯಕ ಸಾಮಗ್ರಿಯೆಂದರೆ ಬಡತನವೊಂದೇ! ಇಂತಹ ಮಹತ್ವವು ಬಡತನಕ್ಕಿದೆ!—ಎಂದ ಮೇಲೆ ಬಡತನವು ತಾನಾಗಿ ಯಾರ ಮೇಲೆ ಕೇವಲ ಪ್ರೇಮವಿಟ್ಟು ಆಶ್ರಯಿಸಿರುತ್ತದೋ—ಅಲ್ಲ, ಅನುಗ್ರಹಿಸಿರುತ್ತದೋ ಅವರ ದುಃಖಕ್ಕೆ ಅಂತ್ಯವುಂಟೆ, ಪಾರವುಂಟೆ!

ಬೇಕೆಂದೇ ಐಶ್ವರ್ಯವನ್ನು ತೃಣೀಕರಿಸಿ ಬಡತನವನ್ನು ಸ್ವೀಕರಿಸಿರುವ ಮಹನೀಯರ ಮನಶ್ಶಕ್ತಿಯು ಅಗಾಧವಾಗಿರುವುದು, ಧ್ಯೇಯವು ಉನ್ನತವಾಗಿರುವುದು, ಅವರ ಚಿತ್ತವು ಶಾಂತವಾಗಿರುವುದು, ಹೃದಯವು ನಿಷ್ಕಲ್ಮಶವಾಗಿರುವುದು. ಜೀವಿತವು ಲಘುವಾಗಿರುವುದು. ಅವರಿಗೆ ನೋಡಿದತ್ತೆಲ್ಲ ಆನಂದವೇ ವೃಷ್ಟಿಯಾಗಿ ಸುರಿನಂತೆ ತೋರುತ್ತಿರುವುದು. ಅವರನ್ನು ಸರ್ವರೂ ಪ್ರೀತಿಸುವರು. ಪ್ರಿಯ ವಾಕ್ಯಗಳನ್ನು ನುಡಿವರು. ಅವರು ಅಪೇಕ್ಷಿಸದಿದ್ದರೂ ಪದಾರ್ಥಗಳನ್ನು ನಾನು ತಾನೆಂದು ತಂದೊಪ್ಪಿಸುವರು, ಬೇಕಾದ ಸೇವೆ ಮಾಡುವರು-ಆದರಿಸುವರು. ಗೌರವಿಸುವರು. ಆದರೆ ಸ್ವಾಭಾವಿಕವಾಗಿಯೇ ಬಡವರಾಗಿರುವರಲ್ಲ, ಅವರ ಸ್ಥಿತಿಯನ್ನು ಹೇಳಬೇಕಾದುದೇನು? ಅವರ ಸ್ಥಿತಿಯು ಪ್ರತಿಯೊಂದು ವಿಚಾರದಲ್ಲೂ ಮೇಲಿನದಕ್ಕೆ ಸರಿವಿರುದ್ಧವಾಗಿರುವುದು. ಹೀಗಾಗಿ ಅಂತಹ ಬಡವನು ಕೊನೆಗೆ ಏನಾಗುವನೆಂಬಿರಿ:—

ವೃತ್ತ:— ಧನಹೀನಂ ಧೃತಿಹೀನನಪ್ಪನದರಿಂದಕ್ಕುಂ ತಿರಸ್ಕಾರಮುಂ
ಜನರಿಂದಂ ಪರಿಭೂತನಾಗೆ ಮನದೊಳ್ ನಿರ್ವೇದಮಂ ಪೊಂದುಗುಂ
ಮನಮುದ್ವಿಗ್ನಮದಾಗೆ ಶೋಕಮದರಿಂ ಬುದ್ಧಿಭ್ರಮಂ ಬುದ್ಧಿನಾ
ಶನದಿಂ ನಾಶಮಿ ನಿರ್ಧನಂಗಹುದೆಲ್ಲೈ ಶ್ರೀ ಚೆಲ್ವನಾರಾಯಣಾ

ಇನ್ನಿದರ ವಿವರಣೆಯೇಕೆ?—

ಆದರೆ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಕುರಿತು ಯೋಚಿಸಬೇಕಾಗುತ್ತದೆ. ಲೋಕದಲ್ಲಿ, ಪ್ರಾರಂಭಕ್ಕೆ ಹೇಳಿದಂತೆ ಅಷ್ಟೈಶ್ವರ್ಯವಿದ್ದು ಅದನ್ನೆಲ್ಲ ತ್ಯಜಿಸಿ ಬಡವರಾದವರು ದೊರೆವುದು ಅಪೂರ್ವ. ಅಥವಾ ಬಡವರಾಗಿಲ್ಲದೆ ಎಲ್ಲರೂ ಉತ್ತಮ ಸ್ಥಿತಿಯಲ್ಲೇ ಇರುವುದೂ ಸಾಧ್ಯವಿಲ್ಲ. ಹುಡುಕುತ್ತಾ ಹೋದಲ್ಲಿ ಲೋಕದಲ್ಲಿ ಐಶ್ವರ್ಯ ಪದವಿಗಳನ್ನು ಪಡೆದು ಸುಖಸಂತೋಷಗಳಲ್ಲಿ ಓಲಾಡುತ್ತಿರುವವರು ಎಲ್ಲೋ ಅಪೂರ್ವವಾಗಿ ದೊರೆಯುವರಲ್ಲದೆ, ಲೋಕವೆಲ್ಲವೂ ಬಡವರಿಂದಲೇ ತುಂಬಿ ತುಳುಕುತ್ತಿರುವುದು. ಸಾಲದುದಕ್ಕೆ ರಾಜಕಾರಣ, ದುಡ್ಡಿದ್ದವರ ಸ್ವಾರ್ಥತೆ, ದಂಭ—ದರ್ಪಗಳು ಮುಂತಾದ ಅನೇಕ ಕಾರಣಗಳಿಂದ ಮಧ್ಯಮ ಸ್ಥಿತಿಯಲ್ಲಿರುವ ಅನೇಕರು ಕಡು ಬಡತನದ ಮೆಟ್ಟಲಿಗೇ ಇಳಿದು, ಅವರ ಸಂಖ್ಯೆಯನ್ನು ದಿನ ದಿನಕ್ಕೆ ಹೆಚ್ಚಿಸುತ್ತಿರುವರು. ಈ ಸ್ಥಿತಿಯಲ್ಲಿ—ಬಡವರಾಗಿದ್ದರೂ ಅವರು ಸುಖವಾಗಿರುವುದು ಹೇಗೆ? ಬಡತನದಲ್ಲೇ ನರಳುತ್ತಿದ್ದರೂ ಅವರು ಹತಾಶರಾಗದೆ ಧೈರ್ಯಶಾಲಿಗಳಾಗಿರುವುದು ಹೇಗೇ? ಬಡತನದ ಬೇಗೆಯಲ್ಲೇ ಬೇಯುತ್ತಿದ್ದರೂ ಅದಕ್ಕೆ ಬೆದರಿ ಕುಳ್ಳಿರದೆ ಕಾರ್ಯತತ್ಪರರಾಗುವುದು ಹೇಗೆ? ಬಡತನಪ್ರವಾಹದಲ್ಲೇ ಕೊಚ್ಚಿ ಹೋಗುತ್ತಿದ್ದರೂ ಕಂಗೆಡದೆ ದೃಢವಾಗಿ ತಮ್ಮ ಸ್ಥಾನದಲ್ಲೇ ಕಾಲೂರಿ ನಿಂತು ತಾವು ತಿರ್ಯತ್ಪ್ರಾಣಿಗಳಲ್ಲ — ಮನುಷ್ಯರು—ಪುರುಷರು ಎಂಬ ತಮ್ಮ ಸ್ಥಾನಗೌರವವನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬುದನ್ನು ಯೋಚಿಸಬೇಕಾಗಿದೆ.

ಈ ವಿಷಯದಲ್ಲಿ ಮಹನೀಯರ ಚರಿತ್ರೆಗಳು ನಮಗೆ ಉತ್ತಮವಾದ ಉದಾಹರಣೆಗಳನ್ನು ಒದಗಿಸುವುವು. ಬಡತನವು ಯಾರನ್ನು ಬೆದರಿಸಿ ಹಣ್ಣು ಮಾಡಿರುವುದೋ, ಯಾರು ಬಡತನದ ಹೊಲ್ಲಿಗೆ ಸಿಕ್ಕು ಕಂಗೆಟ್ಟಿರುವರೋ, ಬಡತನದ ಬೇಗೆಯಲ್ಲಿ ಬೇಯುತ್ತಾ ದಿಕ್ಕು ಕಾಣದೆ ದುರ್ಮಾರ್ಗಗಳಿಂದಲಾದರೂ ಬದುಕಬೇಕೆಂದು ಯಾರಿಗೆ ಮನಸ್ಸು ಸೆಳೆಯುವುದೋ ಅಂಥವರು ಈ ಮಹನೀಯರ ಜೀವಿತೋದಾಹರಣೆಗಳನ್ನು ಅಗತ್ಯ ಓದಿ ಧೈರ್ಯಗೊಳ್ಳಬೇಕು. ನಗರವಾಸಿಗಳಾದ ಬಡಬಾಲಕರೂ ಯುವಕರೂ ಪ್ರಕೃತ ಕಾಲದ ನಾಗರಿಕತೆಯ ಸುಖದ ಸವಿಗನಸುಗಳನ್ನು ಅನುಭವಿಸಲು ತಕ್ಕಷ್ಟು ಅನುಕೂಲವಿಲ್ಲದೆ, ದುರ್ಮಾರ್ಗಗಳಲ್ಲಿ ಬೀಳಲು ಹೆಚ್ಚು ಅವಕಾಶವಿರುವುದು. ಅಂತಹ ಸಂದರ್ಭಗಳಲ್ಲಿ ಈ ಮಹನೀಯರ ಜೀವಿತಾನುಭವಗಳು ಅವರನ್ನು ಸರಿಯಾದ ಮಾರ್ಗದಲ್ಲಿ ಬಿಟ್ಟು, ಸನ್ಮಾರ್ಗವನ್ನು ತೋರಿಸಿ,—ಇಂದು ಅವರು ಯಾವ ಸುಖದ ಹೀಚುಗಾಯಿ—ಕಸುಗಾಯಿಗಳನ್ನು ತಿಂದು ಮೂತಿ ಸೊಟ್ಟ ಮಾಡಬೇಕಾಗಿದ್ದಿತೋ ಅವೇ ಸುಖಸೌಭಾಗ್ಯಗಳ ಪಕ್ವಫಲಗಳನ್ನು ಕಾಲಾಂತರದಲ್ಲಿ ತಪ್ಪದೆ ಒದಗಿಸುವುವು. ಅವೂ ಒಂದೆರಡಲ್ಲ. ಅನೇಕಾನೇಕವಿವೆ—ಸ್ಥಳಾಭಾವದಿಂದ ಇಲ್ಲಿ ಕೆಲವನ್ನು ಮಾತ್ರ ಕೊಡುತ್ತೇನೆ.

ಕುಚೇಲ:— ಬಡತನವೆಂಬ ಹೆಸರೆತ್ತಿದೊಡನೆಯೇ ಅದರ ಮೂರ್ತಿಮಂತ ಸ್ವರೂಪವೋ ಎಂಬಂತಿದ್ದ ಪುರಾಣ ಕಾಲದ ಕುಚೇಲನ ಹೆಸರು ಹೇಳದಿದ್ದರೆ ಅನ್ಯಥಾ ಮಾರ್ಗವೇ ಇಲ್ಲ. ಅಂತಹ ಬಡತನದ ಬೇಗೆಯಲ್ಲೇ ಬೇಯುತ್ತಿದ್ದರೂ, ಆ ಮಹನೀಯನು ಲೇಶಮಾತ್ರವೂ ಅದರ ಗೊಡವೆಯನ್ನೇ ಹಚ್ಚಿಕೊಳ್ಳದೆ, ತನ್ನ ವರ್ಣಧರ್ಮದಲ್ಲಿ [illegible] ಸ್ನಾನ ಸಂಧ್ಯಾ. ವ್ರತ ನಿಯಮಾದಿಗಳನ್ನು ಲೋಪಗೊಳಿಸದೆ ಭಗವಂತನಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳನ್ನಿಟ್ಟು ನಡೆದುಕೊಳ್ಳುತ್ತ [illegible]

ಪೂರ್ವಿಕರಾದ ಋಷಿಮುನಿಗಳೆಲ್ಲರೂ, ಸಾಧುಸಜ್ಜನರೆಲ್ಲರೂ ಎಂದೂ ಆಗರ್ಭ ಶ್ರೀಮಂತರಾಗಿದ್ದವರಲ್ಲ. ಯಾವ ದೇಶದಲ್ಲಿ, ಯಾವ ಕಾಲದಲ್ಲಿ, ಎಲ್ಲಿ ವಾಸಿಸಿದ ಕವಿಶ್ರೇಷ್ಠರೂ ಐಶ್ವರ್ಯ ಪದವಿಗಳಲ್ಲಿ ಓಲಾಡಿದ್ದವರಲ್ಲ. ಇಂಗ್ಲೆಂಡು ದೇಶದಲ್ಲಿನ ಗೋಲ್ಡ್‌ಸ್ಮಿತ್, ಜ್ಞಾನ್‌ಸನ್ ಮುಂತಾದವರ ಬಡತನವೂ ತಾಪತ್ರಯವೂ ಲೋಕಪ್ರಸಿದ್ಧವಿವೆ. ನಮ್ಮ ದೇಶದ ಕವಿಶ್ರೇಷ್ಠರಲ್ಲೂ ಯಾವನೂ ಲಕ್ಷ್ಮೀಪುತ್ರನೆನ್ನಿಸಿಕೊಂಡು ಮೆರೆದವನಿಲ್ಲ. ಆದರೆ ಆ ಧೀರರು ಬಡತನವನ್ನು ಲಕ್ಷ್ಯವೇ ಮಾಡುತ್ತಿರಲಿಲ್ಲ. ಅದಕ್ಕೆ ಅಂಜಲೇ ಇಲ್ಲ. ಆಸೆಯೇ ಬಡತನದ ಮೂಲವೆಂಬುದನ್ನು ಅವರು ಅರಿತಿದ್ದುದರಿಂದ ಆಸೆಯನ್ನೇ ಹುಟ್ಟಡಗಿಸಿದ್ದರು.

ಕಂದ:– ಆಸೆಗೆ ಕಿಂಕರನಾದಂ । ದಾಸಂ ಜಗಕೆಲ್ಲವಾಸೆಯ ಧೃತಿಯಿಂದಂ ॥
ದಾಸಿಯನೆಸಗಿದ ಮಹಿಮಾ । ವಾಸನ ಪದದೆಡೆಯೊಳಖಿಳ ಜಗಮುಂ ಕೆಡುಗುಂ ॥

ಎಂಬಂತೆ, ಅವರು ಬಡತನದ ಮೂಲವಾದ ಆಸೆಯನ್ನೇ ಛೇದಿಸಿಬಿಟ್ಟು, ಧೈರ್ಯವಾಗಿ ಮುಂದೆ ಹೊರಟಿದ್ದರು.–ಅಯ್ಯೋ, ಅದು ಪುರಾಣಕಾಲ. ಆಗ್ಗೆ ಮಹಾನುಭಾವರಾದ ಅವರು ಹಾಗೆ ಮಾಡಲು ಸಾಧ್ಯವಿತ್ತು. ನಮ್ಮಂತೆ ಅವರೂ ಬಡತನಕ್ಕೆ ಸಿಕ್ಕಿದ್ದರೆ ದೇವರು ದೇವರೆಂದು ಅವರು ಕುಳ್ಳಿರುವುದೂ–ಹೊಟ್ಟೆಯ ಪಾಡಲ್ಲದೆ ಇತರ ಮಹತ್ಕಾರ್ಯಗಳನ್ನು ಮಾಡುವುದೂ ಕಾಣಿಸುತಿತ್ತು ಎನ್ನಬೇಡಿ.—

ಶ್ರೀ ರಾಮಕೃಷ್ಣ ಪರಮಹಂಸರು:— ಈ ಮಹನೀಯರೇನು ಲಕ್ಷ್ಮೀಪುತ್ರರಾಗಿ ಅವತರಿಸಿ ಬೆಳ್ಳಿಯ ತೊಟ್ಟಿಲಲ್ಲಿ ಮಲಗಿ ಬಂಗಾರದ ಬಟ್ಟಲಲ್ಲಿ ಹಾಲು ಕುಡಿದವರೇ! ಭಾರತದೇಶದಲ್ಲಿ ಸುಪ್ರಸಿದ್ಧ ಮತಸ್ಥಾಪಕರಾಗಿ ಇಂದಿಗೂ ಕೋಟ್ಯಾಂತರ ಮಂದಿ ಶಿಷ್ಯರಿಂದ ಪೂಜಿತರಾಗುತ್ತಿರುವ ಶ್ರೀ ಶಂಕರ ಮಧ್ವರಾಮಾನುಜಾಚಾರ್ಯರುಗಳೇನು ಶ್ರೀಮಂತರಾಗಿ ಹುಟ್ಟಿ ಬೆಳೆದವರೇ? ಈಶ್ವರಚಂದ್ರ ವಿದ್ಯಾಸಾಗರನು ಎಷ್ಟರ ಮಟ್ಟಿನ ಐಶ್ವರ್ಯಸಂಪನ್ನನಾಗಿ ಜನಿಸಿದವನು! ಅಂತಹ ಕಡು ಬಡತನದಲ್ಲಿದ್ದರೂ ಆ ಬಾಲಕನು ಅದನ್ನು ಲಕ್ಷ್ಯವೇ ಮಾಡದೆ, ಕಷ್ಟಪಟ್ಟು ವಿದ್ಯೆ ಕಲಿತು–ವಿದ್ಯಾಸಾಗರ–ಎಂಬ ಲೋಕೋತ್ತರ ಬಿರುದನ್ನು ಪಡೆದು ರಾಜಾಧಿರಾಜರ, ಗೌರ್ನರುಗಳ, ವೈಸರಾಯ ಸ್ನೇಹ ವಿಶ್ವಾಸ ಗೌರವಗಳಿಗೆ ಪಾತ್ರನಾಗಿ ಅಗಾಧ ವಿದ್ಯಾದಾನ ಮಾಡಿ ಲೋಕೋಪಕಾರಿಯಾದನಲ್ಲವೆ? ನಮ್ಮ ಈ ಮೈಸೂರು ದೇಶದಲ್ಲಿ ಸುಪ್ರಸಿದ್ಧರೆನ್ನಿಸಿ ದಿವಾನಗಿರಿಯನ್ನು ಪಡೆದ **ಪೂರ್ಣಯ್ಯನವರು, ರಂಗಾಚಾರ್ಲುಯವರು, ಶೇಷಾದ್ರೈಯ್ಯರು** ಮುಂತಾದವರೆಲ್ಲ, ಏನು ಶ್ರೀಮಂತ ಕುಟುಂಬಗಳಲ್ಲಿ ಹುಟ್ಟಿ ಬೆಳೆದವರಲ್ಲ. ಕನ್ನಡಿಗರ ಭಾಗ್ಯವಶದಿಂದ ಇನ್ನೂ ಲೋಕಸೇವಾನಿರತರಾಗಿರುವ ಸರ್. ಎಮ್. ವಿಶ್ವೇಶ್ವರಯ್ಯನವರು, ಮೈಸೂರಿನ ವೃದ್ಧ ಪಿತಾಮಹ ಎಮ್. ವೆಂಕಟಕೃಷ್ಣಯ್ಯನವರು ಇವರುಗಳು ಬಹು ಬಡತನ ಸ್ಥಿತಿಯಲ್ಲಿದ್ದವರೆಂದು ಕೇಳುತ್ತೇವೆ. ಆದರೇನು, ಈ ಮಹನೀಯರೆಲ್ಲರೂ ಧೈರ್ಯದಿಂದ–ಬಡತನಕ್ಕೆ ಎದೆಗೊಟ್ಟು ಹೋರಾಡಿ, ಗೆದ್ದು, ಲೋಕದಲ್ಲಿ ಸ್ಥಾನಮಾನಗಳನ್ನು ಪಡೆದು, ಅಗಾಧ ಲೋಕೋಪಕಾರ ಕಾರ್ಯ ಮಾಡಲು ಶಕ್ತರಾಗಲಿಲ್ಲವೆ? ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಮದರಾಸಾಧಿಪತ್ಯದಲ್ಲಿ ಜನಿಸಿದ **ಸಿ. ವಿ. ರಂಗನಾಥ ಶಾಸ್ತ್ರಿ** ಎಂಬೊಬ್ಬ ಬಡ ಬ್ರಾಹ್ಮಣನ ಮಗನು ಚಿಕ್ಕಂದಿನಲ್ಲೇ ಕುಟುಂಬ ಪೋಷಣಾಭಾರವನ್ನು ವಹಿಸಬೇಕಾಗಿ ಬಂದರೂ, ಸ್ವಸಾಮರ್ಥ್ಯದಿಂದ ಇಂಗ್ಲೀಷು, ಸಂಸ್ಕೃತ, ಅರಬ್ಬೀ, ಪಾರ್ಶಿ, ತೆಲುಗು, ತಮಿಳು, ಮಲೆಯಾಳ, ಕನ್ನಡ, ಮರಾಠಿ, ಹಿಂದೂಸ್ಥಾನಿ, ಲ್ಯಾಟಿನ್, ಗ್ರೀಕ್, ಫ್ರೆಂಚ್, ಜರ್ಮನ್ ಎಂಬೀ ಹದಿನಾಲ್ಕು ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಗಳಿಸಿದ್ದು–ಕೊನೆಗಾಲದಲ್ಲಿ ಹದಿನೈದನೆಯದಾಗಿ ಹೀಬ್ರೂ ಭಾಷೆಯನ್ನು ಕಲಿಯುತ್ತಿದ್ದನಂತೆ! ದೇಶೀಯರ ವಿದೇಶೀಯರ ಗೌರವ ಆದರಗಳಿಗೆ ಪಾತ್ರನಾಗಿ, ಆ ಮಹನೀಯನು ಕಾಲಕ್ರಮದಲ್ಲಿ ಮದರಾಸು ಹೈಕೋರ್ಟಿನಲ್ಲಿ ನ್ಯಾಯಾಧಿಪತಿಯಾಗಿ ಕೀರ್ತಿಸಂಪನ್ನನಾದನೆಂದು ಓದುತ್ತೇವೆ. ಈತನಂತೆಯೇ, **ಸರ್ ಟಿ. ಮುತ್ತುಸ್ವಾಮಿ ಐಯ್ಯರು** ಎಂಬ ಮಹನೀಯನೂ ಸಹ ಬಡತನದಲ್ಲೇ ಹುಟ್ಟಿ ಬೆಳೆದು–ತಿಂಗಳೊಂದಕ್ಕೆ ಒಂದೇ ರೂಪಾಯಿ ಸಂಬಳಕ್ಕೆ ಗ್ರಾಮಕರಣೀಕನ ಗುಮಾಸ್ತನಾಗಿ ಜೀವನವನ್ನು ಪ್ರಾರಂಭಿಸಿದನಂತೆ! ಆದರೇನು, ಧೈರ್ಯಸ್ಥೈರ್ಯಗಳಿಂದ ಬಡತನದೊಂದಿಗೆ ಹೋರಾಡಿ, ವಿದ್ಯಾಭ್ಯಾಸ ಮಾಡಿ, ನೀತಿವಂತನೆಂದು ವಿಖ್ಯಾತನಾಗಿ, ಮಹನೀಯರ ದೃಷ್ಟಿಗೆ ಬಿದ್ದು ಉದ್ಯೋಗವನ್ನು ಪಡೆದು, ದಿನದಿನಕ್ಕೆ ಮೇಲಕ್ಕೇರುತ್ತ ಏರುತ್ತ ಕೊನೆಗೆ ಮದರಾಸು ಹೈಕೋರ್ಟಿನ ಸುಪ್ರಸಿದ್ಧ ನ್ಯಾಯಾಧಿಪತಿಯೆಂದು ಕೀರ್ತಿಯನ್ನು ಸಂಪಾದಿಸಿದನು.

ಹೀಗೆಯೇ ಒಬ್ಬೊಬ್ಬರಲ್ಲ. ಲೋಕದಲ್ಲಿ ಬಡತನದಲ್ಲಿ ಸ್ವಸಾಮರ್ಥ್ಯದಿಂದ ಮಹೋನ್ನತ ಪದವಿಯನ್ನೇರುವಷ್ಟು ಮಂದಿ, ಶ್ರೀಮಂತಗಿರಿಯಲ್ಲಿ ಹುಟ್ಟಿ ಬೆಳೆದು ಅದನ್ನು ಉಳಿಸಿಕೊಂಡವರಿಲ್ಲ. ಉದ್ಯೋಗ, ವ್ಯಾಪಾರ, ವ್ಯವಹಾರ, ಕಲೆ, ಕವಿತೆ, ದೇಶಸೇವೆ, ರಾಜಸೇವೆ, ವಿದ್ಯಾದಾನಸೇವೆ ಮುಂತಾಗಿ ಯಾವ ಕಾರ್ಯಕ್ಷೇತ್ರವನ್ನು ತೆಗೆದುಕೊಂಡರೂ ಲೋಕದಲ್ಲಿ, ಅಲ್ಲಿ ಬಡವರಿಂದ ನಡೆದಿರುವಷ್ಟು ಸೇವೆಯು ಐಶ್ವರ್ಯವಂತರಿಂದ ನಡೆದಿಲ್ಲ–ಮುಂದೂ ನಡೆಯಲು ಸಾಧ್ಯವಿಲ್ಲ. ಆದ್ದರಿಂದ ಬಡವರು,–ಅಯ್ಯೋ ನಾವು ಬಡವರಾದೆವಲ್ಲಾ, ಎಂದು ತಲೆಯ ಮೇಲೆ ಕೈ ಹೊತ್ತು ಹತಾಶರಾಗಿ ಕುಳ್ಳಿರಲು ಏನೂ ಕಾರಣವಿಲ್ಲ.–ಹೃದಯದಲ್ಲಿ ಧೈರ್ಯ ಉತ್ಸಾಹಗಳನ್ನಿಟ್ಟುಕೊಂಡು–ಬಡವರಾಧಾರೀ ಶ್ರೀಹರೀ–ಎಂಬ ದಾಸರಾಯರ ವಾಕ್ಯದಲ್ಲಿ ವಿಶ್ವಾಸವಿಟ್ಟು ಬಡತನವನ್ನು ಲಕ್ಷ್ಯ ಮಾಡದೆ ಒಂದೆಡೆಗೆ ತಳ್ಳಿ, ಧೈರ್ಯದಿಂದ ಅಡಿಯಿಟ್ಟು ಏಕನಿಷ್ಠೆಯಿಂದ ನಡೆಯ ತೊಡಗುವ ಬಾಲಕನು, ಯುವಕನು, ಪುರುಷನು ಹತಾಶನಾಗಲು ಕಾರಣವೇನಿದೆ? ಆತನಿಗೆ ಸಾಧ್ಯವಾಗದಿರುವ ಕಾರ್ಯವಾವುದು? ಲಭ್ಯವಾಗದಿರುವ ಪುರುಷಾರ್ಥವಾವುದು?

ಮರ್ಯಾದೆಗೆ ಬಲಿ.

ಲೇಖಕರು:—ಶ್ರೀ. ಕೆ. ಕೆ. ಶೆಟ್ಟಿ, ಸಂಪಾದಕ, "ನವಯುಗ," ಮಂಗಳೂರು.



"ಅಮ್ಮಾ, ನಾನು ಕೊರಗನನ್ನೇ ಪ್ರೀತಿಸುವೆನು. ಅಣ್ಣನು ಊರೆಲ್ಲಾ ಹುಡುಗ ಹುಡುಕುತ್ತಾ, ಪೇಚಾಡುವ ಬದಲಿಗೆ ಅವನಿಗೇನೇ ನನ್ನನ್ನು ಕೊಟ್ಟು ಮದುವೆ ಮಾಡಬಾರದೇಕೆ?"

"ನಿನಗೇನು ತಲೆ ಸಮವಿಲ್ಲವೋ? ಕಮಲ! ಎಷ್ಟು ಸಲ ಹೇಳಿವೆ ನಿನಗೆ ನಾನು, ಆ ಕೊರಗನ ಪ್ರಸ್ತಾಪವೆತ್ತಬಾರದೆಂದು? ನಮ್ಮ ಮನೆತನ ಮಾನಮರ್ಯಾದೆ ಯೆಲ್ಲಾ ಎಲ್ಲಿ? ನಿನ್ನೆ ವರೆಗೆ ನಮ್ಮ ಒಕ್ಕಲಾಗಿದ್ದು ನಮ್ಮ ಮನೆ ಚಾಕರಿಯವನಂತಿದ್ದ ಆ ಕೊರಗನೆಲ್ಲಿ?"

"ಚಾಕ್ರಿಯವನಾಗಲಿ, ಬಿಕನೇಶಿಯೇ ಆಗಲಿ. ಅವನೊಂದಿಗೆ ಆಟ್ಟುಳ್ಳವಳು ನಾನಾಗಿರುವಾಗ ನಿಮಗೇನು?"

"ನಮಗೇನೋ! ಮಾನ ಮರ್ಯಾದೆಯ ಯೋಚನೆ ಬಂದಿಷ್ಟಾದರೂ ಇಲ್ಲವೆ ನಿಂತೆ ನಿನಗೆ? ಯಾಕೆ ಹುಟ್ಟಿದಿಯೋ ನನ್ನ ಹೊಟ್ಟೆಯಲ್ಲಿ ನೀನು!"

"ನಿಮ್ಮ ಮಾನಮರ್ಯಾದೆಗೆ ಬೆಂಕಿ ಬೀಳಲಿ! ನಾನೇನು ಈಗ ಋತುವಾದುದೇ? ಹತ್ತು ವರ್ಷಗಳಿಂದ ನೀವು ನನಗೆ ಗಂಡ ಮಾಡಿಕೊಟ್ಟುದು ಸಾಕು! ಕೊರಗನ ಮೇಲೆಯೇ ನನ್ನ ಮನಸ್ಸು ಬಿದ್ದಿದೆ. ಅವನನ್ನೇ ನಾನು ಮದುವೆಯಾಗುವೆನು"

"ಓಹೋ, ನಮಗೆ ಮಾಡಲಿಕ್ಕಾಗಲಿಲ್ಲವೆಂದು ನೀನೇ ನಿನಗೆ ಗಂಡನನ್ನು ಹುಡುಕಿಕೊಂಡುದೇ? ನಗೆ ನಾಚಿಕೆಯೊಂದು ಬಿಟ್ಟರೆ ಏನೂ ಮಾತಾಡಬಹುದು!"

"ನಗೆ ನಾಚಿಕೆಯೇನು? ಕೊರಗನೇನು ಕೈಕಾಲಿಲ್ಲದವನೇ? ಬಡವನೆಂದಲ್ಲವೇ? ದೊಡ್ಡವರೆಂದು ಅಕ್ಕನನ್ನು ಕೊಟ್ಟು ಪಡೆದ ಸುಖ ಸಾಲದೇ? ಆ ದೊಡ್ಡಸ್ತಿಕೆಗಿಂತ ಗಂಜಿನೀರಿಲ್ಲದ ಬಡಸ್ತಿಕೆಯೇ ಲೇಸಲ್ಲವೆ?"

"ಸಾಕು ಬಾಯ್ಮುಚ್ಚು! ನಿನ್ನಕ್ಕನಿಗೆ ಏನಿಲ್ಲದಿದ್ದರೂ ದೊಡ್ಡ ಮನೆತನವೆಂಬ ಭೂಷಣವಾದರೂ ಇಲ್ಲವೇ? ನೀನಾ ಬಿಕನೇಶಿ ಕೊರಗನನ್ನು ಮದುವೆಯಾದರೆ ಜನರೆಲ್ಲಾ ಏನೆಂದಾರೆಂದಾದರೂ ಸ್ವಲ್ಪ ಯೋಚಿಸುವುದು ಬೇಡವೇ? ಈಗಲೇ ಹಬ್ಬಿದೆಯಂತೆ ಗುಣುಗುಣು ಸುದ್ದಿ. ಗುಟ್ಟು ರಟ್ಟಾಗಿ ಬಿಟ್ಟರೆ ನಿನಗೆ ಗಂಡನನ್ನೆಲ್ಲಿ ಹೋದರೂ ಮರದ್ದು ಮಾಡಿ ತರಬೇಕು!"

"ನನಗಾದರೂ ಗಂಡ ಮಾಡಿ ಕೊಡುವುದು ಬೇಡ. ನಾನು ಕೊರಗನನ್ನೇ ಮದುವೆಯಾಗುವೆನು." ಕುಡೂರು ಗ್ರಾಮದ ಹೊಸಮನೆಯ ಪಡಸಾಲೆಯಲ್ಲಿ, ಎಣ್ಣೆ ಕಪ್ಪಾಗಿದ್ದು ಸುರೂಪಿಯಾಗಿರದಿದ್ದರೂ ಕುರೂಪಿಯಲ್ಲದ ಸುಮಾರು ೨೩-೨೪ ವರ್ಷದ ತರುಣಿಗೂ, ೫೫ ವರ್ಷ ದಾಟಿರಬಹುದಾದರೂ, ಗಟ್ಟಿಮುಟ್ಟಾಗಿದ್ದು ಹೆಂಗಸರಿಗಿಂತಲೂ ಗಂಡಸರ ಲಕ್ಷಣವೇ ವಿಶೇಷವಿರುವ ಅವಳ ತಾಯಿ ರುಕ್ಮುವಿಗೂ ಬೆಳಿಗ್ಗಿನ ಗಂಜಿ ಊಟದ ಸಮಯದಲ್ಲಿ ನಡೆದ ಸಂಭಾಷಣೆಯಿದು. ಈ ಸಂದರ್ಭದಲ್ಲಿ, ಆಗ ಗದ್ದೆಯನ್ನು ನಡುನೇಸರಲ್ಲಿ ಉತ್ತು, ಬಹಳ ಹಸಿದು, ಗಂಜಿ ಊಟ ಮಾಡಲು ಅಡಿಗೆ ಕೋಣೆಗೆ ಬಂದ ರುಕ್ಮುವಿನ ಒಬ್ಬನೇ ಗಂಡು ಮಗ ಮುದ್ದಣ್ಣನು. ಕೊರಗನನ್ನೇ ಮದುವೆ ಮಾಡಿಕೊಳ್ಳುವೆನೆಂಬ ಕಮಲಳ ಮಾತನ್ನು ಕೇಳಿ ಉರಿಗೆದರಿದವನಾಗಿ "ಏನು ಕೊರಗನನ್ನೇ ಮದುವೆ ಮಾಡಿಕೊಳ್ಳುವಳಂತೆಯೋ ರಂಡೆ! ಇವಳನ್ನಿಟ್ಟುಕೊಂಡರೆ ಬರ್ಕತಿಲ್ಲ" ಎಂದು ಕಾಲುಮಣೆಯೊಂದನ್ನು ಎತ್ತಿ ಹಿಡಕೊಂಡು, ದಡದಡನೆ ಪಡಸಾಲೆಗೆ ಓಡುವಾಗ, ಪಡಸಾಲೆಯ ಹೊಸ್ತಿಲ ಮೇಲ್ಬಾಗವು ಗದಕ್ಕನೆ ನಡುನೆತ್ತಿಗೆ ಬಡೆದು, ಕೂಡಲೇ ಥರಥರನೆ ನೆತ್ತರು ಹರಿದು ಸ್ಮೃತಿತಪ್ಪಿ ಬಿದ್ದನು. ರುಕ್ಮುವು "ಅಯ್ಯೋ, ಮುದ್ದಣ್ಣ! ಏನಾಯಿತಪ್ಪಾ" ಎಂದು ಓಡಿ ಬಂದು ನೆತ್ತರು ಹರಿದ ನೆತ್ತಿಯ ಭಾಗಕ್ಕೆ ಅಂಗೈ ಒತ್ತಿ ಹಿಡಿದಳು. ಕಮಲಳು ಒಡನೆಯೇ ಅಡಿಗೆಮನೆಗೆ ಓಡಿ ಬಂದು ಒಂದು ಚೆಂಬು ನೀರು ತಂದು ಅಣ್ಣನ ಮುಖಕ್ಕೆ ಹಾಕಿ ರಕ್ತವನ್ನೆಲ್ಲಾ ಒರಸಿ ತೆಗೆಯಲಾರಂಭಿಸಿದಳು

× × × × ×

ಕತ್ತಲೂ ಹಗಲೂ ಅಲ್ಲದ, ಮುಖಮುಖ ಸರಿಯಾಗಿ ತೋರದ, ಮುಂಬೆಳಕಿನ ಮೊದಲ ಹೆಜ್ಜೆಯ ಸಮಯ. ಹೊಸಮನೆಯ ಹಟ್ಟಿಯ ಬಾಗಿಲನ್ನು ಮೆಲ್ಲಗೆ ತೆರೆದು ಸ್ತ್ರೀ ವ್ಯಕ್ತಿಯೊಂದು ಹಟ್ಟಿಯ ಹಿಂದಿನ ದಟ್ಟ ಬೇಲಿ ಗಿಡಗಳಿಂದ ಮುಚ್ಚಿದ ಓಣಿಯಲ್ಲಿ ಸ್ವಲ್ಪ ಮುಂದೆ ಹೋಗುತ್ತಿದ್ದಾಗ ಗಂಡು ವ್ಯಕ್ತಿಯೊಂದು ಗಿಡಗಳ ಮರೆಯಿಂದ ಮೆಲ್ಲಗೆ "ಕಮಲ" ಎಂದಿತು ಸ್ತ್ರೀ ವ್ಯಕ್ತಿಯು ಅಲ್ಲೇ ನಿಂತು "ಕೊರಗಣ್ಣ" ಎಂದು ಮಾರ್ನುಡಿಯಿತು. ಇಬ್ಬರೂ ನಿಮಿಷನಿಮಿಷಕ್ಕೆ ಅತ್ತಿತ್ತ ನೋಡಿ ಪರೀಕ್ಷಿಸುತ್ತಾ, ಪೊದರಿನಿಂದ ಹಕ್ಕಿಯೊಂದು ಟಪ್ಪನೆ ಹಾರಿದರೂ ಬೆದರಿ ಬೆಪ್ಪಾಗುತ್ತಾ, ಈ ಕೆಳಗಿನ ಮಾತುಕತೆ ನಡೆಸುತ್ತಿದ್ದರು:

ಕೊರಗ—"ಕಮಲ, ನನಗಿನ್ನು ಈ ಊರಲ್ಲಿರಲು ಸಾಧ್ಯವಿಲ್ಲ. ಮುದ್ದಣ್ಣ ಶೆಟ್ರು ನನ್ನನ್ನಿಲ್ಲಿ ಜೀವದಿಂದಿರಲು ಬಿಡುವ ಹಾಗಿಲ್ಲ. ನಾನೆಲ್ಲಿಯಾದರೂ ಘಟ್ಟ ಬೆಟ್ಟಕ್ಕಾದರೂ ಹೋಗಿಬಿಡುವೆನು"

ಕಮಲ—(ಉಕ್ಕಿ ಬರುವ ಕಣ್ಣೀರನ್ನು ಸೆರಗಿನಿಂದೊರಸಿ) "ಕೊರಗಣ್ಣ, ಇದಕ್ಕೆಲ್ಲಾ ನಾನೇ ಕಾರಣಳು. ಆಗಲಿ. ಅವರೇನು ಮಾಡಿದರೂ ನಾನು ನಿಮ್ಮನ್ನೇ ಮದುವೆಯಾಗುವ ನಿರ್ಧಾರ ಮಾಡಿರುವೆನು. ನೀವು ಘಟ್ಟಕ್ಕೆ ಹೋದರೆ ನಿಮ್ಮೊಂದಿಗೆ ಬರುವೆನು. ಅಲ್ಲಿಯಾದರೂ ನಾವಿಬ್ಬರು ಈ ಕಾಟದಿಂದ ದೂರವಾಗಿ ಸುಖವಾಗಿರುವ"

ಕೊರಗ—"ನೀನು ನನ್ನೊಂದಿಗೆ ಘಟ್ಟಕ್ಕೆ ಬರುವೆಯಾ? ಅಹ, ಕಮಲ! ಏನು ನೋಡಿ ನೀನು ನನ್ನಲ್ಲಿ ಅನುರಕ್ತೆಯಾಗಿರುವೆಯೋ ತಿಳಿಯದು! ನಿನ್ನ ಮನೆತನ ಸಂಪತ್ತೆಲ್ಲಾ ಎಲ್ಲಿ? ನಾನೆಲ್ಲಿ?"

ಕಮಲ—"ಸುಖ ಕೊಡುವುದು ಮನೆತನ ಸಂಪತ್ತಲ್ಲ. ಆ ಮಾತಂತಿರಲಿ. ನೀವೀಗ ಕಾಲ ಕಳೆಯಬಾರದು. ಬೇಗನೇ ನಾವಿಬ್ಬರೂ ಎಲ್ಲಿಗಾದರೂ ಹೋಗಿ ಬಿಡದಿದ್ದರೆ ನಮ್ಮಿಬ್ಬರ ಪ್ರಾಣವು ಉಳಿಯುವಂತಿಲ್ಲ. ಮೊನ್ನೆ ಅಣ್ಣನು ನನ್ನನ್ನು ಕೊಂದೇ ಬಿಡುತ್ತಿದ್ದ"

ಕೊರಗ—"ಹೌದಂತೆ. ಅವರು ಹೊಸ್ತಿಲು ತಾಗಿ ಬೀಳದಿರುತ್ತಿದ್ದರೆ ನಿನ್ನ ತಲೆ ಒಡೆದು ಹಾಕುತ್ತಿದ್ದರಂತೆ. ಆದರೆ ನನ್ನಲ್ಲೀಗ ಚಿಕ್ಕಾಸಿಲ್ಲ. ಮಾಡುವುದೇನು?"

ಕಮಲ—"ಇನ್ನೂ ಇನ್ನೂ ಮಾಡುವುದೇನು? ಮಾಡುವುದೇನೆಂದು ಯೋಚಿಸುತ್ತಿರಲಾಗುವುದಿಲ್ಲ. ಬೇಗನೆ ಕೆಲಸ ಮಾಡಬೇಕು. ಅಣ್ಣನು ನನಗೊಬ್ಬ ಹುಡುಗ ನನ್ನು ನೋಡಿ ಬಂದಿದ್ದಾನಂತೆ. ಅವನಿಗೆ ಪೆಟ್ಟಾಗದಿದ್ದರೆ ಇಷ್ಟರಲ್ಲೇ ಅವನು ಪುನಃ ಅಲ್ಲಿಗೆ ಹೋಗುತ್ತಿದ್ದ"

ಕೊರಗ—"ನಾನೇನು [illegible]"

ಕಮಲ—([illegible]) [illegible] ವಿಳಂಬಿಸಿದರೆ ನಾನೆಷ್ಟು ಸಮಯ ಗರ್ಭವನ್ನು ಮರೆಸಿಡಬಹುದು? ಎಲ್ಲಿಯಾದರೂ ಅವರಿಗೆ ತಿಳಿಯಿತೆಂದರೆ ನನ್ನ ಗತಿ ತೀರಿತಲ್ಲಿಗೆ. ನಾನು ಮುಟ್ಟೆಂದು ನಟಿಸುತ್ತಾ ಗುಟ್ಟುಳಿಸಿಕೊಂಡಿದ್ದೇನೆ. ಇನ್ನೂ ಹೆಚ್ಚು ಸಮಯ ಅದು ಸಾಧ್ಯವಿಲ್ಲ"

ಕೊರಗ—(ಕಡೆಗಣ್ಣಲ್ಲಿ ತುಂಬಿದ ಕಣ್ಣೀರನ್ನು ದೃಷ್ಟಿ ತಿರುಗಿಸಿ ಒಡನೆಯೇ ತಡೆದು ತುಸು ಸಮಯದ ನಂತರ) ನೀನೊಂದಿಷ್ಟು ಯೋಚಿಸುವುದಿಲ್ಲ ಕಮಲ. ನಿನ್ನ ತಾಯಿಯು ನಿನ್ನ ನಂಟ ಎಲ್ಲಿಯೆಂದು ಕೇಳಿದರೆ ಏನು ಹೇಳುವೆ? ಮೊದಲೇ ನೀನೆಂದರೆ ಉರಿದು ಬೀಳುವ ನಿನ್ನಣ್ಣನು ಅದಕ್ಕಾಗಿಯೇ ನಿನ್ನನ್ನು ಕೊಂದು ಹಾಕಿಯಾನು! ಕಮಲ, ಯೋಚಿಸು. ನೀನು ನಿನ್ನ ಬಂಧು ಬಳಗ ಸುಖಸಂಪತ್ತನ್ನೆಲ್ಲಾ ಬಿಟ್ಟು ದಿನ ದಿನ ಹೊಟ್ಟೆ ಪಾಡಿಗೂ ಗತಿಯಿಲ್ಲದ ನನ್ನೊಡನೆ ಘಟ್ಟಕ್ಕೆ ಬಂದು ಅಸಹನೀಯ ಕಷ್ಟಕ್ಕೀಡಾಗಲು ಸಿದ್ಧಳಿರುವೆಯಾ ಎಂದು ಎರಡೆರಡು ಸಲ ಯೋಚಿಸು. ಮತ್ತೆ ಪಶ್ಚಾತ್ತಾಪ ಪಡಬಾರದು."

ಕಮಲ—"ಇನ್ನೂ ನಿಮಗೆ ನನ್ನ ಮನಸ್ಸಿನ ಪರೀಕ್ಷೆಯಾಗಿಲ್ಲವೇ ಕೊರಗಣ್ಣ? ನನ್ನ ಬಂಧುಬಳಗ ಸುಖಸಂಪತ್ತೆಲ್ಲಾ ಎಂತಹದೆಂದು ನಿಮಗೆ ತಿಳಿಯದುದೇ? ಎಲ್ಲಾ ಕೋಟೆ ಸಿಂಗಾರ. ದಿನದಿನದ ಗಂಜಿಗೆ ಗತಿಯಿಲ್ಲದ ಗರೀಬರಾದರೂ ಗೇಯ್ದು ಗಳಿಸಿದ್ದನ್ನುಂಡು ಸ್ವಲ್ಪ ಸಮಯವಾದರೂ ಸುಖವಾಗಿರುವರು. ನನ್ನೀ ಜೀವನವು ಒಂದು ಕ್ಷಣವಾದರೂ ಸುಖವೆಂಬುದನ್ನು ಕಂಡುದಿಲ್ಲ. ಈ ಸಂಪತ್ತಿನ ಸುಖವನ್ನುಂಡುಂಡು ನನಗೆ ಸಾಕಾಯಿತು. ಇನ್ನು ನಿಮ್ಮೊಂದಿಗೆ ಕೂಡಿ ಬಡಪತ್ತಿನ ದುಃಖದಲ್ಲಾದರೂ ಸುಖವಿರುವುದೋ ನೋಡುವೆನು".

ಕೊರಗ—"ಕಮಲ, ನೀನು ಅಷ್ಟರ ಮಟ್ಟಿಗೆ ಸಿದ್ಧಳಿರುವೆಯಾದರೆ, ನಾನಾ ನಡು ಬೆಟ್ಟಿನ ಬೊಗ್ಗು ಶೆಟ್ರಿಂದಾದರೂ ಘಟ್ಟಕ್ಕೆ ಬರುವೆನೆಂದು ಹೇಳಿ ಎಡ್ವಾನ್ಸ್ ಪಡೆದು ಘಟ್ಟಕ್ಕೆ ಹೋಗುವ ಸಿದ್ಧತೆ ಮಾಡುವೆನು ಆದರೆ ಇನ್ನು ಸ್ವಲ್ಪ ದಿನ ಹೋಗಬೇಕು. ಇನ್ನೊಂದು ತಿಂಗಳ ದಿವಸ ಕೊಳಕೆ ನೀರೆಳೆಯಲು ವಹಿಸಿಕೊಂಡುದ್ದುಂಟು. [ಮನೆಯ ಕುರುಬಾಗಿಲನ್ನು ಯಾರೋ ತೆರೆದ ಶಬ್ಧವಾಗುವುದು.] "ಅದೋ ನಿನ್ನ ತಾಯಿ ಹೊರ ಬರುವಂತಿದೆ ನಾನು ಹೋಗುವೆನು. ಇನ್ನೊಮ್ಮೆ ಮಾತಾಡ ಸಿಗುವೆನು" ಎಂದು ಕೊರಗನು ಬೇಲಿಯ ನಡುವೆ ತೂರಿ, ಅಡಿಗಿಳಿದು ಮರೆಮರೆಯಾಗಿ ಹೋಗಿಬಿಡುವನು. ಕಮಲಳು ಓಣಿಯಲ್ಲೇ ನೀದ ಹೋಗುವಳು.

× × × × × ×

ಎಪ್ರಿಲ್ ತಿಂಗಳಾರಂಭದ ಕಡು ಬೇಸಗೆ ಸಮಯ. ಅದರಲ್ಲೂ ಮಟ ಮಟ ಮಧ್ಯಾಹ್ನ. ಆಗ ತಾನೆ ಮನೆಗೆ ಬಂದಿದ್ದ ಮುದ್ದಣ್ಣನು ಬಿಸಿಲಿನ ಬೇಗೆಯಿಂದ ಬೆಂದು, ಬೆವರಿಂದ ಮಿಂದು ಬಹಳ ಬಳಲಿದವನಾಗಿ ಪಥಸಾಲೆಯಲ್ಲಿ ಕುಳಿತಿದ್ದನು. ರುಕ್ಕುವು ಒಂದು ಲೋಟೆ ದಪ್ಪದ ಮಜ್ಜಿಗೆಯನ್ನು ತಂದಿಟ್ಟು ಉಸ್ಸೆಂದು ಅವನಿದಿರಲ್ಲಿಯೇ ಕುಳಿತಳು. ಮುದ್ದಣ್ಣನು ಮಜ್ಜಿಗೆಯನ್ನೆಲ್ಲಾ ಒಂದೇ ಸವನೆ ಕುಡಿದು ಲೋಟೆ ಕೆಳಗಿಟ್ಟು "ಅಯ್ಯಪ್ಪಾ!" ಎಂದು ಉಟ್ಟಿದ್ದ ಉದ್ದವಾದ ಬೈರಾಸಿನ ತುದಿಯನ್ನೆತ್ತಿ ಗಾಳಿ ಹಾಕಿಕೊಳ್ಳ ತೊಡಗಿದನು. ರುಕ್ಕುವು ಬಹಳ ಆತುರ ಮುಖಮುದ್ರೆಯಿಂದ ಅವನನ್ನೇ ನೋಡುತ್ತಾ ಮೆಲ್ಲಗೆ "ಹೋದ ಕೆಲಸವಾಯಿತೇ?" ಎಂದಳು. "ಹೋದ ಕೆಲಸ ಆಯಿತು. ಮನೆಮಾರಿ ಬದಿ ಕೊಡಲಿಕ್ಕೆ ಸಿದ್ಧವಿದ್ದರೆ! ರೂ. ೪೦೦೦ ಬದಿ ಕೊಡಬೇಕಂತೆ" ಎಂದು ಮುದ್ದಣ್ಣನು ಸಿಡುಕಿದನು.

ರುಕ್ಕು—"ಬದಿ ಕೊಟ್ಟರೂ ಹುಡುಗ ಒಪ್ಪುವನೇ?"

ಮು—"ಒಪ್ಪದೇನು? ಅವನೊಂದು ಮನೆತನದವನೆಂದು, ನಿರ್ವಾಹವಿಲ್ಲೆಂದು ಹೆಣ್ಣು ಕೊಡಬೇಕೇ ಹೊರತು ಮತ್ತೇನಿಲ್ಲ!"

ರುಕ್ಕು—"ದೊಡ್ಡ ಕಾರ್‌ಬಾರಿಯಂತೆ!"

ಮು—ಹೌದು, ಕಾರ್‌ಭಾರೆಲ್ಲಾ ಮನೆ ತೆಗೆಯುವುದು!"

ರುಕ್ಕು—"ಅಂದರೆ?"

ಮು—"ಅಂದರೆ ಇದ್ದ ಹಣವನ್ನೆಲ್ಲಾ ಸೂಳೆಯರಿಗೂ ಜುಗಾರಿಗೂ ಇಚ್ಛಾನುಸಾರ ಖರ್ಚು ಮಾಡಿ ಈಗ ಮೈತುಂಬಾ ಸಾಲವಾಗಿದೆ"

ರುಕ್ಕು—"ಅದು ಸಹ ಅಷ್ಟೆಯೋ? ಕಾಸುಕೊಟ್ಟು ಹೊಳೆ ಈಜುವ ವ್ಯಾಪಾರವೋ? (ತುಸುಹೊತ್ತು ಸುಮ್ಮಗಿದ್ದು) ಆದರೂ ಮನೆತನವೊಂದುಂಟಲ್ಲವೇ? ನೆಂಟಸ್ತಿಕೆ ನಮಗೆ ಮಿಕ್ಕಿದುದೇ ಸರಿ. ಅಂತೂ ಇನ್ನು ನಂತರದ ಯಜಮಾನ ಅವನಲ್ಲವೇ? ಇನ್ನು ಒಳ್ಳೇ ಬುದ್ಧಿ ಬಂದರೂ ಬರಬಹುದು. ಹೇಗೂ ನಮಗೀಗ ಬಂದಿದೆಯಲ್ಲ ಕುತ್ತಿಗೆಗೆ!"

ಮು—"ಆದರೆ ಈಗ ಒಮ್ಮೆಯೇ ಅಷ್ಟು ಹಣಕ್ಕೆ ಎಲ್ಲಿ ಹೋಗುವುದು?"

ರುಕ್ಕು—"ಆಸ್ತಿ ಅಡವಾದರೂ ಹಾಕಿ ಹಣ ಒದಗಿಸಬೇಕು, ಮತ್ತೇನು ಮಾಡುವುದು ನಿರ್ವಾಹವಿಲ್ಲದಿದ್ದರೆ!"

ಮು—"ಸೈ, ಈ ಶನಿಯೊಬ್ಬಳ ಮದುವೆಗಾಗಿ ಮನೆ ಕಳಕೊಂಡರೆ ಸರಿ!"

ಈ ಮಾತುಕತೆಯನ್ನು ಅಡಿಗೆ ಕೋಣೆಯ ಒಂದು ಮೂಲೆಯಲ್ಲಿ ನಿಂತು ಕೇಳುತ್ತಿದ್ದ ಕಮಲಳು ಹೃದಯದ ಆವೇಗವನ್ನು ತಡಕೊಳ್ಳಲಾರದೆ ಥಟ್ಟನೆ ಪಥಸಾಲೆಗೆ ಬಂದು, "ನನಗೋಸ್ಕರ ಯಾರೂ ಕಷ್ಟಪಡುವುದೂ ಬೇಡ. ಸಿಕ್ಕಿದ ಸೂಳೆಯರನ್ನಿಟ್ಟುಕೊಂಡು ಜುಗಾರಿಖೋರನಾಗಿರುವ ಬಚ್ಛಾಳಿಗೆ ನನ್ನನ್ನು ಬಲಿಗೊಡುವುದಕ್ಕಿಂತ ಕೊರಗನಿಗೇಕೆ ಮದುವೆ ಮಾಡಿಕೊಡಬಾರದು? ಆಸ್ತಿ ಅಡವು ಹಾಕಿ ಹಣವನ್ನು ನೀರಿಗೆ ಹಾಕುವುದಕ್ಕಿಂತ ಅನುಕೂಲವಿದ್ದಷ್ಟು ಹಣವನ್ನೊ, ಸ್ವಲ್ಪ ಆಸ್ತಿಯನ್ನೋ ಕೊರಗನಿಗೇನೇ ಕೊಟ್ಟು ಸಹಾಯ ಮಾಡಿದರೆ ನಾವಿಬ್ಬರೂ ಸುಖವಾಗಿರಬಹುದಲ್ಲವೇ? ನಿಮಗೆ ಬೇಕಾದುದು ನನ್ನ ಸುಖವೇ? ಒಣ ಆಡಂಬರವೇ?"

ಮು:—"ನಡಿಯುತ್ತಿಯೋ ಇಲ್ಲವೋ ಒಳಗೆ? ಮಾನಮರ್ಯಾದೆಯಿಲ್ಲದವಳೇ? ಇನ್ನು ಕೊರಗನ ಮಾತೆತ್ತಿದರೆ ನಾಲಿಗೆ ಕೊಯ್ದು ಕೊಯ್ದು ಹಾಕುತ್ತೇನೆ! ಜಾಗ್ರತೆ! (ರುಕ್ಕುವಿನ ಕಡೆಗೆ ತಿರುಗಿ) ಈ ರಂಡೆಯನ್ನು ಕೊಂಡಾಟ ಮಾಡಿ ಬೆಳೆಸಿಟ್ಟವಳು ನೀನು! ಈಗ ಎರಡೂ ಕೈಗಳಿಂದ ತಿನ್ನದರ ಫಲವನ್ನು!" ಎಂದು ಮುದ್ದಣ್ಣನು ಕಮಲಳನ್ನು ಧುರಧರನೆ ನೋಡಿ ಹೊರ ಹೋಗಿ ಬಿಡುವನು.

× × × × ×

ಸುಮಾರು ೧೦॥ –೧೧ ಗಂಟೆ ರಾತ್ರಿ ಸಮಯ. ಮುದ್ದಣ್ಣನು ರಾತ್ರಿ ಎಲ್ಲಿಗೋ ಹೊರಗೆ ಹೋದವನು ಹಿರುಗಿದಾಗ ಬಹಳ ಹೊತ್ತಾಗಿದ್ದಿತು. ಅವನು ಕೂಡಲೆ ಕೈ ಕಾಲು ತೊಳೆದು ಊಟಕ್ಕಾಗಿ ಅಡಿಗೆ ಕೋಣೆಗೆ ಬಂದನು. ರುಕ್ಕುವಿನ ಹೊರತು ಇತರರೆಲ್ಲರೂ ಊಟ ಮಾಡಿ ಮಲಗಿದ್ದರು. ರುಕ್ಕವು ಬಹಳ ಬಾಡಿದ ಮುಖದಿಂದ ಹೆಜ್ಜೆಹೆಜ್ಜೆಗೆ ನಿಟ್ಟುಸಿರಿಡುತ್ತಾ ಮುದ್ದಣ್ಣನಿಗೆ ಬಡಿಸಿ ಒಂದೆಡೆ ಕಾಲುಮಣೆಯ ಮೇಲೆ ಕೂತಳು. ಊಟ ಮಾಡುತ್ತಿದ್ದ ಮುದ್ದಣ್ಣನಿಗೂ ಅವಳಿಗೂ ಈ ಕೆಳಗಣ ಮಾತು ನಡೆಯಿತು:

ರುಕ್ಕು—(ಕಣ್ಣೀರನ್ನು ಸೆರಗಿಂದೊರಸಿ)ಇನ್ನು ಮರ್ಯಾದೆ ಹೋದ ಹಾಗೆಯೇ ಸರಿ ಮುದ್ದಣ್ಣ! ಊರೆಲ್ಲಾ ಸುದ್ದಿಯಾಗಿ ಬಿಟ್ಟದೆ."

ಮುದ್ದಣ್ಣ—"ಕೊಳಕಿರುವಾಗ ದುರ್ವಾಸನೆ ಹಬ್ಬದಿರುವುದೇ?"

ರುಕ್ಕು—"ಇನ್ನೇನು ಮಾಡುವುದಪ್ಪಾ! ಇಡೀ ಕುಟುಂಬಕ್ಕೇನೇ ಒಂದು ಕಳಂಕ ತಂದಳಲ್ಲಾ!" ಎಂದು ಬಿಕ್ಕಿ ಬಿಕ್ಕಿ ಅಳುವಳು.

ಮು—"ಅಳುವುದೇಕಮ್ಮ? (ಆಕ್ರೋಶದಿಂದ) ಎಷ್ಟು ಮಾತ್ರಕ್ಕೂ ಅವಳಾ ಮದ್ದು ತೆಗೆದುಕೊಳ್ಳಲೊಪ್ಪುವುದಿಲ್ಲವೆ?"

ರುಕ್ಕು "ಇಲ್ಲ. ಪ್ರಾಣ ಹೋದರೂ ಅವಳಾ ಮದ್ದು ತೆಗೆದುಕೊಳ್ಳಲಾರಳಂತೆ. ಮದ್ದು ಕೊಟ್ಟು ಗರ್ಭನಾಶ ಮಾಡುವುದಕ್ಕಿಂತಲೂ ಅವಳಿಗೇನೇ ವಿಷ ಕೊಟ್ಟು ಕೊಲ್ಲುವುದೊಳ್ಳೇದಂತೆ. ಅವಳು ಬಾಯ್ಬಿಟ್ಟು ಅಳುವಾಗ ನನಗೆ ಸಹಿಸಿಕೊಳ್ಳಲಾಗುವುದಿಲ್ಲ ಮುದ್ದಣ್ಣ. ಸತ್ತುಕೊಳ್ಳಿ ಅವಳು; ಕೊರಗನೀಗೇ ಅವಳನ್ನು ಮದುವೆ ಮಾಡಿ ಕೊಡುವ."

ಮು—(ಔಡುಗಚ್ಚಿ ಕಣ್ಣು ಕೆರಳಿಸಿ) "ಏನು? ಕೊರಗನಿಗೆ ಮದುವೆ ಮಾಡಿ ಕೊಡುವುದೇ? ನಾನು ಜೀವದಿಂದಿರುವ ವರೆಗೆ ಇದು ಸಾಧ್ಯವಿಲ್ಲ. ಎಷ್ಟು ಹುಡುಕಿದರೂ ಆ ಸೂಳೆಮಗ ಕೊರಗನ ಪತ್ತೆಯೇ ಇಲ್ಲ. ಸಿಕ್ಕುತ್ತಿದ್ದರೆ ಕೈಕಾಲು ಮುರಿದು

ವಿಧಿ ಮಹಿಮೆ.

ಲೇಖಕರು:—ಶ್ರೀ. ಟಿ. ನಾರಾಯಣ ಭಟ್, ವಿದ್ವಾನ್, ಕೆನರಾ ಹೈಸ್ಕೂಲು, ಮಂಗಳೂರು.

೧



ಅದೇನೋ ಹೇಳುವುದಕ್ಕಾಗುವುದಿಲ್ಲ. ಚಳಿಗೆ ಕೋಡುವುದೂ ಇಲ್ಲ; ಸೆಕೆಗೆ ಬಾಡುವುದೂ ಇಲ್ಲ; ಅಂತಹ ಪ್ರಕೃತಿ ಕೆಲವರದು ಇದು ಗಂಡಸರಿಂದ ಹೆಂಗಸರಲ್ಲಿ ಹೆಚ್ಚು. ವಿಧಿಯೆಂಬವನು ಯಾವುದು ಮಾಡದಿದ್ದರೂ ದುಃಖದ ಸೆಳೆತದಲ್ಲಿ ಕೈತಾಂಗಿನಷ್ಟು ಕೆಲಸ ಮಾಡಿ ಸುಳಿಯೊಡನೆ ಸುಳಿಯ ಬಿಟ್ಟರೂ ಮುಳುಗದಂತೆ ಮಾಡುವನು; ಒಡಲುರಿಯಿಂದ ಬಾಡಿ ಬೆಂಡಾದರೂ ಸೀದು ಬೆಂದು ಹೋಗದಂತೆ ನೋಡಿಕೊಳ್ಳುವನು. ಕೆಲವರು ವಿಧಿಯ ಕೈ ತಪ್ಪಿಸಿ ತಮ್ಮ ಕೈಯಿಂದಲೇ ತಮ್ಮ ದುಃಖ ಸುಖಗಳನ್ನು ಕೊನೆಗಾಣಿಸಿಕೊಳ್ಳುವರು; ಇದು ಕೂಡ ವಿಧಿಯಲ್ಲದೆ ಬೇರೆ ಏನು? ಆದರೆ ಶಾರದೆಗೆ ಎಷ್ಟೆಷ್ಟು ಯೋಚಿಸಿದರೂ ಆತ್ಮಹತ್ಯಕ್ಕೆ ಮನಸ್ಸೊಪ್ಪದು. ವಿಧವೆಯಾದ ಮೇಲೆ ಒಂದು ಬಗೆಯಲ್ಲಿ ಹೆಣದಂತೆಯೇ ಸರಿ; ಜೀವವಿರುವ ಹೆಣ. ವಿಧವೆಯಾದರೂ ಮುದ್ದುಮಾತಿನಿಂದ ಮುದ್ದಿಸಿಕೊಳ್ಳುವ ಹೆತ್ತ ತಾಯಿ ಇದ್ದರೆ, ಮುದ್ದಿಸಿ ಎದೆ ತಣಿಸಿಕೊಳ್ಳುವುದಕ್ಕೆ ಹೊಟ್ಟೆಯ ಮಕ್ಕಳಿದ್ದರೆ, ಕೊಂಚ ಸಮಾಧಾನ ವಿರುವುದುಂಟು. ಶಾರದೆಗೆ ಆ ಎರಡು ವಿಧದಿಂದ ಸಮಾಧಾನಪಟ್ಟುಕೊಳ್ಳುವ ಭಾಗ್ಯವೂ ಇರಲಿಲ್ಲ. ಅವಳು ಈ ಲೋಕದ ಬೆಳಕನ್ನು ಕಂಡಾಗಲೆ ಅವಳ ತಾಯಿ ಆ ಲೋಕದ ಪ್ರಕಾಶದಲ್ಲಿ ಮರೆಯಾಗಿದ್ದಳು. ಅವಳಿಗೆ, ತಾಯಿಯೂ ದಾದಿಯೂ ಸರ್ವಸ್ವವೂ ಆಕೆಯ ಮುದಿ ಅಜ್ಜಿಯೇ ಆಗಿದ್ದಳು. ಶಾರದೆಯು ಗಂಡನ ಮನೆಗೆ ಹೋಗುವುದನ್ನು ನೋಡಿದ ಮೇಲೆಯೇ ಸತ್ತುಬಿಡಬೇಕೆಂಬ ಅಜ್ಜಿಯ ಹಂಬಲದಿಂದ ಶಾರದೆಗೆ ಚಿಕ್ಕಂದಿನಲ್ಲೆ ವಿವಾಹವು ನಡೆದುಹೋಯಿತು. ಅಷ್ಟರ ತನಕ ಅಜ್ಜಿ ಹೇಗಾದರೂ ಪ್ರಾಣವನ್ನು ತಡೆದಿದ್ದಳು. ಆದರೆ ಅಷ್ಟರಲ್ಲೆ ಅಜ್ಜಿಗೆ ಬದುಕುವ ಆಸೆ ಮುಗಿಯಲಿಲ್ಲ. ಶಾರದೆಗೆ ಒಂದು ಮಗು ಹುಟ್ಟಿ ಅದನ್ನೊಮ್ಮೆ ಮುದ್ದಿಸಿ ಕಣ್ಣು ಮುಚ್ಚಿ ಬಿಡುವುದೆಂದು ಅವಳು ಎಣಿಸಿದ್ದಳು. ಅಂತೂ ಆಸೆಗೆ ಕೊನೆಯುಂಟೆ? ಆಸೆಯ ಕುಡಿಯನ್ನು ಆಗಾಗ ಚಿವುಟುವ ಕೈಯು. ಶಾರದೆಯ ಗಂಡನ ಜೀವನದೆಳೆಯನ್ನು ಕಡಿದುಬಿಟ್ಟಿತು. ಶಾರದೆಯು ಬಾಲವಿಧವೆಯಾದಳು. ಮತ್ತೂ ಬದುಕಬೇಕೆಂಬ ಆಸೆ ಇದ್ದರೂ ಮುದುಕಿಯು ಮತ್ತೆ ಹೆಚ್ಚುಕಾಲ ಉಳಿಯಲಿಲ್ಲ. ಈಗ ಶಾರದೆಯು ಗೊತ್ತುಗುರಿಯಿಲ್ಲದ ಬದುಕಿನ ಕತ್ತಲೆಯ ದಾರಿಯಲ್ಲಿ ಒಬ್ಬಳೆ ನಡೆಯುವಂತಾಯಿತು. ಪ್ರಕಾಶರಾಯರ ಭಾಗ್ಯಾಕಾಶದಲ್ಲಿ ಅವರ ಜೀವನಪಥವನ್ನು ಪ್ರಕಾಶಗೊಳಿಸುವ ಒಂದೇ ಒಂದು ನಕ್ಷತ್ರದ ಸುಳಿವಿಲ್ಲ. ಗಂಡುಮಕ್ಕಳಿಲ್ಲ ಅವರಿಗೆ; ಒಬ್ಬಳು ಹೆಣ್ಣು ಮಗಳಿದ್ದವಳು ವಿಧವೆ. ಅವರು ಈ ಲೋಕದಲ್ಲಿ ಕಂಡದ್ದು ಹೆಚ್ಚು ಕಾಣುವುದಕ್ಕಿನ್ನು ಸ್ವಲ್ಪ ಎಂಬ ವಯಸ್ಸಿನವರಾಗಿದ್ದರೂ ಮನೆಗೊಬ್ಬ ಒಡತಿಯ ಆವಶ್ಯಕತೆಯನ್ನು ಆಗಾಗ ಕಾಣುತ್ತಿದ್ದರು.

ಪ್ರಕಾಶರಾಯರು, ಪ್ರಾಯದ ಹೋಕಿನಲ್ಲಿ ತನಗೊಂದು ಆಧಾರವೂ ಆಯಿತು. ಏಕಾಕಿಯಾಗಿ ಮರುಗಿ ಬೆಂಡಾಗದಂತೆ ಮಗಳನ್ನು ನೋಡಿಕೊಳ್ಳುವುದಕ್ಕೆ ಜೊತೆಗಾತಿಯೂ ಆಯಿತು—ಎಂಬ ಎರಡೆಣಿಕೆಯಿಂದ ತಮ್ಮ ಐವತ್ತೈದನೆಯ ವಯಸ್ಸಿನಲ್ಲಿ ಹೆಚ್ಚು ಗದ್ದಲವಿಲ್ಲದೆ ಒಂದು ಮದುವೆಯನ್ನು ಮಾಡಿಕೊಂಡರು. ತಂದೆ ಮಾಡಿದ್ದು ಸರಿಯೋ ತಪ್ಪೋ ಎಂದು ತೀರ್ಮಾನಿಸುವುದಕ್ಕಾಗಲೀ, ಸರಿಯಾದರೆ ಅವರನ್ನು ಅಭಿನಂದಿಸುವುದಕ್ಕಾಗಲಿ, ತಪ್ಪಾದರೆ ಜರೆಯುವುದಕ್ಕಾಗಲಿ ಶಾರದೆಗೆ ಮನಸ್ಸಿರಲಿಲ್ಲ. ಅವಳ ಸುತ್ತು ಮುತ್ತು ನಡೆಯುವುದೆಲ್ಲ ಒಂದು ಆಟದಂತೆ ಅವಳಿಗೆ ಭಾಸವಾಗುತ್ತಿತ್ತು. ಅಲ್ಪ ಕಾಲವನ್ನು ಓದಿನಲ್ಲಿಯೋ, ಸ್ವಲ್ಪ ಕಾಲವನ್ನು ಕಸೂತಿಯಲ್ಲಿಯೋ, ಉಳಿದ ಕಾಲವನ್ನು ಗೆಳತಿಯರೊಡನೆ ಹರಟುವುದರಲ್ಲಿಯೋ—ಹಾಗೂ ಹೀಗೂ ಮಾಡಿ ದಿನ ಕಳೆಯುತ್ತಿದ್ದಳು. ಆದರೆ ಅವಳ ಮುಖದಲ್ಲಿ ಚಿಂತೆಯ ಮುದ್ರೆ ಇರಲಿಲ್ಲ. ಯಾವಾಗಲೂ ನಗು ಮುಖ ಅವಳದು. ನೋಡಿದವರು—ಇವಳಿಗೆ ಗಂಡ ಸತ್ತಿದ್ದಾನೆಂದು ಗೊತ್ತೇ ಆಗಿಲ್ಲವಷ್ಟೆ, ಪಾಪ—ಎಂಬ ಅಭಿಪ್ರಾಯವನ್ನು ಪಟ್ಟುಕೊಳ್ಳುವ ಹಾಗಿತ್ತು- ಅವಳ ಮುಖಭಾವ. ಚೆಲುವೆಯೂ ಆಗಿದ್ದಳು. ಈ ಸ್ಥಿತಿಯಲ್ಲಿಯೂ ದುಃಖಿಸಿ ದುಃಖಿಸಿ ಸಿತ್ಯ ಕಣ್ಣೀರಿನ ಹೊನಲಿನಲ್ಲಿ ಕೈ ತೊಳೆಯುವಂತೆ ಮಾಡಿಕೊಳ್ಳುವುದಿಲ್ಲವಷ್ಟೆ ಇವಳು—ಎಂದು ಪ್ರಕಾಶರಾಯರಿಗೂ ಸಮಾಧಾನವಾಗಿತ್ತು. ಹೊರಗೆ ಸಂತೋಷದ ಚಿಹ್ನೆ ಇದ್ದರೂ ಅವಳ ಒಳಗಿನ ದುಃಖಕ್ಕೆ ಆಗ ಒಂದು ಸ್ವರೂಪ ಬಂದಿರಲಿಲ್ಲ; ಆ ದುಃಖಕ್ಕೆ ಉದ್ದೀಪನಗಳಿರಲಿಲ್ಲ. ಆದುದರಿಂದ ಅದು ಹಾಗೆಯ ಬೂದಿ ಮುಚ್ಚಿದ ಕೆಂಡದಂತೆ ಕಾಣಿಸಿಕೊಳ್ಳುವಾಗ ಪ್ರಸನ್ನವಾಗಿದ್ದರೂ ಅನುಭವಿಸುವಾಗ ಕರ್ಕಶವಾಗಿ ಶಾರದೆಯ ಒಳ ಬಗೆಯನ್ನು ಕೊರೆಯುತ್ತಲೆ ಇತ್ತು. ಓದು ಬರಹ ಬಲ್ಲವಳಾದುದರಿಂದ ವಿಧವಾ ವಿವಾಹದ ಕುರಿತು ಅವಳು ಅಲ್ಪ ಸ್ವಲ್ಪ ಓದಿದ್ದಳು. ಆದರೆ, ಅದು ಎಷ್ಟೆಂದರೂ ತಾನು ಹುಟ್ಟಿದ ಮನೆಗೂ ಸೇರಿದ ಮನೆಗೂ ಕಳಂಕದಾಯಕವೆಂದು ತಿಳಿದು ಆಕೆಯು ಆ ದಾರಿಯಲ್ಲಿ ಯೋಚನೆಯನ್ನು ಹೆಚ್ಚು ಮುಂದೆ ಸರಿಯಿಸಲಿಲ್ಲ.

ಕಾಲ ಕಳೆದಂತೆ ತಂದೆ ಮಗಳ ಧ್ಯಾನವು ಇಬ್ಬಗೆಯಾಗಿ ಹರಿಯ ತೊಡಗಿತು. ಎಷ್ಟೆಂದರೂ ಪ್ರಕಾಶರಾಯರಿಗೆ ತನ್ನ ನವವಧುವಿನೊಡನೆ ಸರಸಸಲ್ಲಾಪಗಳನ್ನಾಡದೆ ಮನಸ್ಸು ಕೇಳುತ್ತಿರಲಿಲ್ಲ. ಅವರು ಯಾವಾಗಲೂ ರಾತ್ರಿಯೂಟದ ಬಳಿಕ ಬೇಗನೆ ತಮ್ಮ ಕೋಣೆಗೆ ಸೇರಿಕೊಳ್ಳುವ ಅಭ್ಯಾಸವನ್ನು ಮಾಡಿಕೊಂಡರು. ಶಾರದೆಯು ಸಮವಯಸ್ಕಳಾದ ಚಿಕ್ಕಮ್ಮನೂ ಮನೆಗೆಲಸಗಳನ್ನು ಬೇಗನೆ ತೀರಿಸಿ ಹೆಚ್ಚು ತಡ ಮಾಡದೆ ರಾಯರನ್ನು ಅನುಸರಿಸುತ್ತಿದ್ದಳು. ಶಾರದೆಗೆ ಇರುಳ ಸಂಗಾತಿಗಳೆಂದರೆ ಮನ ಕೊರೆಯುವ ತನ್ನ ಚಿಂತೆ,—ಚಿಂತೆಯ ಭಾರದಿಂದ ಬಳಲಿ ಎಲ್ಲಿಯಾದರೂ ಸ್ವಲ್ಪ ನಿದ್ದೆ ಹತ್ತಿತೆಂದರೆ ಹಾಳು ಸ್ವಪ್ನಗಳು; ಇಷ್ಟು ಮಾತ್ರ. ಹಾಗೂ ಇರುಳಲ್ಲಿ ಅವಳು ಎಚ್ಚರವಾಗಿರುವ ಸಮಯವೆ ಹೆಚ್ಚು; ಸುಖನಿದ್ರೆಯ ಕಾಲ ಬಹಳ ಕಡಿಮೆ. ಕಷ್ಟಕಾಲದಲ್ಲಿ ಎಲ್ಲರೂ ಕೈ ಬಿಡುವುದೆಂದರೆ ಹೀಗೆಯೇ. ನಿದ್ರಾದೇವಿಯು ಆ ನಿರ್ಭಾಗ್ಯಳಿಗೆ ಏಕೆ ಸಹಾಯಳಾಗುವಳು? ಒಂದಿರುಳು ಶಾರದೆಯು ಆಲೋಚಿಸಿ ಆಲೋಚಿಸಿ ತಂದೆಯ ತಪ್ಪು ನಡತೆಯನ್ನು ನೆನಸಿ ನೆನಸಿ ಅಳ ತೊಡಗಿದಳು. ಅವಳು ಅತ್ತುದು ತಂದೆಯು ಅನ್ಯಾಯ ಮಾಡಿದನೆಂತಲೇ ಅಲ್ಲ; ತನಗೆ ನ್ಯಾಯವನ್ನು ಮಾಡುವ ಮನಸ್ಸೇಕೆ ಅವನಲ್ಲಿ ಹುಟ್ಟಲಿಲ್ಲವೆಂಬುದೇ ಅವಳ ಚಿಂತೆಯ ಮೂಲ. "ಗಂಡಸರು ತಿರಿಗಿ ವಿವಾಹವಾಗ ಬಹುದು; ಅದು ಕೂಡಾ ಅಪರವಯಸ್ಸಿನಲ್ಲಿ. ಎಳೆ ವಯಸ್ಸಿನಲ್ಲಿ ಹೆಂಗಸರು ವಿಧವೆಯರಾದರೆ ಅವರು ಸಾಯುವ ತನಕ ಮತ್ತೆ ಸುಖದ ಹಂಬಲವೇ ಅವರಿಗೆ ಹೇಳಿದ್ದಲ್ಲ. ಇದೆಂತಹ ಧರ್ಮ?" ಎಂಬ ಯೋಚನೆಯು ಅವಳಲ್ಲಿ ಎಂದಿಗೆ ಹುಟ್ಟಿತೊ ಅಂದಿಸಿಂದ ಅವಳು ತನ್ನ ಮನಸ್ಸಿನಲ್ಲಿ ಬೇರೆ ಯೋಚನೆಗೆ ಎಡೆಗೊಡಲಿಲ್ಲ.

೨

ಶ್ರೀಕರರಾಯನು ಬಿ. ಎ. ಪಾಸುಮಾಡಿಕೊಂಡು ಊರಿಗೆ ಬಂದಿದ್ದನು. ಅವನ ಉದ್ಯೋಗವೆಂದರೆ ಉದ್ಯೋಗವನ್ನು ಹುಡುಕುವ ವೃತ್ತಿ ಮಾತ್ರ. ಅವನು ಅಷ್ಟೇನು

ರೂಪವಂತನಾಗಿರಲಿಲ್ಲ. ಆದರೂ ಯುವಕರಲ್ಲಿ ಆಕರ್ಷಕವಾಗಿರುವುದು ಬರಿಯ ಸೌಂದರ್ಯವೇ ಅಲ್ಲ. ಆಕರ್ಷಿಸುವುದಕ್ಕೂ ಆಕರ್ಷಿಸಲ್ಪಡುವುದಕ್ಕೂ ಶ್ರೀಕರನ ತುಂಬು ಮೈ, ಕಣ್ಣ ಹೊಳಪು, ಹಣೆ ಕೆನ್ನೆಗಳಲ್ಲಿ ಪ್ರಕಾಶಿಸುವ ತೇಜಸ್ಸು—ಇಷ್ಟೇ ಸಾಕಾಗಿತ್ತು. ಅವನು ಪ್ರಕಾಶರಾಯರ ದೂರದ ಸಂಬಂಧಿಯಾದುದರಿಂದ ಅವನಿಗೆ ಆಗಾಗ ರಾಯರ ಮನೆಗೆ ಬಂದು ಹೋಗುವುದಕ್ಕೆ ಕಾರಣವನ್ನು ಬೇರೆ ಹುಡುಕಬೇಕಾಗಿರಲಿಲ್ಲ. ಶ್ರೀಕರನನ್ನು ಕಂಡಾಗಲೆಲ್ಲ ಶಾರದೆಯ ಇತರ ಎಲ್ಲ ಇಂದ್ರಿಯಗಳ ಕಾರ್ಯಭಾಗವನ್ನು ಕಣ್ಣೇ ವಹಿಸುವಂತಿತ್ತು—ಒಮ್ಮೊಮ್ಮೆ ಅವರಿಗೆ ಮಾತಾಡಿಕೊಳ್ಳುವುದಕ್ಕೂ ಎಡೆ ದೊರೆಯುತ್ತಿತ್ತು; ದೊರೆಯದಿದ್ದರೆ ದೊರಕಿಸಿಕೊಳ್ಳುವುದಕ್ಕೆ ಅವರರಿಯರೆ?

× × × × × × × ×

ಪ್ರಕಾಶರಾಯರು ಎಂದಿನಂತೆ ತಮ್ಮ ಕೋಣೆಯಲ್ಲಿ ಸುಖ ನಿದ್ರಾಪರವಶರಾಗಿದ್ದರು. ಊರ ಹೊರಗೆ ಒಂದೆರಡು ಬೀದಿಯ ನಾಯಿಗಳು ಬೋ!!! ಎಂದು ಕೂಗುತ್ತಿದ್ದುವು. ಮತ್ತೆಲ್ಲ ನೀರವ. ಆ ಅಂಧಕಾರದ ಇರುಳಲ್ಲಿ ಆಕಾಶ ತುಂಬಾ ತಾರೆಗಳು ಮಿನುಗುತ್ತಿದ್ದುವು. ಆ ತಾರೆಗಳೊಡನೆ ಪ್ರತಿಸ್ಪರ್ಧಿಸುವಂತೆ, ತನ್ನ ಕೋಣೆಯಲ್ಲಿ ಎಚ್ಚರವಾಗಿ ಕೂತಿರುವ ಶಾರದೆಯ ಆಶಾಕಿರಣವು ಒಮ್ಮೆ ಮಿಂಚಿ ಒಮ್ಮೆ ಮಾಜುವಾಗಿ ತಿರಿಗೊಮ್ಮೆ ಹೊಳೆಯುವಂತಿತ್ತು. ಶಾರದೆಯು ಆಕಾಶವನ್ನು ನೋಡಿ, ಹಾಗೆಯೆ ತಾನೂ ಮನೋಹರವಾಗಿರ ಬೇಕೆಂದೆಣಿಸಿಯೋ ಏನೋ—ಹೊಂಬಣ್ಣದ ಚುಕ್ಕಿಗಳಿರುವ ಮಿನುಸಿಗಚ್ಚಿನ ಒಂದು ನೀಲವರ್ಣದ ಸೀರೆಯನ್ನು ಉಟ್ಟಿದ್ದಳು. ಕೆಲವು ಆಭರಣಗಳನ್ನೂ ತೊಟ್ಟಿದ್ದಳು. ಕೈಯಲ್ಲಿ ಒಂದು ಕನ್ನಡಿಯನ್ನು ಹಿಡಿದು ತನ್ನ ರೂಪರಾಶಿಯನ್ನು ನೋಡಿ, ಹಾ! ಇಂತಹ ರೂಪವನ್ನು ಮರುಭೂಮಿಯ ಬೀಜದಂತೆ ಸುಮ್ಮನೆ ಕಳೆಯಬೇಕೆಂದು ವಿಧಿಸಂಕಲ್ಪವೆಂದಿಗೂ ಇರಲಾರದು. ಹಾಗಿದ್ದರೆ ಇದನ್ನು ಅಷ್ಟು ಕಷ್ಟಪಟ್ಟು ಅತಿ ಜಾಗ್ರತೆಯಿಂದ ಏತಕ್ಕೆ ನಿರ್ಮಿಸಬೇಕಿತ್ತು. ಬ್ರಹ್ಮನು ಮೊದಲು ಪ್ರಾಣಿಗಳನ್ನು ಮಣ್ಣಿನಿಂದ ನಿರ್ಮಿಸಿ ರೂಪುಗೊಟ್ಟು ಮತ್ತೆ ಜೀವಕಳೆಯನ್ನು ಊದಿ ತುಂಬಿಸುವನೆಂದು ಹೇಳುವರು. ಅವನು ಇಂತಹ ರೂಪನ್ನುಂಟುಮಾಡಿದುದು, ಇಂತಹ ಸೌಂದರ್ಯ ಕಳೆಯನ್ನು ತುಂಬಿದುದು ಲಕ್ಷ್ಯಹೀನವೇ ಆಗಿರುವುದಾದರೆ, ಅವನ ತಲೆಯಲ್ಲಿರುವುದು ಮಣ್ಣೇ ಆಗಿರಬೇಕು" ಎಂದು ಮೊದಲಾಗಿ ಯೋಚಿಸಿಕೊಂಡಳು. ಆಗ ಸರಿಯಾಗಿ ಹನ್ನೆರಡು ಗಂಟೆ ಹೊಡೆಯುವ ಶಬ್ದವು ಅವಳಿಗೆ ಕೇಳಿಸಿತು. ಅವಳ ಹೃದಯನಾಡಿಯ ವೇಗವು ಸ್ವಲ್ಪ ತ್ವರಿತಗತಿಯನ್ನು ತಾಳಿತು. ಕಿಟಕಿಯ ಎಡೆಯಿಂದ ದಾರಿಯ ಕಡೆಗೆ ನೋಡುತ್ತ ನಿಂತಳು. ಬಾಗಿಲ ಬಳಿಯಲ್ಲಿ ಸದ್ದು ಯಾವಾಗ ಕೇಳಿಸುವುದೋ ಎಂದು ತನ್ನ ಕಿವಿಯನ್ನು ಚುರುಕು ಮಾಡಿಕೊಂಡು ನಿಂತಳು. ನಾಲ್ಕೈದು ನಿಮಿಷಗಳು ಮಾತ್ರ ಕಳೆದಿದ್ದರೂ ನಾಲ್ಕೈದು ದಿನಗಳನ್ನು—ಏಕೆ, ವರ್ಷಗಳನ್ನೇ ಕಳೆದಂತೆ ಅವಳಿಗೆ ತೋರಿತು. ಬಾಗಿಲ ಬಳಿಯಲ್ಲಿ ಕಾಲ ಸಪ್ಪಳವನ್ನು ಕೇಳಿದೊಡನೆ ಥಕ್ಕನೆ ಕದ ತೆರೆದಳು. ಶ್ರೀಕರನು ತನ್ನಂತೆಯೇ ತಮ್ಮ ಹಂಚಿಕೆಯನ್ನು ಸಾಧಿಸುವುದರಲ್ಲಿ ಉತ್ಕಂಠನಾಗಿರುವನೆಂದು ಅವಳು ಭಾವಿಸಿದ್ದಳು. ಆದರೆ ಅವನ ಸಂಕೋಚ ಪ್ರವೃತ್ತಿ, ಆಶಾವಿಹೀನ ಮುಖ್ಯ ಹಾಗೂ ಹೆದರಿದ ನಡೆಯನ್ನು ನೋಡಿದಾಗ ಶಾರದೆಗೆ ಏನೋ ಸಂದೇಹ ಉಂಟಾಯಿತು.

"ಶಾರದೆ! ಮಾಡುವುದೇನು? ನಾವು ಗ್ರಹಿಸುವುದೊಂದು, ದೇವರು ಮಾಡಿಸುವುದು ಬೇರೊಂದು........."

"ಏನಾಗಿರುವುದು. ನಮ್ಮ ಏರ್ಪಾಡು ಹೊರಬಿದ್ದಿರುವುದೆ?"

"ಅದಲ್ಲ. ಈಗ ನಮಗೆ ಹೊರಡುವುದಕ್ಕಾಗುವುದಿಲ್ಲ."

"ಏಕೆ?"

"ಒಂದೆರಡು ದಿನ ಕಳೆಯಲಿ"

"ಅದೇನು?"

"ಈಗ ನಾವು ಹೊರಟರೆ ಹೋಗುವುದೆಲ್ಲಿ?"

"ಎಲ್ಲಿಯಾದರೂ."

"ಎಲ್ಲಿಯಾದರೂ ಹೋಗಿ ಕಷ್ಟ ಪಡಬೇಕಾಗುವುದು. ನಮ್ಮ ಹೊಟ್ಟೆಗೆ ಅನ್ನ ಬೇಡವೆ? ಆ ಮೇಲೆ ಸಮಾಜದ ಭಯ; ಇದನ್ನೆಲ್ಲ ಯೋಚಿಸಿದರೆ ನಾವು ಆ ಯೋಚನೆ ಮಾಡುವುದು ಬೇಡವೆಂದು ತೋರುತ್ತದೆ." ಶ್ರೀಕರನು ಏನಾದರೂ ಹೇಳಿ ತಪ್ಪಿಸಿ ಬಿಡಬಹುದೆಂದು ಮೊದಲಿನ "ದೇವರು ಮಾಡಿಸುವುದು ಬೇರೊಂದು" ಎಂಬ ಮಾತೆತ್ತಿದುದು. ನಿಜವಾಗಿ ನೋಡಿದರೆ ಅವನ ಮನಸ್ಸು ಗಾಳದ ಕೊಕ್ಕೆಯಲ್ಲಿ ಸಿಕ್ಕಿದ ಮೀನಿನಂತಿದ್ದರೂ ತನ್ನ ಒಪ್ಪಂದದ ಸಿಕ್ಕಿನಿಂದ ಬಿಡಿಸಿಕೊಳ್ಳುವುದಕ್ಕೆ ಏನಾದರೂ ನೆವ ಬೇಕಾಗಿತ್ತು. ಆದರೆ ಶಾರದೆಯ ನೇರವಾದ ಪ್ರಶ್ನೆಗಳನ್ನೂ ಆಕೆಯ ಯಥಾರ್ಥ ದೃಷ್ಟಿಯನ್ನೂ ತಿಳಿದು ಶ್ರೀಕರನಿಗೆ ತನ್ನ ಮನೋಭಿಪ್ರಾಯವನ್ನು ಮುಚ್ಚಿಡಲಾಗಲಿಲ್ಲ. ಶಾರದೆಗೆ ಅವನ ಕಡೆಯ ಮಾತು ಕೇಳಿದೊಡನೆ ಎದೆಗೆ ಚುಚ್ಚಿದಂತಾಯಿತು; ಮುಖ ಕಪ್ಪಿಟ್ಟಿತು. ಒಂದು ಕ್ರೂರ ದೃಷ್ಟಿಯನ್ನು ಶ್ರೀಕರನ ಕಡೆಗೆ ತಿರುಗಿಸಿ "ಹೇಡಿ ನೀನು! ನಿನಗೆ ಇನ್ನೂ ಸಮಾಜದ ಭಯ. ನಿನಗೆ ಮನಸ್ಸಿದೆ, ಧೈರ್ಯವಿಲ್ಲ. ಹೊಟ್ಟೆಯಾಸೆ! ಹೋಗಲಿ! ಕೂಡಲೆ ಇಲ್ಲಿಂದ ಹೊರಟು ಹೋಗು! ಇನ್ನು ನಿನ್ನ ಮುಖವನ್ನು ನೋಡಲಾರೆ! ಎಂದು ಕ್ರೋಧದ ಭರದಿಂದ ಹೇಳಿ ಮಂಚದ ಮೇಲೆ ಕಣ್ಣಿಗೆ ಕೈ ಹಿಡಿದು ಕುಳಿತು ಅಳ ತೊಡಗಿದಳು. ಶ್ರೀಕರನು ಏನೋ ಹೇಳಿ ಸಮಾಧಾನಗೊಳಿಸುವಂತೆ ಮುಂದೆ ಹೋದನು. "ಥೂ ಮೂರ್ಖ ನೀನು ಗಂಡಸಾಗಿ ಹುಟ್ಟಿ ಒಬ್ಬಳು ಅಬಲೆಯನ್ನು ಕಾಪಾಡಲಾರೆ. ಮುಚ್ಚುಮರೆಯಿಲ್ಲದೆ ವಿವಾಹದ ಮೂಲಕ ನನ್ನ ಪವಿತ್ರ ಸಂಬಂಧವನ್ನಿಟ್ಟುಕೊಳ್ಳುವುದಕ್ಕೆ ಹೆದರುವೆ. ನೀನು ಇಲ್ಲಿಂದ ಉಸುರೆತ್ತದೆ ನಡೆ" ಎಂದು ಹೇಳಿ ಮುಖ ತಿರುಗಿಸಿ ಕಿಟಕಿಯ ಕಟ್ಟೆಗೆ ತಲೆಯನ್ನು ಆತುಕೊಂಡು ಮತ್ತಷ್ಟು ಅಳ ತೊಡಗಿದಳು. ಶ್ರೀಕರನಲ್ಲಿ ನಿಜವಾಗಿ ಧೀರನ ಅಂಶದಿಂದ ಹೇಡಿಯ ಅಂಶವೇ ಹೆಚ್ಚಾಗಿತ್ತು. ಒಮ್ಮೆ ಅವಳಿಗೆ ಮಾತು ಕೊಟ್ಟಿದ್ದರೂ ಮಾತನ್ನು ನಡೆಸುವ ಧೈರ್ಯ ಅವನಲ್ಲಿರಲಿಲ್ಲ. ಕದವನ್ನು ಎಳೆದುಕೊಂಡು ಪಶ್ಚಾತ್ತಾಪ ಪಡುತ್ತಾ ಶ್ರೀಕರನು ಅಲ್ಲಿಂದ ಹೊರಟು ಹೋದನು.

ಒಂದು ಘಳಿಗೆಯ ಮೊದಲು ಉಲ್ಲಾಸ ಉತ್ಸಾಹಗಳಿಂದ ಉಬ್ಬಿಕೊಂಡಿದ್ದ ಶಾರದೆಯು ಮರು ಘಳಿಗೆಯಲ್ಲಿ ಚಿಂತಾ ನಿರಾಶೆಗಳಿಂದ ಬತ್ತಿ ಹೋದಳು. ಬಹಳ ಹೊತ್ತಿನ ವರೆಗೆ ಅದೇ ಸ್ಥಿತಿಯಲ್ಲಿ ದುಃಖಿಸಿ ಕುಳಿತುಕೊಂಡಿದ್ದು ಅಲ್ಲಿಯೆ ಮೈಮರೆತಳು. ಕಾಲದ ಪರಿವೆ ಅವಳಿಗಿರಲಿಲ್ಲ. ಉರಿಯುತ್ತಿದ್ದ ದೀಪವು ಎಣ್ಣೆಯೊಣಗಿ ಯಾವಾಗಲೋ ಆರಿ ಹೋಗಿತ್ತು. ಶಾರದೆಯು ಕಣ್ತೆರೆದಾಗ ಸೂರ್ಯನ ಎಳೆಬಿಸಿಲ ಕಿರಣಗಳು ಅವಳ ಕೋಣೆಯನ್ನು ಪ್ರವೇಶಿಸಿದ್ದುವು.

೩

ದಿನೇ ದಿನೇ ಶಾರದೆಯ ದುಃಖ ಭಾರವು ಹೆಚ್ಚುತ್ತ ಹೋಯಿತು. ಶಾರದೆಯು ಮನೆಯವರಿಗೂ [illegible] ಅತ್ತೆಯೂ ನಾಲ್ಕು ವಯಸ್ಸಿನ ಚಿಕ್ಕ ಭಾವನೂ, ಮಾವನವರು [illegible] ಕೊಂಡ ಕಾರಣ, ಅವರಿಗೆ ಬೇರೆ ಆಧಾರವಿಲ್ಲದೆ, [illegible] ನಿಲ್ಲುವಂತಾಯಿತು. ತಾಯಿ ಮಗಳಂದಿರ [illegible] ನತಿಗಾಣದ ಶಾರದೆಯ ಮೇಲೆ ಹೆಚ್ಚುತ್ತಲೇ ಇದ್ದುವು. [illegible] ಬಾರದೆಂಬ ವಿಚಾರವು ಶಾರದೆಯ ಮನಸ್ಸಿನಲ್ಲಿ [illegible]

ದೇವರು ಕೊಟ್ಟಿರುವ ಈ ಪ್ರಾಣವನ್ನು ಮನುಷ್ಯರು ತಾವಾಗಿ ಕಳೆದುಕೊಳ್ಳುವುದು ಆಕೆಯ ಮನಸ್ಸಿಗೆ ಸರಿ ಹೋಗಲಿಲ್ಲ. ತಲೆಯಲ್ಲಿ ಏನೇನು ಬರೆದಿದೆಯೋ ಅದನ್ನೆಲ್ಲ ಅನುಭವಿಸುವುದಕ್ಕೆ ಸಿದ್ಧಳಾಗಿ ಮನಸ್ಸನ್ನು ಗಟ್ಟಿ ಮಾಡಿಕೊಂಡಳು. ಜೀವನದ ಸುಖವನ್ನು ಅನುಭವಿಸಬೇಕೆಂದು ಅವಳ ಹಣೆಯಲ್ಲಿ ಬರೆದಿದ್ದರೆ ಅಷ್ಟು ಎಳೆ ವಯಸ್ಸಿನಲ್ಲಿ ವಿಧವೆಯಾಗಬೇಕಿತ್ತೇ? ಹಿಂದೂಧರ್ಮವನ್ನುಳಿದು ಅನ್ಯ ಧರ್ಮದಲ್ಲಿ (ಈಗ ಹಿಂದೂಧರ್ಮದಲ್ಲಿ ಕೂಡ,) ವಿಧವೆಯರು ಪುನರ್ವಿವಾಹವನ್ನು ಮಾಡಿಕೊಂಡು ತಮ್ಮ ಸುಖದ ದಿನಗಳನ್ನು ಕಾಣುವುದಿಲ್ಲವೇ? ಆದರೆ ಶಾರದೆಗೆ ಶ್ರೀಕರನ ಭೀರು ಸ್ವಭಾವದಿಂದ ಅವಳಲ್ಲಿದ್ದ ಒಂದು ಬಗೆಯ ಆಸೆಯೂ ಬಯಲಾಸೆಯಾಗಿತ್ತು. ಸಂತೋಷದ ಆಸೆಯೊಮ್ಮೆ ತಲೆ ಎತ್ತಿದರೆ ಅದರ ಹಿಂದೆಯೆ ಚಿಂತೆಯು ನಿರಾಶೆಯು ತಾನಿದ್ದೇನೆಂದು ಮತ್ತಷ್ಟುಪ್ಪಕ್ಕೆ ನಿಲ್ಲಿಸಿ ತನ್ನ ಭೀಕರಾಕಾರವನ್ನು ಕಣ್ಣೆದುರಿನಲ್ಲಿ ಮೂಡಿಸಿ ತೋರಿಸುವುದು. ದಿನ ನಿತ್ಯದ ಆಶಾ ನಿರಾಶೆಗಳ ಹೋರಾಟದಲ್ಲಿ ನಿರಾಶೆಯೇ ಗೆದ್ದು ಶಾರದೆಯನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡಿತು. ಶಾರದೆಯು ತಾನೇನು ಮಾಡುತ್ತಿರುವೆನೆಂದು ತಿಳಿದು ಚರ್ಚಿಸಿ ಸರಿಯೆಂದು ನಿರ್ಧರಿಸಿಕೊಂಡೇ ಅಲ್ಲ, ಅವಳು ಮುಂದಿನ ಹಂಚಿಕೆಯನ್ನು ಮಾಡಿದ್ದು. ಈ ಲೋಕದ ಯಾತನೆಯನ್ನು, ವಿಧವಾ ಜೀವನವನ್ನು, ಜೀವನ ಭಾರವನ್ನು ಒಮ್ಮೆ ಇಳಿಸಿ ಬಿಟ್ಟರೆ ಸಾಕೆಂಬ ಆಸೆಯೊಂದೇ ಅವಳ ಚಿತ್ತವೃತ್ತಿಯ ಕಾರ್ಯವನ್ನಾಕ್ರಮಿಸಿದುದರಿಂದ ದೇಹತ್ಯಾಗ ಶರಣೆಂದು ಅವಳು ನಿರ್ಧರಿಸಿದಳು.

ರಾತ್ರಿ ಹತ್ತು ಗಂಟೆಯ ಸಮಯ. ಮುಸಲಧಾರೆಯಾಗಿ ಮಳೆ ಸುರಿಯುತ್ತಿದ್ದಿತು. ಮೋಡಗಳು ದಟ್ಟದಟ್ಟವಾಗಿ ಒಟ್ಟಿಕೊಂಡು ಸಿಡಿಲು ಮಿಂಚುಗಳು ಪ್ರಬಲವಾಗಿ ತಮ್ಮ ಪ್ರತಾಪವನ್ನು ತೋರಿಸುತ್ತ ರಾತ್ರಿಯು ಭಯಂಕರವಾಗಿ ಪರಿಣಮಿಸಿತು. ಆಕಾಶವೇ ಮುರಿದು ಕೆಳಕ್ಕೆ ಬೀಳುವುದೆಂಬಂತೆ ಗುಡುಗಿನ ಗರ್ಜನೆಯು ಇಡೀ ಲೋಕವನ್ನೇ ನಡುಗಿಸುತ್ತಿತ್ತು. ಎಡೆ ಎಡೆಗೆ ಮಿಂಚಿನ ಪ್ರಕಾಶದಿಂದ ಲೋಕವು ಕ್ಷಣ ಮಾತ್ರ ಪ್ರಕಾಶಮಯವಾಗುವುದು. ಮಿಂಚಿನ ಪ್ರಕಾಶದಲ್ಲಿ, ದಾರಿಯುದ್ದಕ್ಕೂ ನಿಂತಿರುವ ಗಾಳಿಯ ರಭಸದಿಂದ ಕೊಂಬೆ ಕೊಂಬೆಗಳನ್ನು ಹೊಡೆದುಕೊಳ್ಳುವ ಸಾಲು ಮರಗಳು, ಭೂತಗಳು ಬಡಿದುಕೊಳ್ಳುವಂತೆ ಭಾಸವಾಗುತ್ತಿತ್ತು. ಇಂತಹ ಭೀಷಣ ಸಮಯದಲ್ಲಿ ಎಡವುತ್ತ ತಡವುತ್ತ, ಒಮ್ಮೆ ಮೆಲ್ಲನೆ, ಒಮ್ಮೆ ಜೋರಿನಿಂದ ನಡೆಯುತ್ತ ಬಿಚ್ಚುಕೂದಲುಗಳುಳ್ಳ ಒಂದು ವ್ಯಕ್ತಿಯು ಹೊಳೆಯ ದಂಡೆಯ ಕಡೆಗೆ ಸಾಗಿಹೋಗುತ್ತಲಿತ್ತು. ಕಾಸೀಮನೆಂಬೊಬ್ಬ ಯುವಕನು ಅಕಸ್ಮಾತ್ ದಾರಿಯಲ್ಲಿ ಮಳೆಯಿಂದ ತಡೆದವನಾಗಿ, ಮಳೆಯ ಬಿರುಸು ಕೊಂಚ ಕಡಿಮೆಯಾಗುವುದನ್ನು ಕಾದು ಒಂದು ಮರದಡಿಯಲ್ಲಿ ನಿಂತಿದ್ದನು. ಒಂದು ಮಿಂಚಿನ ಪ್ರಕಾಶವು ಇಡೀ ಲೋಕವನ್ನೇ ಬೆಳ್ಳಗೆ ಬೆಳಗಿಸಿತು. ಆಗ ಅವನು, ಒಂದು ಸ್ತ್ರೀ ವ್ಯಕ್ತಿಯು ನದಿಯ ದಂಡೆಯನ್ನು ಸಮೀಪಿಸುತ್ತಿರುವುದನ್ನು ಕಂಡನು. ಯಾವಳೋ ಅತ್ಯಾಚಾರ ಪೀಡಿತಳಾದ ಹೆಂಗಸು ತನ್ನ ದುಃಖವನ್ನು ಅಂತ್ಯಗೊಳಿಸುವುದಕ್ಕಾಗಿ ಇಲ್ಲಿಗೆ ಬಂದಿರಬಹುದೆಂದು ಅವನ ಮನಸ್ಸಿಗೆ ಮಿಂಚಿನಂತೆ ಹೊಳೆಯಿತು. ಕ್ಷಣದೊಳಗೆ ನದಿಯ ದಂಡೆಯಲ್ಲಿ ಆ ವ್ಯಕ್ತಿಯು ನಿಂತಿದ್ದ ಸ್ಥಳಕ್ಕೆ ಮುಟ್ಟಿದನು. ಕಾಸೀಮನು ಅಲ್ಲಿಗೆ ಮುಟ್ಟುವುದಕ್ಕೆ ಸರಿಯಾಗಿ "ಧಡಂ" ಎಂಬ ಶಬ್ದದೊಡನೆ ಒಂದು ಚೀತ್ಕಾರವೂ ಕೇಳಿಸಿತು. ಕಾಸೀಮನು ಧೈರ್ಯದಿಂದ ಅದರ ಹಿಂದೆ ದುಮುಕಿ ಆ ಸ್ತ್ರೀಮೂರ್ತಿಯನ್ನು ಮೇಲೆ ತಂದನು. ಸಕಾಲದಲ್ಲಿ ಒಂದೆರಡು ಮಿಂಚಿನ ಪ್ರಕಾಶವು ಸಹಾಯ ಮಾಡದಿರುತ್ತಿದ್ದರೆ ಅವರಿಬ್ಬರೂ ಜಲಸಮಾಧಿಯಾಗುತ್ತಿದ್ದರು. ಆದರೆ ವಿಧಿಯ ಎಣಿಕೆ ಬೇರೆ ಇತ್ತು. ತಡೆಯುವವರಾರು? ಶಾರದೆಯು ಮೂರ್ಛೆ ತಿಳಿದು ಕಣ್ತೆರೆದಾಗ ತಾನು ಒಬ್ಬ ಮುಸಲ್ಮಾನನ ಮನೆಯಲ್ಲಿರುವಂತೆ ತೋರಿತು. ತಾನು ಬೇಡವೆಂದು ಬಿಸುಟ ಪ್ರಾಣವನ್ನು ಹೆಕ್ಕಿ ತಂದು ಕೊಡಿಸಿದವನು ಇಂಥವನೇ ಎಂದು ಅವಳಿಗೆ ತಿಳಿಯಿತು. ಕಾಸೀಮನೇನೂ ಕುರೂಪಿಯಾಗಿರಲಿಲ್ಲ. ಒಳ್ಳೇ ಮೈಕಟ್ಟಿನ ಯುವಕ. ಮುಖದಲ್ಲಿ ಲಾವಣ್ಯವಿತ್ತು; ಮೋಹಕತೆಯೂ ಇತ್ತು. ಶಾರದೆಗೆ, ಆತ್ಮಹತ್ಯದ ಅಸ್ತ್ರವು ವಿಧಿಯ ಇಷ್ಟವಿದ್ದರೆ ಮಾತ್ರ ಸರಿ, ಇಲ್ಲವಾದರೆ ಮೊಂಡಾಗಿರುವುದೆಂಬುದು ಆಗ ಚೆನ್ನಾಗಿ ಮನದಟ್ಟಾಯಿತು. ಕ್ರಮೇಣ ಆಕೆಯ ಹೃದಯದಲ್ಲಿ ಕಾಸೀಮನ ಸೌಂದರ್ಯ ಹಾಗೂ ಪ್ರೇಮವು ಮನೆಮಾಡ ತೊಡಗಿತು. ತಲೆಯಲ್ಲಿ ಬರೆದುದನ್ನು ಎಲೆಯಿಂದ ಉಜ್ಜ ಬಹುದೇ?

೪

ಇನ್ನು ಶಾರದೆಗೆ ಹಿಂದೂ ಸಮಾಜದ ಭಯವಿಲ್ಲ. ಶ್ರೀಕರನಂತಹ ಹೇಡಿಗಳ ಮರೆ ಹೊಗಲವಶ್ಯವಿಲ್ಲ. ಪ್ರಕಾಶರಾಯರಂತಹ ಸ್ವಾರ್ಥಿ ತಂದೆಯ ಆಶ್ರಯದ ಅವಶ್ಯವಿಲ್ಲ. ಈಗ ಅವಳು ಶಾರದೆಯಲ್ಲ; ಫಾತೀಮಳಾಗಿರುವಳು. ಇನ್ನು ಅವಳಿಗೆ ಈ ಲೋಕದ ಸುಖವನ್ನು ಅನುಭವಿಸಲು ಧರ್ಮಜ್ಞರ ಅನುಮತಿಯುಂಟು. ಇನ್ನು ಮನುಷ್ಯೋಚಿತವಾದ ಸುಖಭೋಗವನ್ನು ಅವಳು ಅನುಭವಿಸಿದರೆ ಅವಳಿಗೆ ನರಕದ ಭಯವಿಲ್ಲ; ಸಮಾಜದ ಅವಹೇಳನವಿಲ್ಲ. ಹಿಂದೂ ವಿಧವೆಯರನ್ನು ಜೀವಚ್ಛವಗಳೆಂದು ಎಣಿಸುವಂತೆ ಆಜ್ಞಾಪಿಸಿರುವ ದೇವರು, ದೇವರ ಹೆಸರನ್ನು ಕಳಂಕಿಸಿ ಕೊಂಡಾಡುವ ಧರ್ಮಜ್ಞರು, ಧರ್ಮಜ್ಞರನ್ನು ಅಂಧಪರಂಪರಾನ್ಯಾಯದಿಂದ ಹಿಂಬಾಲಿಸುವ ಮನುಷ್ಯರು—ಇವರೆಲ್ಲ ಕಣ್ತೆರವ ಕಾಲವು ಬರುವ ತನಕ ಹಿಂದೂ ಧರ್ಮದಲ್ಲಿ ಜನ್ಮವೆತ್ತದ ಹಾಗೆ ಅನುಗ್ರಹಿಸುವಂತೆ "ಅಲ್ಲಾ"ನನ್ನು ನೆನಸಿ ಫಾತೀಮಳು ಮುಸಲ್ಮಾನ್ ಧರ್ಮದ ವಿಧ್ಯುಕ್ತವಾಗಿ ಕಾಸೀಮನ ಹೆಂಡತಿಯಾದಳು. ಧರ್ಮಭ್ರಷ್ಟಳಾಗುವುದರ ಬದಲು ಅವಳಿಗೆ ನಷ್ಟಜೀವಿಯಾಗಿರುವುದೇ ಲೇಸಾಗಿತ್ತು. ಆದರೆ ಅವಳೇನು ಮಾಡಬಲ್ಲಳು? ವಿಧಿಯ ಆಟ! ಹೌದು, **ವಿಧಿಮಹಿಮೆ!**

ಮಹಾಪುರುಷರ ತತ್ವವಿಚಾರ.

1. ವೀರಪುರುಷರು ಒಂದೇ ಸಾರಿ ಮೃತ್ಯುವಿನ ಬಾಯಲ್ಲಿ ಬೀಳುತ್ತಾರೆ- ಪರಂತು ನಿರ್ವೀರ್ಯರಾದವರು ಮರಣವು ಸಂಭವಿಸುವ ಮೊದಲೇ ಅನೇಕ ವೇಳೆ ಮೃತರಾಗುತ್ತಾರೆ.

ಶೇಕ್ಸ್‌ಪಿಯರ್.

2. ಬಾಲಕರೇ ಯಾವುದಾದರೊಂದು ಜಾತಿ ಅಥವಾ ದೇಶದ ಸಂಪತ್ತುಗಳಾಗಿರುತ್ತಾರೆ, ಯಾವ ದೇಶವು ಈ ಸಂಪತ್ತನ್ನು ಜೋಪಾನಗೊಳಿಸಿಡುವುದೋ, ಅದೇ, ಜಗತ್ತಿನಲ್ಲಿ ತಲೆಯೆತ್ತಿ ಜೀವಿಸಬಲ್ಲುದು.

ಲಾಲಾ ಲಜಪತ ರೈ.

3. ನಿಕೃಷ್ಟ ದೃಷ್ಟಿಯುವನಾಗಿರುವುದಕ್ಕಿಂತ ದೃಷ್ಟಿಹೀನನಾಗಿರುವುದು ಮೇಲು. ಸುಳ್ಳು ಹೇಳುವುದಕ್ಕಿಂತ ಮೌನದಲ್ಲಿರುವುದೇ ಮೇಲು.

ರಸ್ಕಿನ್.

4. ತನ್ನ ಸಿದ್ಧಾಂತದ ಮೇಲೆ ಇತರರು ಆಕ್ರಮಣ ಮಾಡುವರೆಂದು ಯಾವಾತನು ಭಯಪಡುತ್ತಾನೋ, ಆತನು ತನ್ನ ಸಿದ್ಧಾಂತದಲ್ಲಿ ವಿಶ್ವಾಸವನ್ನಿಟ್ಟಿರುವುದಿಲ್ಲ.

ವೆಂಡಲ್ ಫಿಲಿಪ್.

5. ಆಧ್ಯಾತ್ಮಿಕ ಜೀವನ ಮಾರ್ಗವನ್ನನುಸರಿಸಲಿಕ್ಕೆ ಯಾರಾದರೂ ಇಚ್ಛಿಸುವುದಾದರೆ, ಅಂಥವರು ಯಾವುದರ ಕುರಿತೂ ಚಿಂತಿಸಬಾರದೆಂದೇ ನನ್ನಭಿಮತ.

ಟಿ. ಎಲ್. ವಾಸ್ವಾನಿ.

ನಾರದರ ಗಜೇಟು.

ಲೇಖಕರು:– ಶ್ರೀ. ಮುರುಳೀ ಭೀಮರಾಯರು.

(ಜಾದಾ ಅಂಕ)

ಜಾಹಿರಾತುಗಳು.

ಸಿದ್ಧ ಕಲ್ಪ ಮರಣ ಧ್ವಜ: ಸತ್ತರೆ ಸಾಕೆನ್ನುವವರಿಗಿದೇ ಮದ್ದು. ಗಳಿಗೆಯಲ್ಲಿ ಯಮಪಟ್ಟಣ. ಮಣಕ್ಕೆ ೦—೦—೩॥ ಪೈ.

ಶೂರ್ಪನಖಾ ತೈಲ: ತಲೆಗೆ ಹಚ್ಚಿದ್ದಲ್ಲಿ ಕೂದಲುದರಿ, ಮೈಯುದುರಿ ಕಣ್ಣಿನಲ್ಲಿ ಪರೆ ಕುದುರಿ, ಶಕ್ತಿ ಚೆದರುವುದು. ಸೀಸಾಯಿಗೆ ೫ ಕಾಸು.

ಗೌಡ ಬಂಗಾಳಿ ಸಾಬೂನು: ಇದರಲ್ಲಿರುವುದೇ ಸುಣ್ಣ. ಕಟ್ಟಿಗೆ ಯಷ್ಟು ಮೃದು. ಇದ್ದಲಂತೆ ನೊರೆ. ಚರ್ಮ ಸುಲಿಯು ವಲ್ಲಿ ಇದು ಅದ್ವಿತೀಯ. ಮಕ್ಕಳಿಗೆ ಅತ್ಯಗತ್ಯವೆಂದು ದಿವಂಗತ ಡಾಕ್ಟರರ ಶಿಫಾರಸು. ಸೇರಿಗೆ ಒಂದಾಣೆ.

ಲಟಭಂಗಿ ಹಾರ್ಮೋನಿಯಂ: ಅಪಸ್ವರದ ಗಣಿ, ಎರಡೇ ತಿಂಗಳಲ್ಲಿ ಸ್ವರವೇ ಇಲ್ಲ. ಪೆಟ್ಟಿಗೆಯೊಡನೆ ಮುರುಕು ಬೀಗವೊಂದು ಉಚಿತ. ಬೆಲೆ ರೂ. ?

ಸ್ವದೇಶಿ ಕೊಡೆಗಳು: ಕೋಲು, ಕೊಡೆ, ಕಡ್ಡಿ ಮಾತ್ರ ಪಾತಾಳ ಲೋಕದ್ದು. ನೀರು ಒಂದಿಷ್ಟು ಹೊರಗೆ ಹೋಗದು. ಖಂಡಿಗೆ ಬೆಲೆ ಬರಿಯುರಿ.

ಕೈಗಡಿಯಾರ: ಸುಣ್ಣದ ಕರಡಿಗೆಯಷ್ಟೇ ಸಣ್ಣದು. ಅರ್ಧ ಗಂಟೆಗೆ ಒಮ್ಮೆ ಕೀಲು ಕೊಟ್ಟರೆ ಸರಿ. ೨೪ ಗಂಟೆಯ ಗೇರಂಟಿ. ಪಂಚೇರಿಗೆ ಬೆಲೆ ರೂ. ೩.

ಕಾಮಶಾಸ್ತ್ರ: ಸ್ಪೆಶಲ್ ತಯಾರಿ. ನಿರುದ್ಯೋಗಿಗಳಿಗೆ "ಸಂಪಾದನೆ"ಯ ಕ್ರಮ ಕಲಿಸುತ್ತದೆ. ಬೆಲೆ ಕಲಿತ ಮೇಲೆ.

ಅಡಬಿಡಂಗಿ ಗ್ರಾಮಫೋನ್: ಕಿವಿಗೆ ಕೇಳದಷ್ಟು ಗಟ್ಟಿಯಾಗಿ ಅರಚುತ್ತದೆ. ದಿನಕ್ಕೊಮ್ಮೆ ರಿಪೇರಿ ಬೇಕು. ಬೆಲೆ ವಿಚಾರಿಸಿ. ಉತ್ತರ ಬೇಕಾದರೆ ೫ ರೂಪಾಯಿ ಮುಂಗಡ ಕಳುಹಿಸಬೇಕು. ಈ ಎಲ್ಲಾ ಮಾಲುಗಳು ದೊರೆಯುವ ವಿಳಾಸ:— ಮೆಸರ್ಸ್ ಕುಂಭಕೋಣಂ ಎಂಡ್ ಕೊ, ಬೆಂಕಿ ಪಟ್ಟಣ. ಲಂಕಾಪಟ್ಟಣ ಪೋಸ್ಟ್.

ಬೇಕು.

1. ಸತ್ತವರನ್ನು ಬದುಕಿಸುವ, ಸ್ವಪ್ನಸಿದ್ಧ [illegible] ಬಲ್ಲ ಏಜಂಟರು—ಒಂದು ಡೊಂಗಿ ವಿಮಾ ಕಂಪೆನಿಗೆ.

2. ಸುಳ್ಳು ರಶೀದಿ, ಲೆಕ್ಕಪತ್ರಗಳಿಡ ಬಲ್ಲ ಇಬ್ಬರು [illegible] ಸ್ತರು ಒಂದು ದೇವಸ್ಥಾನಕ್ಕೆ. ಅರ್ಜಿಯೊಂದಿಗೆ [illegible] —ಕೀ ವಿದ್ಯಾಲಯದ ಡಿಗ್ರಿ ಸರ್ಟಿಫಿಕೇಟನ್ನು ಲಗ್ತುಪಡಿಸತಕ್ಕದ್ದು.

3. ಗಿರಾಕಿಗಳು. ತಲೆಯ ಮೇಲೆ ಬೀಳುವ ಮನೆ 1, ನೀರಿಲ್ಲದ ಬಾವಿ1, ಬಚ್ಚಲು, ಪಾಯಿಖಾನೆಗಳಿಲ್ಲದ ಹಿತ್ತಲು 1 ಕೂಡಾ ಮಾರಾಟಕ್ಕಿದೆ; ಊರ ಹೊರಗೆ; ಸ್ಮಶಾನಕ್ಕೆ ಹತ್ತಿರ.

4. ಸೆಕೆಂಡ್ ಹೆಂಡ್ ಫೋರ್ಡ್ ಕಾರ್! ಇಂಜಿನೂ, ಚಕ್ರಗಳೂ, ಮಾಡೂ, ಮಾತ್ರವಿಲ್ಲ. ಬೆಲೆ ಸುಮಾರು ೪೫೦೦.

5. ಹತ್ತೂರು ಆಸ್ಪತ್ರೆಗೆ ಒಬ್ಬ ಮೇಡ್—ವ್ಯಾಫ್. ಮದುವೆ ಇಲ್ಲದ ೧೮ ವರ್ಷದ ಸುಂದರಿಯಾಗಬೇಕು.

6. ಗಂಡಿಗೊಂದು ಗಂಡು. ಒಬ್ಬ ಹುದ್ದೇದಾರರಿಗೆ ಅಡಿಗೆಯವ. ಕದಿಯಲಿಕ್ಕೆ, ಕೆಡಲಿಕ್ಕೆ, ತಂದ ಸಾಮಾನುಗಳಿಗೆ ಸುಳ್ಳು ಕ್ರಯ ಹೇಳಲಿಕ್ಕೆ, ಹೇಳದೆ ಕಾಣೆಯಾಗಲಿಕ್ಕೆ, ಹೆಂಗಸರ ಕೈಯಲ್ಲಿ ಪೆಟ್ಟು ತಿನ್ನಲಿಕ್ಕೆ ಗೊತ್ತಿದ್ದರೆ ಒಳ್ಳೆಯದು. ಸರ್ಕೀಟಿನಲ್ಲಿ ಬಿಟ್ಟಿ ಸರಬರಾಯಿ—ಹಾಲು, ತುಪ್ಪ, ತರ್ಕಾರಿ, ಸಮಯ ಬಿದ್ದರೆ ದುಡ್ಡು ಕೂಡ ತರಿಸಿಕೊಳ್ಳಲಿಕ್ಕೂ, ಅದನ್ನು ಮನೆಯ ಲೆಕ್ಕಕ್ಕೆ ಜಮೆ ಕಟ್ಟಲಿಕ್ಕೂ ಗೊತ್ತಿದ್ದರೆ ಇನ್ನೂ ಉತ್ತಮ.

ಅಸ್ಫುಟ ಅ-ವಿಚಾರಗಳು.

ಕಲಿ ಮಹಾರಾಯರ 'ಎಮರ್ಜೆನ್ಸಿ ಆರ್ಡಿನೆನ್ಸಿನ' ಪ್ರಕಾರ ಮಿ. ಬೃಹಸ್ಪತ್ಯಾಚಾರ್ ಬಾರ್-ಏಟು-ಲಾಯವರು ಮನುಧರ್ಮ ಶಾಸ್ತ್ರವನ್ನು ತಿದ್ದುತ್ತಾ ಇದ್ದಾರೆ. ವಿಶನರಿಗಳಿಗೆ ಮದುವೆಯಾಗಬಹುದಾದರೆ, ಸೀತಿಗೆಟ್ಟ ಹಿಂದೂ ಸನ್ಯಾಸದೀಕ್ಷಿತರಿಗೂ ಮಗ್ಗುರಿನಲ್ಲಿ ಒಂದು ಕಕ್ಷಪಾಲ ಯಾಕಿರಬಾರದೆಂದು ಅವರ ಲಾ ಪ್ಯಾಂಟ್. ವೆರಿ ಗುಡ್!

ಮನೆಯ ಮಕ್ಕಳಿಗೆಲ್ಲ ಮುಂದೆ ಹರಿಜನರ ಹೆಸರನ್ನೇ ಇಡಬೇಕೆಂದು ಕೆಲ ಕರಿಜನರ ಹಿರಿಯ ಠರಾವು. ಆದರೆ ತಿಂಗಳು ತುಂಬದೆ ಹುಟ್ಟಿದ ಮಕ್ಕಳಿಗೆ ಇದು ಲಗಾವಲ್ಲ.

ಮ—ದನ ಪುರದ ತಾ। ಬೋ। ಪ್ರೆಸಿಡೆಂಟರಿಗೆ ಬಿರುದು ಸಿಕ್ಕಿದ್ದಕ್ಕೊಂದು ಬಿಸಿನೀರು ಪಾರ್ಟಿ. ಖರ್ಚೆಲ್ಲ ಪ್ರೆಸಿಡೆಂಟರದೇ. ಹಾಜರಿದ್ದವರು ಅವರ ನೌಕರರು; ಮೆಂಬರರು. ಉಪಾಧ್ಯಕ್ಷರು ಪ್ರೆಸಿಡೆಂಟರು ಹೇಗೆಪ್ರತಿ ವಿಸಾಟೆಂಗಿಗೂ ಎಂಥ ಜೊಕ್ಕಉಡುಪಿನೊಡನೆ ತಪ್ಪದೆ ಬಂದರು, ತಲೆಯನ್ನಾಡಿಸಿದರು, [illegible] ದಸ್ತು [illegible] ಹಾಕಿದರು.—ಎಂದು [illegible]ವಾಗಿ [illegible] "[illegible]ಜನ್ಮಾಂತರಕ್ಕೂ [illegible] ತಲೆಯಾಡಿಸು[illegible] [illegible]" ಎಂದರು. [illegible]

ಕಾಳಮ್ಮನ ನಗರದಲ್ಲಿ [illegible] ಇನಸ್‌ಪೆಟರು ಹೆಚ್ಚಾದ ಸಂಬಂಧ. ಪಟ್ಟಣದ [illegible].

(೧೭ನೇ ಪುಟವನ್ನು ನೋಡುವುದು)

ಅನ್ವೇಷಣ.

ಕವಿಗಳು:—ಶ್ರೀ. ಜಿ. ಎನ್. ಲಕ್ಷ್ಮಣ ಪೈ. ಪುತ್ತೂರು.

ದೇವರಲ್ಲಿ ದೇವನಂತೆ;
ಪುರುಷರಲ್ಲಿ ಶ್ರೇಷ್ಠನಂತೆ;
ವಿಶ್ವವನ್ನು ಸೃಜಿಸಿ ಕಾವ
ಲೋಕದೇಕ ವೀರನಂತೆ;
ಅವನ ಇರವನರಿಯಲೆಳಸಿ
ಇವನು ತೊಳಲ್ದನು.
ಇವನ ನೋಡಿ ಮತ್ತೆ ನೋಡಿ
ಅವನು ಬಳಲ್ದನು. ॥ ೧ ॥

ಆದಿರಹಿತನೇ ಅನಂತ
ನಾಗಿ ಆದಿಮೂರ್ತಿಯಂತೆ;
ವೇದವೇದ್ಯ ಭೇದಭೇದ್ಯ
ನಾಗಿ ಪುಣ್ಯಕೀರ್ತಿಯಂತೆ;
ಅವನ ಮಹಿಮೆ ತಿಳಿಯಲೆಣಿಸಿ
ಇವನು ಸೋತನು.
ಇವನ ಹಂಬಲವನು ಗುಣಿಸಿ
ನಕ್ಕನಾತನು. ॥ ೨ ॥

ಶಾಸ್ತ್ರಗಳನು ಓದಿಕೊಂಡ;
ಸೂತ್ರಗಳನು ಮಥಿಸಿ ಹಿಡಿದ;
ಶಾಸ್ತ್ರಿ ಪಂಡಿತರನು ಕೂಡಿ
ವಾದವೆಸಗಿ ನೊಂದುಕೊಂಡ;
ಅವನ ಶೋಧದಿಂದಲಿವನು
ಖೇದಗೊಂಡನು.
ಇವನ ರೀತಿಯಿಂದಲವನು
ಮೋದಗೊಂಡನು. ॥ ೩ ॥



ತೀರ್ಥಯಾತ್ರೆಗಳನು ಗೈದ;
ಪುಣ್ಯಕ್ಷೇತ್ರಗಳನು ತೊಳಲ್ದ;
ಮೂರ್ತಿಯನ್ನು ಮನದಿ ನೆನೆದು
ಪ್ರಾರ್ಥನೆಗಳ ಸಲಿಸಿಕೊಂಡ;
ಅವನ ಅಂತರವನು ತಿಳಿಯ
ಲಿವನು ದಣಿದನು.
ಇವನ ಅಂತರಂಗದಿಂದ
ಲವನು ಕುಣಿದನು. ॥ ೪ ॥

ತೊಳಲಿ, ಬಳಲಿ, ತನ್ನ ಅಂತ
ರಂಗವನ್ನು ಸೇರಿಕೊಂಡ;
ಹೊಳೆವ ಕಳೆಯದೊಂದೆ ಜಗವ
ಹಿಡಿದು ಮೀರಿರುವುದ ಕಂಡ;
ಅವನ ಅಂತರಂಗದಲ್ಲಿ
ಇವನು ಕಲೆತನು.
ಇವನ ಹೃದಯಸದನದಲ್ಲಿ
ಅವನು ನಲಿದನು. ॥ ೫ ॥

ಎಲ್ಲವರೊಳು ಒಬ್ಬನಾಗಿ
ಹಬ್ಬಿ ಲೋಕವನ್ನು ತೂಗಿ
ಬಲ್ಲವರೊಳು ಪರಮಪುರುಷ
ನೆನಿಸಿ ದ್ವೈತನಾದ ಯೋಗಿ
ಯವನ ಸತ್ಯವರಿಯಲಿವನು
ಪೂತನಾದನು.
ಇವನ ಶೋಧದಿಂದಲವನು
ಪ್ರೀತನಾದನು. ॥ ೬ ॥

([illegible])

ಆ ಕೊಳೆಯ ಕೆಲವಂಶವನ್ನು ತಾವು ತೊಳೆಯುತ್ತಿರುವೆವೆಂದೂ ಕಾಗೆಗಳು ಹೇಳಿಕೊಂಡಲ್ಲಿ, "ಈ ಸಹಕಾರಕ್ಕಾಗಿ ಮರಗಳ ಮೇಲೆ ಕಾಗೆಗಳಿಗೆ "ಫ್ರೀ ಕ್ವಾರ್ಟರ್ಸ್" (ಉಚಿತ [illegible]) ಕೊಡಬೇಕೆಂದೂ, ದಾರಿಗರ ಮೇಲೆ ಕಾಕಪಿಷ್ಟದ, ಉಚ್ಛಿಷ್ಟದ ಪನ್ನೀರು ಬೇಕಾದಾಗ ಸುರಿಯಬಹುದೆಂದೂ, ಅದಕ್ಕೆ ಸಿವಿಲ್-ಕ್ರಿಮಿನಲ್ ವ್ಯವಹರಣೆ ನಡೆಯದೆ"ಂದೂ ಜಯ್ಯರ್‌ಮ್ಯಾನರ ಹುಕ್ಕುಂ. ಇನ್ನು ಕಾಗೆ ಹಿಡಿಯುವುದು ಸುಲಭವಾದೀತೇ?

ಕಳೆದ ತಾ. ೩೨-೧೪-೩೫ರಲ್ಲಿ ಚಿಮಣಿ ಕುಪ್ಪಿಗಳದೊಂದು ಮೀಟಿಂಗು. ಇಲಿಕತ್ತರಿ (ವಿದ್ಯುಚ್ಛಕ್ತಿ) ದೀಪಗಳು ಮಂಗಳೂರಿಗೆ ೧೪ಲಂತೊಳಗಾದರೂ ಬರುವುದರಿಂದ ತಾವು ಈಗಲೇ ಒಡೆದುಕೊಂಡು ಸಾಯುವುದೇ ಮೇಲೆಂದವ ನಿರ್ಣಯ. ಇದಕ್ಕಾಗಿ ದಿನವೊಂದಕ್ಕೆ ಮನೆಯೊಂದರಲ್ಲಿ ಒಂದೆರಡು ಆತ್ಮಹತ್ಯಗಳಾಗಬೇಕೆಂದು ನಿರ್ಧರಿಸಲ್ಪಟ್ಟಿರುವುದಲ್ಲದೆ, ಈ ಕಾರ್ಯದಲ್ಲಿ ಮನೆಯ ಮಕ್ಕಳೂ, ಆಳುಗಳೂ ನೆರವಾಗಬೇಕೆಂದು ಕೋರಲಾಗಿದೆ.

ಪುರುಷ—ಸ್ತ್ರೀಯರಿಗೆ ಸಮಾನಾಧಿಕಾರವಿರಬೇಕೆಂಬ ಈ ಸಮಯದಲ್ಲಿ ಸಿನೆಮಾ, ನಾಟಕಗೃಹ, ದೇವಾಲಯ ಮೊದಲಾದ ಸಾರ್ವಜನಿಕ ಮಂದಿರಗಳಲ್ಲಿ ಅವರಿಬ್ಬರ ಪ್ರವೇಶವೂ ಇಕ್ಕಟ್ಟಾದ ಒಂದೇ ದ್ವಾರದಿಂದಾಗಬೇಕೆಂಬ ಅರ್ಥಕ್ಕೆ ಮಿ॥ ಕೊಳಕುನಾಥ ಅಯ್ಯರು ನ್ಯಾಯವಧಾಯಕ ಸಭೆಯ ಮಧ್ಯರಾತ್ರಿ ಅಧಿವೇಶನದಲ್ಲಿ ಒಂದು ಸೂಚನೆಯನ್ನು ಹಿಂದೆ ನೂಕಲಿರುವರು. ಇದು "ವಿಶಂತಿ ಪ್ರವಿಶಂತಿಚ" ಎಂಬ ನ್ಯಾಯಕ್ಕೆ ಬಹಳ ಅನುಕೂಲವಂತೆ.

[illegible] ಬಟಾಟೆ ಜೀರ್ಣವಾಗಲು ಬಹಳ ಹೊತ್ತು ಬೇಕೆಂದು ಒಬ್ಬ ಜರ್ಮನ್ ಡಾಕ್ಟರರ ಹೇಳಿಕೆ. ಅದೇ ಕರಗಿಸಿ ಮಾಡಿದ ಲೋಹದ ನಾಣ್ಯವಾದರೆ, ದಿವಾಳಿ ಕೋರ್ಟಿನಲ್ಲಿ ಎಷ್ಟು ಬೇಗ ಜೀರ್ಣಕ್ಕೆ ಬರುತ್ತದೆ!

"ಏತಕ್ಕೆ" ಎನ್ನುವ ಬದಲು, ಬಾಯಿ ತಪ್ಪಿ "ಏ ಕತ್ತೆ" ಎಂದು ಒಬ್ಬ ತರುಣನು ಒಬ್ಬ ಮಹಿಳಾ ಮೇಸ್ತ್ರರೊಡನೆ (ಮಿಸ್‌ಟ್ರೆಸ್) ಕೇಳಿದ ತಪ್ಪಿಗೆ ಅವನ ಮೇಲೆ ನಷ್ಟವಾದ ಮಾನಕ್ಕಾಗಿ ಮಾನನಷ್ಟದ ಮೊಕದ್ದಮೆ. "ಏಕೆ, ಅತ್ತೆ?" ಎಂದೂ 'ಏ! ಕತ್ತೆ!" ಎಂದೂ ಒಬ್ಬ ವಕೀಲರ ಅರ್ಥ. ಆಕೆಗೆ ಮಗಳೇ ಇಲ್ಲವೆಂದೂ ಇದ್ದರೂ ವಿಧವೆ ಎಂದೂ ಮತ್ತೊಬ್ಬ ವಕೀಲರ ಸಾಧನೆ. ತೀರ್ಪು ಬಾಕಿ.

ಈ ಅರ್ಥದ ಮೇರೆಗೆ ಇನ್ನು "ಸುಂದರವಾದ ಅಂಗಿ, ಕೋಮಲವಾದ ಅಂಗಿ ಇರತಕ್ಕವರೆಲ್ಲರೂ 'ಸುಂದರಾಂಗಿ' 'ಕೋಮಲಾಂಗಿ'ಯರೆಂದು ನಿಘಂಟುವಿನಲ್ಲಿ ತಿದ್ದುಪಡಿಯಾಗಲಪ್ಪ! ಮತ್ತೂ ಆಗಲಪ್ಪ—ಹೆಂಗಸರು ಬರದದ್ದೆಲ್ಲ 'ಭಾಮಿಸಿ' ಷಟ್ಪದಿ ಎಂದು! ಭಾಮಿಯಿಂದಲೇ ಭಾಮಿಸಿ ಶಬ್ದವೂ, ಕಾಮಿಯಿಂದಲೇ ಕಾಮಿಸಿ ಶಬ್ದವೂ ಉತ್ಪತ್ತಿಯಾಯಿತೆಂದು! ಹಾಗೂ 'ಏಕಾಂತ'ವೆಂದರೆ "ಎಲಾ! ಗಂಡ! ವೆಂಬ ಅರ್ಥ ಬರುತ್ತದೆಂದು.

ಹೊಸ ಕವಿ ಮಾರ್ಗದ ಗುರುತಾಗಿ [illegible] ಕನ್ನಡ ಸರಸ್ವತಿಗೆ ಗರಿಗಳ ಟೋಪಿ ಇಡಿಸಿ, ಸೀರೆಯ ಮೇಲೆ [illegible] ಉಡಿಸಿ, ಹೇರ್ ಪಿನ್, ಬ್ರೂಚ್ ಗಳನ್ನು ತೊಡಿಸಿ, [illegible] ಕುಂಕುಮ ಕೆಡಿಸಿ ಪೂಜಿಸಿ ಭಜಿಸಿದರೆಂದು ಶ್ರೀ॥ [illegible] ಪಂಪ್‌ರಿಗೆ ಹೇಳಲು ಪಂಪ್‌ರು ರನ್ನರ ಹತ್ತರ [illegible] ಓಡಿರುವರು.

ಪೂರ್ವ ಕವಿತೆಯು ಕಷ್ಟ ಶಬ್ದಗಳಿಂದ ಅರ್ಥವಾಗದೆ ಉಳಿದಿದ್ದರೆ ಈಗಿನ ಕವಿತೆಯು "ಭಾವ"ವನ್ನು ತಿಳಿಯಲಾರದ ಅಜ್ಞಾನದಿಂದ ಅರ್ಥವಾಗದೆ ಬಾಕಿ ಬಿದ್ದಿದೆ ಎಂದೂ, ಎರಡರಲ್ಲೂ ಅನರ್ಥವೇ ಅನವರ್ಥವಾದ ಅರ್ಥವೆಂದೂ ಪೊನ್ನನು ರನ್ನನೊಡನೆ ದೂರಿರುವನು.

ಅಗ್ರಲೇಖ—ನ

ಹೋಟ್ಲು ತಿಂಡಿಗಳ ಜ್ವಾಂಟ್ ಕಾನ್ಫರೆನ್ಸು

ಹಿಂದಿನ ಸಂಜೆ ಥಕ್ಕನೆ ನಿರ್ಣಯವಾದಂತೆ ಈ ಕಾನ್ಫರೆನ್ಸಿನ ಸಿದ್ಧತೆಯೂ ಕೂಡ್ಲೇ ನಡೆಯಿತು. ರಾತಾರಾತ್ರಿ ಆಕಾಶಕ್ಕೆ ಏಣಿ ಇಟ್ಟು, ಗ್ಯಾಸ್‌ಲ್ಯಾಟ್ ಹಚ್ಚಿ, ಚಂದ್ರಮಂಡಲದಲ್ಲಿ ಡೇರೆ ಹೊಡೆದು [illegible]ರಿಸಿದರು. ಮರುದಿನ ಪ್ರಾತಃಕಾಲವೇ, ಪ್ರತಿನಿಧಿಗಳೂ, ಆಳುತ್ತಾ ಕರೆಯುತ್ತಾ ಆಕಾಶನಾವೆಯಲ್ಲಿ ಸಭಾಮಂದಿರಕ್ಕೆ ತೆವಳಿಕೊಂಡು ಬಂದಿಳಿದರು. ಜಿಲೇಬಿ ಶಾಸ್ತ್ರಿ, ಮೈಸೂರು ಪಾಕಾಚಾರ್, [illegible] ರಾವ್, ಚಿರೋಟಿ ದೇಶಪಾಂಡೆಯವರೂ, ಶ್ರೀಮತಿ ತುಪ್ಪದ ದೋಸೆಯಮ್ಮ, ಮಿಸ್ ಮುಸ್ಕೊಡೆ ಬಾಯಿ ಇವರೂ ಮುಖ್ಯ ನಿಧಿಪ್ರತಿಗಳು.

ಹೊತ್ತಿಗೆ ಸರಿಯಾಗಿ ಅಧ್ಯಕ್ಷರಾದ ಬಹದೂರ್ ಲಾಡಪ್ಪನವರೂ ಅಲ್ಲಾಡುತ್ತಾ ಚೆಲ್ಲಾಡುತ್ತಾ ಬಂದರು. ಅವರನ್ನು ಶಂಖವಾದ್ಯದೊಡನೆ ಹೆದರಿಸಿ ಬೆದರಿಸಿ ಕೈಕಾಲು ಕಟ್ಟಿ ಹೊತ್ತು ತಂದು, ಅಧ್ಯಕ್ಷರ ಮಣೆಯ ಕಾಲಿಗೆ ಬಿಗಿದದ್ದಾಯಿತು. ಕೂಡಲೇ ದೋಸೆಮ್ಮನವರು ಸಮೀಪದಲ್ಲಿರುವ ಕಾಗೆಗಳೆಲ್ಲ ನಾಚಿ ಓಡುವಂಥ ಗಾರ್ದಭರಾಗದಿಂದ, ದುಃಖಮಯವಾದ ಚರಮಮಂಗಳ ಗೀತವನ್ನು, ಆಕಾಶವೇ ಒಡೆದು ಪುಡಿಯಾಗುವಂತೆ ಹಾಹಾಕಾರದೊಡನೆ ಹಾಡಿದರು. ಸ್ವಾಗತಾಧ್ಯಕ್ಷರಾದ ಚಿರೋಟಿಯವರು, ಅಧ್ಯಕ್ಷರ ಮೈಬಣ್ಣ, ಸೌಂದರ್ಯಗಳ ಗೌರವ ಗಾನವನ್ನು, ಪ್ರಶಸ್ತಿಯ ಪ್ರಶಂಸೆಯನ್ನು ಯಾರಿಗೂ ತಿಳಿಯದ ಮೂಕಭಾಷೆಯಲ್ಲಿ, ಇಡೀ ಒಂದು ಅರ್ಧ ದಿನ ಮಾಡಿದರು. ಇಷ್ಟರಲ್ಲಿ ತೀವ್ರ ತಂಡಕ್ಕೆ ಸೇರಿದ ಪಕ್ಕೋಡಾ ಯಾನೆ ಬೋಂಡಾ ವ ಬಜೆಯವರು ಎದ್ದು ನಿಂತು, "ಏನು ಹುಡುಗಾಟ! ಅಧ್ಯಕ್ಷರ ಹೊಗಳಿಕೆ ಎಷ್ಟು! ಅದು ಈ ಸಭೆಯಲ್ಲಿಯೇಕೆ? ಅದು ಕಾರ್ಯವೇ ಇಲ್ಲದ ಕ್ರಮದಲ್ಲಿ ಕ್ರಮವೇ ಇಲ್ಲದ ಕಾರ್ಯದಲ್ಲಿ ಎಲ್ಲಿದೆ? ನೀವು ಸೌಮ್ಯ ಪಕ್ಷದವರು—ಸಕ್ಕರೆಯಂತಹ ಮಾತಾಡುವ ಸಿಹಿ ಜನರು; ನಿಮ್ಮಿಂದೇನಾದೀತು? ಆದದ್ದೆಲ್ಲ ನಮ್ಮಿಂದಲೇ—ಖಾರದ ಪಂಗಡಕ್ಕೆ ಸೇರಿದ ಉಗ್ರಪಕ್ಷದವರಾದ ನಮ್ಮಿಂದಲೇ" ಎಂದರು.

ಅಷ್ಟರಲ್ಲಿ ಅಧ್ಯಕ್ಷರು—'ಓಹೋ! ನೀವೇ ಮಹಾ ಯೋಗ್ಯರೂ? ಲೋಕದಲ್ಲಿ ಸಮಾರಾಧನೆ ಮಂಡಿಗೆ, ಚಿರೋಟಿ, ಲಾಡುಗಳದೋ? ಅಲ್ಲ, ಪಕ್ಕೋಡಾ, ಬಿಸ್ಕುಟು ಅಂಬಡೆ, ಖಾರಾ ಬೂಂದಿಯದೋ? ಏನು ಸ್ವಾಮಿ!" ಎಂದರು.

ಅಷ್ಟರಲ್ಲಿ [illegible] ಹಾಕಿದ್ದೀರಿ. [illegible]

ಅಪ್ಪರಲ್ಲಿ ಸಭೆಯಲ್ಲಿ ಗಲಭೆ, 'ನೋ ಕಾನ್ಫಿಡೆನ್ಸ್' 'ನಾನ್ ಕಾಪ್‌ರೇಶನ್'ನ ಗದ್ದಲ. ಗದ್ದಲದಲ್ಲಿ ಲಾಡಪ್ಪನವರು ಹಪ್ಪಳದ ಮೇಲೆ ಬಿದ್ದರು. ಬಿ। ಅಂಬಡೆಯವರು ಚಿರೋಟಿಯವರ ಮೇಲೆ ಬಿದ್ದರು. ಕೆಲವರು ಇದನ್ನು ಪ್ರೊಟೆಸ್ಟ್ ಮಾಡಿ, ವಾಕ್‌ಔಟ್ ಎಂದರು. ಅಪ್ಪರಲ್ಲಿ ತುಪ್ಪದ ದೋಸೆಮ್ಮನವರು ಸೆರಗು ಬೀಸಿ ದೀಪ ನಂದಿಸಿ, ಎಲ್ಲರಿಗೂ ಸಮಾಧಾನ ಹೇಳಿ, ಬೆಳಗಿನ ಜಾಮದಲ್ಲಿ ಈ ಕೆಳಗಿನ ಠರಾವುಗಳನ್ನು ಬೇಮುಂಜೂರು ಮಾಡಿಸಿದರು.

(೧) ದೊಡ್ಡ ಮನುಷ್ಯರೂ ಕಾಫಿ ಹೋಟಲುಗಳಿಗೆ ನುಸುಳುತ್ತಿರುವುದಕ್ಕಾಗಿ ವಂದನೆ (೨) ಹುಡುಗರೂ, ಮನೆ ಹೆಂಗಸರೂ ದುಡ್ಡು ಕದ್ದು ನಮ್ಮ ಹೊಟ್ಟೆ ಹೊರೆಯುತ್ತಿರುವುದಕ್ಕಾಗಿ ವಂದನೆ. (೩) ದೊಡ್ಡ ಹೋಟಲುಗಳ ಕಿಲುಬು ಬಿಟ್ಟು, ಸಣ್ಣ ಹೋಟಲುಗಳ ಮೇಲೆ ಮೊಕದ್ದಮೆ ಹೂಡುತ್ತಿರುವುದಕ್ಕಾಗಿ ಹೆಲ್ತ್ ಶಾಖೆಗೆ ವಂದನೆ. (೪) ಹೋಟೆಲವರ ಸುಳ್ಳು ಲೆಕ್ಕಕ್ಕಾಗಿ ವಂದನೆ. (೫) ನಿಜವಾದ ದುಡ್ಡನ್ನು ಕೊಡದೆ ಜಾರುವವರಿಗೆ ವಂದನೆ. (೬) ದರ್ಶನಮಾತ್ರದಿಂದಲೇ ಸ್ವರ್ಗಲಾಭವಾಗುವ ಪವಿತ್ರ ವಸ್ತುವಾದ ಕಾಫಿ ಗಾಳಿಸುವ ವಸ್ತ್ರಕ್ಕೂ, ಕಾಫಿ ಮಾಡುವವನುಟ್ಟ ವಸ್ತ್ರಕ್ಕೂ ವಂದನೆ. (೭) ಕೊಳಕು ಕಪ್ಪುಗಳಿಗೂ, ಕಮಟು ಎಣ್ಣೆಗೂ, ಬೆರಿಕೆ ತುಪ್ಪಕ್ಕೂ, ಹುಳಬಿದ್ದ ಹಿಟ್ಟಿಗೂ, ಕೆಟ್ಟುಹೋದ ತೆಂಗಿನಕಾಯಿಗೂ ವಂದನೆ. (೮) ವಾಸನೆ ಬಂದರೂ ನಮ್ಮನ್ನು ಬಿಸಾಡದೆ ಗಿರಾಕಿಗಳಿಗೆ ತಿನ್ನಿಸುವುದಕ್ಕಾಗಿ ವಂದನೆ. (೯) ಇವೆಲ್ಲ ಕಾರಣಗಳಿಂದ ರೋಗಗಳನ್ನೂ, ಡಾಕ್ಟರುಗಳನ್ನೂ ಹೆಚ್ಚಿಸಿದ್ದಕ್ಕಾಗಿ ನಮಗೆ ನಿಮ್ಮ ವಂದನೆ. ನಿಮಗೆ ನಮ ವಂದನೆ. ಇತಿ ಶ್ರೀ—ಇಷ್ಟೇ—

ಬರುವ ವರ್ಷ ಇದೇ ಸಭೆ ಭೇತಾಳಲೋಕದಲ್ಲಿ ಸೇರುವುದಾಗಿ ಸುದ್ದಿ. ಅವರೇ ಅಧ್ಯಕ್ಷರು. ಆಲೋಚಿಸತಕ್ಕ ವಿಷಯಗಳು (೧) ಈ ವರ್ಷ ಮಾವಿನಕಾಯಿ ಏಕೆ ಕಡಿಮೆ? (೨) ಆ ಬಗ್ಗೆ ಬೋರ್ಡು ಯಾವ ಚಳವಳ ಹೂಡಬೇಕು? ಹುಣಿಸೇ ಹಣ್ಣು ಯಾಕೆ ಹೆಚ್ಚು; ಮಾವಿನ ಹಣ್ಣಿನಂತೆ ಅದೂ ಹುಳಿಯಾಗಿರುವಲ್ಲಿ ಅದನ್ನೇ ವಿಲಾಯಿತಿಗೆ ಮಾವಿನ ಹಣ್ಣಿನ ಬದಲು ರಫ್ತು ಯಾಕೆ ಮಾಡಬಾರದು? ಇತ್ಯಾದಿ ವಗೈರೆ, ಮುಂತಾದ್ದು— ಸ್ವಸ್ತಿ!

THE KANARA YOUNG FOOTBALLERS "A" TEAM, BOMBAY.



Winners of the South Kanara Sporting Association 'CUP' Tournament.

Standing from left:—
V. M. Karkera, T. M. Shetty, B. Uchill. M. R. Shriyan, B. M. Kotian, K. A. Kotian, K. B. Shetty.
Sitting from left:—N. K. Suvarna (Captain), K. T. Dewji, K. V. Devadiga.
,, on Floor:—H. R. Devadiga, D. M. Kunder.

(Photo by: M. Ishwar, Bombay.)

ಜೀವನವೂ ಹಸ್ತರೇಖೆಗಳೂ.

ಲೇಖಕ:—ಮಂಗಳೂರು ಜಾರಪ್ಪ.

"God caused signs or seals on the hands of all the sons of men that the sons of men might know their works".
(Book of Job. Chap. XXXVII. Ver 7.)


ಸಂಕ್ಷಿಪ್ತ ಮುನ್ನುಡಿ:—ಇದು, ಮುಂದಕ್ಕೆ ಗ್ರಂಥರೂಪವನ್ನು ಹೊಂದಲಿರುವ ದೀರ್ಘ ಲೇಖನದ ಮೊದಲಿನಂಕ. ಹಸ್ತ ಪರೀಕ್ಷಾ ಪಠನೆಯಲ್ಲಿನ ನನ್ನ ಸವಿಸ್ತಾರ ಅನುಭವದ ಸಾರ. ಆಂಗ್ಲ ಕ್ರಮಾನುಸಾರವಾದುದು. ಈ ಮಾಸಿಕದ ಸಂಚಿಕೆಯಲ್ಲಿ ಈ ವಿಷಯವನ್ನೆತ್ತಿ, ಕೂಡಿದಷ್ಟು ಸುಲಭ ಶೈಲಿಯ ಸಚಿತ್ರ ಲೇಖನಗಳನ್ನು ಪ್ರಕಟಿಸಿ, ಕನ್ನಡಮಾತೆಯ ಸೇವೆ ಮಾಡಬೇಕೆಂದಿದ್ದೇನೆ.—ಮ. ಜಾ.

ಲೇಖಾಂಕ ೧.

ರೇಖಾಶಾಸ್ತ್ರದ ಪ್ರಾಚೀನತೆ.

ಅದೊಂದು ಕಾಲವಿದ್ದಿತು,—ಅಗ, ಹಸ್ತರೇಖೆಗಳಿಗೂ ಮಾನವನ ಜೀವನಕ್ಕೂ ನಿಕಟ ಸಂಬಂಧವಿದೆಯೆಂದು ಸಮಸ್ತ ಜಗತ್ತೇ ತಿಳಿದಿದ್ದಿತು. ಆಧುನಿಕ ಕಾಲದಲ್ಲಿ ಜನರು 'ಜಾತಕ'ದ ಮೇಲೆ ವಿಶ್ವಾಸವಿಡುವಂತೆ, ರೇಖಾಶಾಸ್ತ್ರದ ಮೇಲೆ ಪ್ರತಿಯೊಂದು ಮತದವರು ವಿಶ್ವಾಸವನ್ನಿಟ್ಟಿದ್ದರು.

ಜಗತ್ತಿನ ಸರ್ವ ವಿಜ್ಞಾನ, ಸರ್ವ ಶೋಧೆಗಳಿಗಿಂತ ಹಸ್ತರೇಖಾ ಶಾಸ್ತ್ರವು (Palmistry or Cheiromancy) ಪ್ರಾಚೀನವಾದುದೆಂದು ಎಷ್ಟೋ ಕಾಲದ ಹಿಂದೆ ಕಂಡು ಹಿಡಿಯಲಾಗಿದೆ. ಮಾನವನು ನಾಗರೀಕತೆಯನ್ನು ಹೊಂದಿ ಪ್ರಸ್ತುತ ಸ್ಥಿತಿಗೆ ಬಂದು ತಲಪುವ ಮೊದಲು ಅವನು ಈ ಅದ್ಭುತ ಶಾಸ್ತ್ರದ ಅರಿವಿನಲ್ಲಿದ್ದನು. ಹಿಂದೂಸ್ಥಾನ, ಚೈನಾ, ಪರ್ಶಿಯಾ, ಈಜಿಪ್ತು, ರೋಮ್ ದೇಶಗಳ ಪುರಾತನ ಮಹಾವ್ಯಕ್ತಿಗಳು ಈ ಕುರಿತಾಗಿ ಓಲೆಗರಿಗಳಲ್ಲೋ, ತಾಮ್ರ ತಗಡು, ಬಂಡೆಕಲ್ಲು ಮೊದಲಾದುವುಗಳ ಮೇಲೋ ಬರೆದಿಟ್ಟಿದ್ದ ಮಹತ್ವದ ಅನೇಕಾನೇಕ ಲೇಖನಗಳು ಈಗೀಗ ಲಭಿಸುತ್ತಿವೆ. ಗ್ರೀಸ್ ದೇಶದಲ್ಲಿ ಸ್ತ್ರೀ ಪುರುಷರು ವಿವಾಹ ಸಂಬಂಧವನ್ನು ಬೆಳೆಸುವ ಪ್ರಥಮದಲ್ಲಿ ಇಗರ್ಜಿಗಳ ಧರ್ಮಗುರುಗಳು ಅವರ ಹಸ್ತರೇಖಾ ಪರೀಕ್ಷೆಯನ್ನು ಮಾಡಿ, ವರನಿಗೆ ತಕ್ಕ ವಧುವನ್ನೂ, ವಧುವಿಗೆ ತಕ್ಕ ವರನನ್ನೂ ಆರಿಸಿ ಸ್ವರಾಷ್ಟ್ರದ ಶಕ್ತಿಯನ್ನು ಪ್ರವೃದ್ಧಿಸುತ್ತಿದ್ದರು. ವಿಚಕ್ಷಣಶಾಲಿಗಳಾದ ಗುರುಗಳು ಆರಿಸಿದ ಅಂತಹ ದಂಪತಿಗಳಿಂದ ಬಹು ದೃಢಕಾಯರೂ, ವೀರರೂ ಜನಿಸಿದ ದೃಷ್ಟಾಂತಗಳೂ ಇವೆ. ಈ ಅಮೋಘಶಾಸ್ತ್ರವು ಆದಿಯಲ್ಲಿ ಜನಿಸಿ



ದುದು ಹಿಂದೂದೇಶದಲ್ಲೆಂದು ಕೆಲವರವಾದವೂ, ಇದು ಗ್ರೀಕರಿಂದ ಮೊದಲು ಶೋಧಿಸಲ್ಪಟ್ಟಿತೆಂದು ಕೆಲವರ ತರ್ಕವೂ ಇರುವುವು. ಆದರೂ, ಇತ್ತಿತ್ತಲಾಗೆ ಪ್ರಕಟವಾಗುತ್ತಿರುವ ಆಂಗ್ಲ ಪುಸ್ತಕಗಳಿಂದಾಗಿ ಈ ಗಮನೀಯ ಶಾಸ್ತ್ರವು ಹಿಂದೂ ದೇಶದಲ್ಲಿ ಅನಾದಿ ಕಾಲದಿಂದಲೂ ಇತ್ತೆಂದು ತಿಳಿಯಲವಕಾಶವು ದೊರೆಯುತ್ತಿದೆ. ಹಸ್ತರೇಖಾ ಶಾಸ್ತ್ರದಲ್ಲಿ ತಜ್ಞನಾದ ಅನಾಮಧೇಯಕ 'Cheiro ಎಂಬವನು ಈ ಶಾಸ್ತ್ರವು ಹಿಂದೂದೇಶದಲ್ಲಿ ಜನ್ಮಿತವಾಯಿತೆಂದು ಬಹುಮಟ್ಟಿಗೆ ಅಭಿಪ್ರಾಯಗೊಂಡಿರುವನು.

ಕ್ರಿಸ್ತನು ಹುಟ್ಟುವ ಎರಡು ಸಾವಿರ ವರ್ಷಗಳ ಮೊದಲು ಹಸ್ತಲಕ್ಷಣದ ಓಲೆಗ್ರಂಥಗಳು ಇದ್ದುವಾಗಿ ಶೋಧನಕಾರರು ಸಾಕ್ಷ್ಯಪೂರ್ವಕವಾಗಿ ಹೇಳುತ್ತಿರುವರು; ಆದರೆ ಈ ವಿದ್ಯೆಯು ಹೆಚ್ಚಿನ ಪ್ರಚಾರಕ್ಕೆ ಬರಬೇಕಾದರೆ ಅನೇಕ ಶತಮಾನಗಳು ಬೇಕಾದುವು. ಕೊನೆಗೆ, ೧೪೭೫ರಲ್ಲಿ ಕಂಡುಹಿಡಿಯಲ್ಪಟ್ಟ ಮುದ್ರಣ ಯೋಜನೆಯು ದೆಸೆಯಿಂದಾಗಿ ಒಂದೊಂದೇ [illegible]. ಆಗಿನ ಒರಟು ಯಂತ್ರದಲ್ಲಿ ಮುದ್ರಿತವಾದ ಪ್ರಥಮ ಗ್ರಂಥವು 'Die Kunst Ciromantia' ಎಂಬ ರೇಖಾ ಶಾಸ್ತ್ರ ಪುಸ್ತಕವು. ಮುದ್ರಿತ ಪುಸ್ತಕಗಳು ದೊರೆತಂತೆ, ಈ ಶಾಸ್ತ್ರಜ್ಞಾನದ ಬೆಳಕು ಎಲ್ಲೆಲ್ಲೂ ಹರಡಿತು ಸಾಹಿತ್ಯಭಕ್ತರಾದ ಅರಿಸ್ಟೋಟಲ್, ಪ್ಲಿನಿ, ಪಾರಸೆಲಸ್, ಕಾರ್ಡನಿಸ್ ಮೊದಲಾದವರು ಈ ಶಾಸ್ತ್ರ ವಿಶಾರದರಾದರು. ಸಮ್ರಾಟ ಅಗಸ್ಟಸನು ಈ ಶಾಸ್ತ್ರಕೋವಿದರನ್ನು ತನ್ನ ಅರಮನೆಯಲ್ಲೇ ಇರಗೊಳಿಸಿ, ಅವರಿಂದ ಈ ವಿದ್ಯೆಯ ಹೆಚ್ಚಿನ ಜ್ಞಾನವನ್ನು ಹೊಂದಿದನು.

೧೮೫೩ರಲ್ಲಿ ಫ್ರಾನ್ಸಿನಲ್ಲಿ ಮೊನ್ಸಿರ್ ಬರ್ಟಿಲ್ಲನ್ ಎಂಬ ಗೂಢ ಶಾಸ್ತ್ರಜ್ಞನು ಈ ಶಾಸ್ತ್ರವನ್ನು ಹೆಚ್ಚಿನ ಪ್ರಚಾರಕ್ಕೆ ತಂದನು. ಅವನೂ, ಅವನ ಬೆಂಬಲವಾಗಿದ್ದ ಪೋಲೀಸರೂ ಹಸ್ತಪರೀಕ್ಷೆಯ ಮೂಲಕವೇ ಕಳ್ಳಕಾಕರನ್ನೂ ಕೊಲೆಗಡಕರನ್ನೂ ಪತ್ತೆಮಾಡುತ್ತಿದ್ದರು. ೧೮೭೪ರಲ್ಲಿ ಸರ್ ಚಾರ್ಲ್ಸ್‌ಬೆಲ್ ಎಂಬ ಪ್ರಾಣಿಶಾಸ್ತ್ರಜ್ಞರು ಬರ್ಟಿಲ್ಲನನ ಗೂಢಶಾಸ್ತ್ರ ಸೂತ್ರಗಳ ಮೇಲೆ ಗಾಢಾವಾದ ಶೋಧೆ ನಡೆಸಿ, ಕೊನೆಗೆ "ಮನುಷ್ಯನ ಕೈಯು ಅಣು (Corpuscles) ಗಳಿಂದ ಕೂಡಿರುತ್ತದೆ; ಒಂದು ಚಚ್ಚೌಕ ರೇಖೆಯಲ್ಲಿ ಇಂತಹ ೧೦೮ ಅಣುಗಳು ಕೂಡಿಕೊಂಡಿರುವುವು. ಈ ಅಣುಗಳು ಮನುಷ್ಯನ ಸರ್ವ ನರಯೋನಿಗಳಿಗೆ ಸಂಬಂಧಿಸಿದ್ದು ಆಜನ್ಮವಾಗಿಯೇ ಇರುತ್ತವೆ. ಇವುಗಳು ಜನ್ಮಾರಭ್ಯದಿಂದಿರಲು ತಾಯಿಯ ಗರ್ಭದ ಮೇಲಾಗುವ ನಕ್ಷತ್ರದ ಪರಿಣಾಮವೇ ಕಾರಣವು" ಎಂದು ಮುಂತಾಗಿ ಬರೆದಿರುವರು. ಹಿಬ್ರೂಭಾಷೆಯಲ್ಲಿ ಬರೆಯಲ್ಪಟ್ಟಿದ್ದ Book of Job ಎಂಬ ಪ್ರಾಚೀನ ಗ್ರಂಥದಲ್ಲಿ "ಮನುಷ್ಯನು ತನ್ನ ಉದ್ಯೋಗಗಳನ್ನರಿತುಕೊಳ್ಳಲೆಂದು ದೇವರು ಅವನ ಕೈಯಲ್ಲಿ ಚಿಹ್ನೆಗಳನ್ನು ಕೊಟ್ಟನು" ಎಂಬುದಾಗಿ ಬರೆಯಲ್ಪಟ್ಟಿರುತ್ತದೆ.

ಹಸ್ತ ಪರೀಕ್ಷಾ ಶಾಸ್ತ್ರಕ್ಕೂ ಜ್ಯೋತಿಷ್ಯಕ್ಕೂ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಇವೆರಡು ಶಾಸ್ತ್ರಗಳೂ ಒಂದಕ್ಕೊಂದು ಸಂಬಂಧಿಸಿಕೊಂಡು ಇರುತ್ತವೆ. ಗಗನಮಂಡಲವನ್ನು ಪರೀಕ್ಷಿಸಿ ಜ್ಯೋತಿಷ್ಯಗಾರರು ನುಡಿಯುವ ಭವಿಷತ್ತನ್ನು ಒಬ್ಬ ವ್ಯಕ್ತಿಯ ಅಂಗೈ ನೋಡಿ ಅತ್ಯಂತ ಸಮಂಜಸವಾಗಿ ಹೇಳಲು ಸಾಧ್ಯವಿದೆ. ಆದರೆ ಈ ಸಾಧನೆಯಲ್ಲಿ ಪರೀಕ್ಷಕನು ಅಸಾಧಾರಣವಾದ ಚಿತ್ತೇಕಾಗ್ರತೆಯುಳ್ಳವನಾಗಿರಬೇಕು. ಹೆಚ್ಚಾಗಿ, ಜ್ಯೋತಿಷ್ಯವು ಮಹಾಋಷಿಗಳಿಗೆ ಬಹು ಸುಲಭಸಾಧ್ಯವಾದುದು. (ಸಾಮಾನ್ಯ ಮನುಷ್ಯರಲ್ಲೂ ಕೆಲವು ಪ್ರವೀಣ ಜ್ಯೋತಿಷ್ಯರಿರುವರೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ) ಬಾಹ್ಯಪ್ರಪಂಚದಿಂದ ವಿಮುಕ್ತರಾದ ಅವರು ತಮ್ಮ ಅಂತರ್ಚಕ್ಷುಗಳ ಬಲದಿಂದ, ದಿವ್ಯ ಜ್ಞಾನಶಕ್ತಿಯಿಂದ ಪ್ರಪಂಚದ ಕಾಲ, ಸ್ಥಿತಿ, ಲಯಗಳನ್ನು ಭವಿಷತ್ಕರಿಸಲು ಸಾಧ್ಯವಿದೆ. ಶ್ರೀ ರಾಮಕೃಷ್ಣ ಪರಮಹಂಸರು ಒಬ್ಬ ವ್ಯಕ್ತಿಯನ್ನು ಕಂಡೂ, ಕಾಣದೆಯೂ ಅವನ ಪೂರ್ವಚರಿತ್ರೆಯೇನು, ಅವನ ಭವಿಷತ್ತು ಯಾವ ರೂಪದಿಂದ ಸಿಲ್ಲುವುದು ಎಂದು ಕೂಲಂಕುಶವಾಗಿ ತಿಳಿದುಕೊಳ್ಳುತ್ತಿದ್ದರೆಂದು ರೊಮೈನ್ ರೋಲೆಂಡರು ಹೇಳುತ್ತಾರೆ. ಶ್ರೀ ಪರಮಹಂಸರು ತನ್ನ ಶಿಷ್ಯನನ್ನಾಗಿ ನರೇಂದ್ರ (ಆ ಮೇಲೆ ಸ್ವಾಮಿ ವಿವೇಕಾನಂದ) ನನ್ನರಿಸಲು ಕಾರಣವಿದೇ ಇರುತ್ತದೆ. ಅವರು ತನ್ನ ದಿವ್ಯ ದೃಷ್ಟಿಯನ್ನು ವಿಸ್ತಾರವಾಗಿ ಹರಡಬಿಟ್ಟು, ಕೂತಲ್ಲಿಂದಲೇ ಶಿಷ್ಯಾನ್ವೇಷಣಕ್ಕೆ ತೊಡಗಿದರು. ಆಗ ಕೊಲೆಜು ವಿದ್ಯಾರ್ಥಿಯಾಗಿದ್ದ ನರೇಂದ್ರನ ಭವಿಷತ್ತನ್ನು ತನ್ನ ಜ್ಞಾನ ದೃಷ್ಟಿಯಿಂದ ನೋಡಿ, ಅವನನ್ನು ಅಗೋಚರಶಕ್ತಿಯಿಂದ ತನ್ನ ಬಳಿಗೆ ಬರಮಾಡಿಕೊಂಡು, ಅವನಲ್ಲಿ ತನ್ನ ಸರ್ವ ಚೈತನ್ಯವನ್ನು ತುಂಬಿಬಿಟ್ಟರು. ಅಮೆರಿಕಾ ಇಂಗ್ಲಾಂಡುಗಳಲ್ಲಿ ಮಹಾ ಜ್ಯೋತಿಷ್ಯರೆಂದು ಹೆಸರುಗೊಂಡಿರುವ ರಿಚಾರ್ಡ್ ಒಫೆನ್‌ಬಚ್ ಎಂಬವರು ಜ್ಯೋತಿಷ್ಯದ ವಿಷಯವಾಗಿ ತನ್ನ ಅನುಪಮ ವಿಶ್ವಾಸವನ್ನು "Astrological studies have proved that certain events in the life of person have been mapped out, and in no circumstances can these be evaded". —ಅಂದರೆ— "ವ್ಯಕ್ತಿಯ ಜೀವಮಾನದಲ್ಲಿನ ಕೆಲವು ಘಟನೆಗಳು ನಿರ್ದೇಶಿಸಲ್ಪಟ್ಟಿದ್ದು, ಅವುಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ" ಎಂದಿರುತ್ತಾರೆ.

ಒಂದು ಸಾವಿರದ ಒಂಭೈನೂರ ಮೂವತ್ತಮೂರು ವರ್ಷಗಳ ಹಿಂದೆ ಬೆತ್ಲೆಹೇಮಿನಲ್ಲಿ ಜನ್ಮವೆತ್ತಿದ ಯೇಸುಕ್ರಿಸ್ತನು ಹುಟ್ಟಿದಾಗಲೇ, ಅವನನ್ನು ಜೋಯಿಸರು ಕಂಡು, "ಈತನು ಮಹಾ ಪ್ರವಾದಿಯಾಗುವನೆ"ಂದು ಭವಿಷತ್ತನ್ನುಸುರಲಿಲ್ಲವೇ? ದ್ವಾರಕೆಯಲ್ಲಿ ಜನ್ಮವೆತ್ತಿದ ಶ್ರೀ ಕೃಷ್ಣನ ಮುಖಮುದ್ರೆಯನ್ನು ಕಂಡು ಚಕಿತರಾದ ಜ್ಯೋತಿಷ್ಯಗಾರರು ಏನೆಲ್ಲ ಭವಿಷತ್ತನ್ನು ನುಡಿದಿರಲಿಲ್ಲ! ಅವನಿಗಿಂತಲೂ ಮೊದಲು ಅಯೋಧ್ಯಾ ನಗರದಲ್ಲಿ ಹುಟ್ಟಿದ ಶ್ರೀ ರಾಮನ ಲಕ್ಷಣಗಳನ್ನು ಕಂಡು ವಿಶ್ವಾಮಿತ್ರನು ಆನಂದಭರಿತನಾಗಿ ತನ್ನ ಸಕಲ ವಿದ್ಯೆಗಳಿಂದಲೂ ಅವನನ್ನು ಪಾರಂಗತನನ್ನಾಗಿ ಮಾಡಲಿಲ್ಲವೇ?

ಒಬ್ಬೊಬ್ಬನ ಮನುಷ್ಯನ ಮುಖ ಲಕ್ಷಣವೂ, ಆಕಾರವೂ ಒಂದೊಂದು ರೀತಿಯಿಂದಿರಲು ಕಾರಣವೇನು?–ಒಬ್ಬೊಬ್ಬ ಮನುಷ್ಯನ ಹಸ್ತಾಕಾರವೂ ಹಸ್ತರೇಖೆಗಳೂ ಭಿನ್ನ ಭಿನ್ನ ರೂಪದಿಂದಿರಲು ಕಾರಣವೇನು? ಎಂಬೀ ವಿಚಾರಗಳು ಮನುಷ್ಯನನ್ನು ಅನಾದಿಕಾಲದಿಂದಲೇ ಬಾಧಿಸುತ್ತಿದ್ದುವು. ನಾಗರಿಕತನದ ವರ್ಚಸ್ಸು ಅವನ ಮೇಲೆ ತನ್ನ ಪ್ರತಾಪವನ್ನು ನಡೆಸುವ ಮೊದಲೇ ಅವನು ಈ ಸಮಸ್ಯೆಯ ಪರಿಹಾರಕ್ಕಾಗಿ ಹಂಬಲಿಸುತ್ತಿದ್ದನು. ಈ ಹಂಬಲವು ಅವನಲ್ಲಿ ಆಜನ್ಮಗುಣವಾಗಿಯೇ ಬಂದಿತು.

ಅಲೆಕ್ಸಾಂಡರ್ ದಿ ಗ್ರೇಟ್ ಚಕ್ರವರ್ತಿಯ ಕಾಲದಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟಿದ್ದು, ಹರ್ಮ್ ಎಂಬವನಿಗೆ ಸಮರ್ಪಿಸಲ್ಪಟ್ಟಿದ್ದ ಒಂದು ಹಸ್ತರೇಖಾ ಶಾಸ್ತ್ರದ ಉತ್ಕೃಷ್ಟ ಗ್ರಂಥವು ಹಿಸ್‌ಪಾನಸ್ ಎಂಬವನಿಗೆ ದೊರೆಯಿತು. ಈ ಪುಸ್ತಕವನ್ನು ಅವನು ಪಠಿಸಿ ಶ್ಲಾಘಿಸಿ, ನಂತರ ಇದನ್ನು ಚಕ್ರವರ್ತಿಗೆ ಬಹುಮಾನವಾಗಿ ಕಳುಹಿಸಿ ಕೊಟ್ಟನು.

ಇಗರ್ಜಿಯ ಪ್ರಾಬಲ್ಯವು ಪ್ರಪಂಚಕ್ಕೆ ಹರಡಿದಂತೆಲ್ಲಾ ಹಸ್ತರೇಖಾ ಶಾಸ್ತ್ರವು ಮೂಲೆಗೊತ್ತಲ್ಪಟ್ಟಿತು. ಕೈ ನೋಡಿ, ಹಿಂದಿನ ಅಂದಿನ ಮುಂದಿನ ಘಟನೆಗಳ ಜ್ಞಾನವನ್ನು ಜನತೆಗೆ ಕೊಡುತ್ತಲಿದ್ದ ಅನೇಕ ಶಾಸ್ತ್ರಜ್ಞರ ಉದ್ಯಮವು ಇಂದ್ರಜಾಲ ಮಹೇಂದ್ರಜಾಲವೆಂಬಭಿಪ್ರಾಯವನ್ನು ಆಗಿನ ಸ್ವಾರ್ಥಾಂಧ 'ಫಾದರು'ಗಳು ಸರ್ವತೋಮುಖವಾಗಿ ಹಬ್ಬಿದರು. ಇಗರ್ಜಿಯ ಸಹಾಯದಿಂದ ಪ್ರಚಾರಕ್ಕೆ ಬರದ ಪ್ರತಿಯೊಂದು ವಿದ್ಯೆಗೂ ಇದೇ ರೀತಿಯ ದುರ್ಗತಿಯೊದಗಿತು. ಏಕೆ? ಜೋತಿಷ್ಯ (Astronomy) ಯಂತಹ ಮಹಾ ಶಾಸ್ತ್ರವೂ ಕಾಲಾನುಕ್ರಮವಾಗಿ ಕಾಡು ಪಾಲಾಗುತ್ತಾ ಬಂದಿತು.

ಪ್ರಾಮುಖ್ಯ ರೇಖೆಗಳು.

ಸರ್ವಸಾಧಾರಣವಾಗಿ ಮನುಷ್ಯನ ಅಂಗೈಯಲ್ಲಿರುವುದು ನಾಲ್ಕು ಪ್ರಾಮುಖ್ಯ ರೇಖೆಗಳು:–(೧) ಶಿರೋರೇಖೆ, (Head line) (೨) ಆಯುಷ್ಯ ರೇಖೆ, (Life line) (೩) ಅದೃಷ್ಟ ರೇಖೆ (Fate line) ಮತ್ತು (೪) ಹೃದಯ ರೇಖೆ. (Heart line) (ಚಿತ್ರ ನಂ. ೧ನ್ನು ನೋಡುವುದು) ಶಿರೋ ರೇಖೆಯು ಮನುಷ್ಯನ ಮೆದುಳು ಮತ್ತು ಸಂಪೂರ್ಣ ಶಿರಸ್ಸಿನ ಪ್ರತಿಬಿಂಬ; ಆಯುಷ್ಯ ರೇಖೆಯು ಅವನ ಜೀವನವನ್ನಳೆಯುವ ಗಜಕೋಲು; ಅದೃಷ್ಟ ರೇಖೆಯು ಅವನ ಜೀವನದ ಉನ್ನತಿ ಅವನತಿಗಳನ್ನು ಪ್ರತಿಫಲಿಸುವ ಕನ್ನಡಿ; ಮತ್ತು ಹೃದಯ ರೇಖೆಯು ಅವನ ಹೃದಯಕ್ಕೆ ಸಂಬಂಧವುಳ್ಳ ತಂತಿ.

(ಬರುವ ಸಂಚಿಕೆಯಲ್ಲಿ ಶಿರೋ ರೇಖೆಯ ಕುರಿತು ಸಚಿತ್ರ ಲೇಖನವು ಬರುವುದು]

ಎನ್ನ ಮಮತೆಯ ಹುಡುಗಿ

ಲೇಖಕರು:—ಪಿ. ಹೈದರ್.

ಎನ್ನ ಪ್ರೇಮದ ನಿಧಿಯು,
ಎನ್ನ ಮಮತೆಯ ಮಣಿಯು,
ಅರಳಿದಲರಿನ ತೆರದಿ ಶೋಭಿಸುವುದು.
ಎನ್ನ ಪ್ರೇಮದ ರನ್ನ,
ಎನ್ನ ಮಮತೆಯ ಗಣಿಯು
ತರಣಿ ಬೆಳಗುವ ತೆರದಿ ಬೆಳಗುತಿಹುದು
॥ ೧ ॥

ಮೃದುಮಧುರ ನುಡಿಗಳನು
ಆಲಿಸುತ್ತಿರಲೆನ್ನ
ಮನಮೋಹ ಸಾಗರದಿ
ಮುಳುಗಿ ಹೋಯ್ತು
ಚದುರೆಯಾಕೆಯ ಅಂದವನು
ಕಂಡ ಎನ್ನಯನ—
ವನ್ನು ಹರ್ಷೋದಕದಿ ತೊಯ್ದು
ಆಯ್ತು ॥ ೨ ॥

ಬಾಹ್ಯ ಸೌಂದರ್ಯಕ್ಕೆ
ಮನ ಸೋತಿರುವ ಎನ್ನ
ಮತಿಗೇಡಿತನವ ನಾನೇನೆಂಬೆನು?
ಬಾಹ್ಯಾಂಗಗಳು ಸಕಲ ಸ್ಥಿರವಾಗಿ
ಇರಲವನು
ಅತಿ ಮೂಢನಂತೆ ನಾನೇಕೆ
ವರ್ಣಿಸೆನು ॥ ೩ ॥

ಅವಳ ರೂಪವು ಸ್ಥಿರವೆ
ಅವಳ ವಿತ್ತವು ಸ್ಥಿರವೆ
ಅವಳ ಬಾಳುವೆಯು ಜಗದೊಳಗೆ
ಸ್ಥಿರವೆ?
ಅವಳ ದೇಹದ ಚರ್ಮ ಮಾಂಸಗಳು
ತಾನಲ್ಲ
ಅವಳ ಅಂದವು ಭುವಿಯ ಒಳಗೆ
ಸ್ಥಿರವೆ? ॥ ೪ ॥

ಚ್ಯುತಿಯಿಲ್ಲದಿರುವ
ಮನ್ಮೋತ್ತಮನ ಭಾಗ್ಯವೋ—
ರಲು ನಾನೇಕವಳ
ಪ್ರೀತಿಸದೆ ಇರುವೆ?
ಮತಿವಂತರಿದ ತಿಳಿದು
ಭುವಿಯೊಳಿಹ ಜೀವಿಗಳ
ಉರುತರದ ಪ್ರೇಮದಲಿ ಕಾಣ್ವರಲ್ತೆ!
॥ ೫ ॥

ಪರಮಾತ್ಮನಾಭಾಗ
ಆ ಬಾಲೆಯೊಳಗಿರಲು
ನಾನೇಕೆ ಅವಳ ಪ್ರೀತಿಸದಿರುವುದು?
ಕುರಿಗಳಂತಿಹ ಜನರು
ಪ್ರೇಮವೇನೆಂಬುದನು
ಇನ್ನು ಕೂಡಾ ತಿಳಿಯದಿರುವರಲ್ತೆ
॥ ೬ ॥

ಪ್ರೇಮವೇ ಜೀವನದ
ಸಾರವಾಗಿರಲದನು
ಅರಿಯದಿರುವವರ
ಬಾಳುವೆಯು ಹಾಳು;
ಪ್ರೇಮಮಯವಾದ ಶರಧಿಯಲಿ
ಓಲಾಡುತಿಹ
ನರ ಮೋಕ್ಷ
ನೊಂದುವರು. ॥ ॥



ಮಾಜಿ ಎಮ್. ಎಲ್. ಸಿ.ಗಳಾದ ಶ್ರೀನಿವಾಸ್ ಕಟ್ಟೆಮನಾರು ರಘುನಾಥ, ಬಳ್ಳಾರಿಯವರು.



ಶ್ರೀ. ಡಿ. ಕೆ. ಭಾರದ್ವಾಜ ಎ. ವಿದ್ಯಾಭೂಷಣ



ಲೋಕಪೂಜ್ಯ ಡಾ॥ ರವೀಂದ್ರನಾಥ ಠಾಗೂರರು

ಬಡತನದ ಆಧ್ಯಾತ್ಮಿಕ ಭಾವ.

ಲೇಖಕರು:— ಶ್ರೀ. ಕಾಪು ಮಂಜುನಾಥ ಶೆಣೈ.

ಭಗವಂತನನ್ನು 'ದೀನೋದ್ಧಾರಕ'ನೆಂದು ಭಕ್ತರು ಸಂಭಾಷಿಸುತ್ತಿರುವ ಕಾರಣವನ್ನು ಕೊಂಚ ವಿಚಾರಿಸಿದರೆ 'ಬಡತನ'ವೆಂಬುದರ ಆಧ್ಯಾತ್ಮಿಕ ಭಾವವನ್ನು ಅರಿಯಬಹುದು. ಬಡತನವೆಂಬುದು ಭಕ್ತರ ಪರೀಕ್ಷಾ ರಂಗ. ನಮ್ಮ ಪ್ರಾಚೀನ ಇತಿಹಾಸ ಗ್ರಂಥಗಳ ಪುಟಗಳನ್ನು ಮಗುಚಿದರೆ, ಭಗವಂತನ ಭಕ್ತರೆಲ್ಲರೂ ಬಡತನದಲ್ಲಿಯೇ ಹುಟ್ಟಿ, ಬೆಳೆದು, ಯಶಸ್ವಿಗಳಾದವರೆಂಬುದು ವ್ಯಕ್ತವಾಗುತ್ತದೆ. ಆದರೆ ಆ ಬಡತನದಲ್ಲಿಯೂ ಒಂದು ಮಹಾತ್ಮ್ಯವಿದೆ, ಅಗಾಧತೆಯಿದೆ. ಶಬರಿಯ ಫಲ ಸಮರ್ಪಣೆ, ಸುಧಾಮನ ಹಿಡಿಯವಲಕ್ಕಿ, ಇವೆರಡು, ಪುರಾಣಗಳಲ್ಲಿ ಪ್ರಸಿದ್ಧ ಪ್ರಕರಣಗಳಾದುವೆಂತು? ಅರಮನೆಗಳಲ್ಲಿ ಹುಟ್ಟಿದರಾದರೂ ಪಾಂಡವರು ಅನುಭವಿಸಿದ ಬಡತನದ ಕಷ್ಟಗಳ ಪರಮಾವಧಿಯೇನು? ಸಂಧಾನಕ್ಕೆ ಹೋದ ಶ್ರೀ ಕೃಷ್ಣಸ್ವಾಮಿಯು ಮೋರೆಯಾದ ಕೌರವನ ಅರಮನೆಗೆ ಹೋಗದೆ, ಬಡಭಕ್ತನಾದ ವಿದುರನ ಗುಡಿಸಿಲಿಗೆ ಬಿಜಯ ಮಾಡಿ, ಒಕ್ಕುಡುತೆ ಹಾಲಿನಿಂದ ಹಸಿವು ತಣಿಸಿ, ಹಾಲಿನ ಹೊಳೆಯನ್ನು ಹರಿಸಿದನೆಂತು? ಇನ್ನು ಹರಿಶ್ಚಂದ್ರ, ಚಂದ್ರಹಾಸ ಮೊದಲಾದ ಚಕ್ರವರ್ತಿಗಳು ಅನುಭವಿಸಿದ ಕಷ್ಟಗಳೆಷ್ಟು? ಇವಕ್ಕೆ ಕಾರಣವೇನು?

ಭಗವಂತನು ಭಕ್ತಪರಾಧೀನನಾದರೂ ಅವನ ಭಕ್ತರನ್ನು ಬಡತನದ ಕಡಲಿನಿಂದ ದಡ ಸೇರಿಸಲಿಲ್ಲವೇಕೆ? ಅವನಲ್ಲಿ ಶಕ್ತಿ ಸಾಮರ್ಥ್ಯವಿಲ್ಲದಿತ್ತೆ? ಇತ್ತು. ಜಗತ್ತೇ ಅವನು; ಅವನೇ ಜಗತ್ತು; ಹಾಗಿರುವಲ್ಲಿ ಸರ್ವ ಶಕ್ತಿಯೂ ಆ ಮಹಾತ್ಮನಲ್ಲಿ ಅಂತರ್ಹಿತವಾಗಿರಬೇಕು. ಆದರೂ, ಭಕ್ತರನ್ನು ಬಡತನದಿಂದ ಉದ್ಧರಿಸದಿರುವುದನ್ನು ಕಂಡರೆ, ಭಗವಂತನು ಬಡತನವೆಂಬುದನ್ನು ತನ್ನ ಭಕ್ತರ ಪರೀಕ್ಷಾ ಕ್ಷೇತ್ರವಾಗಿ ಇಟ್ಟುಕೊಂಡಿರುವನೆಂಬುದರಲ್ಲಿ ಸಂಶಯವಿಲ್ಲ. ಆ ಪರೀಕ್ಷೆಯಲ್ಲಿ ಉತ್ತೀರ್ಣನಾದವನೇ ನಿಜವಾದ ಭಕ್ತನು! ಸಮಾನ ದೃಷ್ಟಿಯುಳ್ಳ ಭಗವಂತನ ಸೃಷ್ಟಿಯಲ್ಲಿ ಮಹೋನ್ನತವಾದ ಐಶ್ವರ್ಯದ ರಾಶಿಯಿದೆ. ಕೆಲವರಿಗೆ ಪಂಚಭಕ್ಷ್ಯ ಪರಮಾನ್ನ, ಹಲವರಿಕೆ ಅರೆಹೊಟ್ಟೆ ಅನ್ನ; ಕೆಲವರು ಅದಕ್ಕೂ ಗತಿ ಕಾಣರು. ಒಬ್ಬನು ದುಡಿಯಬೇಕು. ಇನ್ನೊಬ್ಬನು ಅದರ ಫಲ ಪಡೆಯಬೇಕು. ಹೀಗೆ ವಿರೀತಗಳು, ಲಘುಬಿಗುಗಳು ಪ್ರಸಾರಿತವಿರುವುದನ್ನು ಯೋಚಿಸಿದರೆ "ಕರುಣಾಕರ ನೀನೆಂಬುವದ್ಯಾಕೋ? ಭರವಸವಿಲ್ಲಯೆನಗೆ" ಎಂಬ ದಾಸರ ಹಾಡು ನಟಿಯಲ್ಲವೆನ್ನಬೇಕಾಗುತ್ತದೆ. ಪರಂತು, ಪರಮಾತ್ಮನು ಮಾತ್ರ ಅವರವರು ಮಾಡಿದ ಕರ್ಮದ ಫಲವನ್ನು ಅವರವರಿಗೆ ಉಣಿಸುತ್ತಾನೆಂಬುದು ಸಿದ್ಧಾಂತ!

ಕೃಷಿಕನು ಭೂಮಿಯನ್ನು ಉತ್ತು ಬಿತ್ತುವುದೊಂದು ಕಾಲ, ಫಲ ಪಡೆಯುವುದು ಮತ್ತೊಂದು ಕಾಲ, ಆದುದರಿಂದ ಮಾನವ ಸಮಾಜವು ತನ್ನ ಪೂರ್ವಸಂಚಿತವನ್ನು ಈ ಜನ್ಮದಲ್ಲಿಯಾದರೂ ಹೊಂದಲೇ ಬೇಕಾಗುವುದು. ಸುಖಸಂತೋಷಗಳನ್ನು ಅನುಭವಿಸಿ, ಐಶ್ವರ್ಯಮದದಿಂದ ಕೊಬ್ಬಿದ ಮನುಷ್ಯನು, ಪಾಪಪುಣ್ಯಗಳ ಭೇದವನ್ನು ತಿಳಿಯದೆ, ಸ್ವೇಚ್ಛಾಪ್ರವರ್ತನಾಗಿ, ಪಾಪದ ಗಿಡವನ್ನು ನೆಟ್ಟು, ತನ್ನ ಕರ್ಮಾಚರಣೆಯ ನೀರು ಹೊಯ್ದು ಇನ್ನೊಂದು ಜನ್ಮದಲ್ಲಿ ಅದರ ಫಲ ಪಡೆಯುತ್ತಾನೆ. ಬಡವನು ತನಗೊದಗಿದ ಸಂಕಷ್ಟಗಳ ಸಂಕೋಲೆಯ ಬಂಧನದಿಂದ, ಸ್ವೇಚ್ಛಾನುವರ್ತಿಯಾಗದೆ, ತನ್ನ ಆಚರಣೆಯಲ್ಲಿ ಮನಃಪೂರ್ವಕವಾದ ಜಾಗ್ರುತಿಯನ್ನಿಟ್ಟು, ಮುಂದೆ ಶಾಶ್ವತವಾದ ಸುಖಸಾಮ್ರಾಜ್ಯಕ್ಕೆ ಅಧಿಪತಿಯಾಗುತ್ತಾನೆ. ಆದುದರಿಂದಲೇ ಹಣವಂತನಲ್ಲವಾದರೂ ಗುಣವಂತನಾಗಬೇಕೆನ್ನುವುದು. ಹಣವಂತನಿಗೆ ಪಾಪದ ಭೀತಿಯಿಲ್ಲ; ದೈವದ ಭಕ್ತಿಯಿಲ್ಲ. ಸದಾಚಾರವಿಲ್ಲ. ಕಷ್ಟ ಬಂದಾಗ ಮಾತ್ರ ಹರಕೆ ಹೊನ್ನುಗಳ ದೈವಭಕ್ತಿ. ಆ ಮೇಲೆ ನಾಸ್ತಿ. ಬಡವನಿಗೆ ಸದಾ ಕಷ್ಟವೇ. ಅವನು ದಣುವಿನಿಂದ ಉಸ್ಸೆಂದು ಬಿಡುವ ಪ್ರತಿಯೊಂದು ಶ್ವಾಸದಲ್ಲಿಯೂ ಭಕ್ತಿಯ ಗೀತಿಯಿದೆ. ಪಾಪದ ಭೀತಿಯಿದೆ ಆಚರಣೆಯ ನೀತಿಯಿದೆ ಅದು ಕಾರಣ ಐಶ್ವರ್ಯವಂತನಿಗಿಂತಲೂ ಬಡವನೇ ಶಾಶ್ವತವಾದ ಸದ್ಗತಿ ಹೊಂದಲು ಅರ್ಹನು.

ಭಾಗ್ಯವಂತನಿಗೆ ಬಡತನ ವಿಚಾರ ತಿಳಿದಿರಬೇಕು. ತನ್ನ ಶಕ್ತ್ಯಾನುಸಾರ ಬಡವರ ಗೋಳನ್ನು ತಣಿಸಿ ಬಡವರ ಬಂಧುವಾಗಬೇಕು. ಬಡವರ ಬಂಧುತ್ವಲಾಭದಿಂದ ಭಗವಂತನ ಪ್ರೇಮ ಬಾಂಧವ್ಯ ಉಂಟಾಗುವುದು. ಬಡವರ ಸೇವೆಯೇ ಭಗವಂತನ ಸೇವೆ!

ಸರ್ವ ಸಂಗ ಪರಿತ್ಯಾಗಿಗಳಾಗಿ ವೈರಾಗ್ಯವನ್ನು ಕೈಕೊಳ್ಳುವುದರ ಅರ್ಥವೇನೆಂಬುದನ್ನು ತುಸು ವಿಚಾರಿಸಿದರೆ ವೈರಾಗಿಯು ಇಹಲೋಕದ ಯಾವುದೊಂದು ಸುಖವನ್ನು ಇಚ್ಛಿಸದೆ, ಕಾಡನ್ನು ಸೇರಿ ಗೆಡ್ಡೆ ಗೆಣಸುಗಳನ್ನು ಭುಂಜಿಸಿ, ಭಾರೀ ಬಡತನದಿಂದ ಜೀವಿಸಿ, ತನ್ನ ಇಷ್ಟಾರ್ಥಸಾಕ್ಷಾತ್ಕಾರಗಳನ್ನೂ ಪಡೆಯುತ್ತಾನೆ. ಸೃಷ್ಟಿಯ ಧನಕನಕಗಳ ಸುಖದ ವಿಚಾರಗಳೆಲ್ಲವೂ ಅವನ ಸಮ್ಮುಖದಲ್ಲಿ ತೃಣಸಮಾನ, ಘನ ಘೋರ ಬಡತನವೇ ಆತನ ಪ್ರೀತಿಯ ವಸ್ತು. ಈ ಎಲ್ಲಾ ವಿಚಾರಗಳನ್ನು ಕಥಿಸಿ ಮಥಿಸಿದರೆ ಬಡತನದಲ್ಲಿ ಅಂತರ್ಭೂತವಾದ ಶಕ್ತಿಯ ಜ್ಯೋತಿಯನ್ನು ಕಾಣಬಹುದು.

ಶ್ರೀಯುತ ರಘುಚಂದ್ರ ಬಲ್ಲಾಳರವರು ಅನೇಕ ಸಹಸ್ರಾರು ರೂಪಾಯಿ ವೆಚ್ಚ ಮಾಡಿ ಮಂಗಳೂರಿನ ಬಸ್ತಿಹಿತ್ತಲಲ್ಲಿನ ಶ್ರೀ ಶಾಂತಿನಾಥ ಚೈತ್ಯಾಲಯವನ್ನು ಮಾರ್ಚಿ ತಿಂಗಳಲ್ಲಿ ಜೀರ್ಣೋದ್ಧಾರಗೊಳಿಸಿದರು. ಪಂಚಕಲ್ಯಾಣ ಸಮಾರಂಭದಲ್ಲಿ ಶ್ರವಣಬೆಳ್ಗುಳದ ಮಠಾಧೀಶರೂ ಮೂಡಬಿದ್ರೆಯ ಮಠಾಧೀಶರೂ ಇನ್ನು ಮೊದಲಾದ ಗುರುಗಳವರೂ, ಜೈನ ಸಮಾಜದ ಮುಖಂಡರೂ ಭಾಗವಹಿಸಿದ್ದರು. ಈ ಚೈತ್ಯಾಲಯದಲ್ಲಿ ಪ್ರತಿಷ್ಠಿಸಲ್ಪಟ್ಟ ಮೂರ್ತಿಯು ೨೦೦೦ ವರ್ಷಗಳಿಗಿಂತ ಪ್ರಾಚೀನ



ಕಾಲದ್ದೆಂದು ದೃಢೀಕರಿಸುವ ಕೆತ್ತನೆ ಬರೆಹಗಳ ಆಧಾರವಿದೆ. ಈ ಮೂರ್ತಿಯ ಸಲ್ಲಕ್ಷಣವೆಂದರೆ— ಇದರೆದುರು ದೀಪವನ್ನಿರಿಸಿಟ್ಟರೆ ಇದರ ಉದರದ ಮೇಲ್ಭಾಗದಲ್ಲಿ ಪ್ರಕಾಶಮಾನವಾದ ಒಂದು ಪದ್ಮವು ಕಾಣಬರುತ್ತದೆ. (ಬಸ್ತಿಯ ಭಾವಚಿತ್ರವನ್ನು ಇದರಲ್ಲಿ ಪ್ರಕಟಿಸಬೇಕೆಂದಿದ್ದರೂ ಅದರ 'ಬ್ಲಾಕು' ಈ ಸಂಚಿಕೆಯು ಹೊರಡುವ ಮೊದಲು ದೊರೆಯದಿರುವುದರಿಂದ ಅದನ್ನಿಲ್ಲಿ ಪ್ರಕಟಿಸಲಾಗಲಿಲ್ಲ)

ಆಗ್ರ.

ಲೇಖಕರು:— ಶ್ರೀ. [illegible]



ಹಿಂದೂಸ್ಥಾನದ ಹಲವು ಚರಿತ್ರೆ ಪ್ರಸಿದ್ಧವಾದ ಊರುಗಳಲ್ಲಿ ಆಗ್ರವು ಒಂದಾಗಿದೆ. ಅಲ್ಲಿ ಚರಿತ್ರೆ ಪ್ರಸಿದ್ಧವಾಗಿದ್ದು, ನೋಡಲು ಯೋಗ್ಯವಾದ ಹಲವು ಸ್ಥಳಗಳಿವೆ. ಅವುಗಳಲ್ಲಿ (೧) ತಾಜಾಮಹಲು, (೨) ಇತ್ಮಾದ್ದೋಲ, (೩) ಜುಮ್ಮಾ ಮಸೀದಿ, (೪) ಕೋಟೆ, (೫) ಸಿಕಂದರಾ ಇವು ಮುಖ್ಯವಾದುವುಗಳು.


ತಾಜಾಮಹಲು ಆಗ್ರಾ ಪಟ್ಟಣದಿಂದ ೧–೨ ಮೈಲುಗಳ ದೂರದಲ್ಲಿದ್ದು ಯಮುನಾ ನದಿಯ ಬಲ ದಡದ ಮೇಲಿದೆ. ಅದರ ಹೊರ ಮೈಯಲ್ಲಿ ಸುತ್ತಲೂ ಆವಾರದ ಗೋಡೆಯಿದ್ದು, ಎದುರಿಗೆ ಬಹು ಭವ್ಯವಾದ ಮಹಾದ್ವಾರ (Gate-way) ಇದೆ. ಈ ಮಹಾದ್ವಾರವು ಸುಮಾರು ೪೨ ಅಡಿ ಎತ್ತರವಿದೆ. ಆದುದರಿಂದ ನೋಡಲು ನೋಡುವ ಪ್ರೇಕ್ಷಕರನ್ನು ಈ ದ್ವಾರವೇ ಬೆರಗುಗೊಳಿಸುವುದು. ಇದರ ಎರಡೂ ಬದಿಗಳಲ್ಲಿ ಒಂದರ ಮೇಲೊಂದು ಕಮಾನುಗಳಿಂದ ಕೂಡಿದ ಅಂತಸ್ತುಗಳಿವೆ. ಇದರ ಒಟ್ಟು ಎತ್ತರವು ಸುಮಾರು ೧೦೦ ಅಡಿಗಳಾಗಿರಬಹುದು. ಇದರ ಮೇಲಿನ ಅಂತಸ್ತಿನಲ್ಲಿ ಚರಿತ್ರೆ ಸಂಬಂಧವಾದ ಒಂದು ವಸ್ತುಪ್ರದರ್ಶನ (Museum) ವು ಕೂಡಾ ಇದೆ.

ಆ ಮಹಾದ್ವಾರದ ಒಳಗೆ ಬರುತ್ತಲೆ ತಾಜಾಮಹಲಿನ ಕಟ್ಟಡವು ಕಾಣಬರುವುದು. ಅದರ ವರ್ಣನೆಯನ್ನು ಮಾಡುವರೆ ನಮ್ಮ ಭಾಷೆಯಲ್ಲಿ ಸರಿಯಾದ ಶಬ್ದಗಳೇ ದೊರೆಯಲಾರವು. ಈ ಕಟ್ಟಡವು ಭೂಲೋಕದ ಸಪ್ತ ಆಶ್ಚರ್ಯಗಳಲ್ಲಿ ಒಂದಾಗಿದೆ.

ಮಹಲಿನ ಎದುರಿಗೆ ಸಪೂರವಾಗಿಯೂ ಉದ್ದವಾಗಿಯೂ ಇರುವ ಕೃತಕ ಕೆರೆಗಳಿವೆ. ಇವಕ್ಕೆ ಯಮುನಾ ನದಿಯಿಂದ ನೀರನ್ನು ಹಾಯಿಸುವರು. ಇವುಗಳಲ್ಲಿ ಸಾಲಿಗೆ ಕಾರಂಜಿ (Fountain) ಗಳಿದ್ದು, ಆದಿತ್ಯವಾರದಲ್ಲಿ ಮಾತ್ರ ನೀರನ್ನು ಹಾರಿಸುವುವು. ಈ ಕೆರೆಗಳ ಎರಡೂ ಮಗ್ಗುಲಲ್ಲಿ ತೋಟಗಳಿವೆ.

ಈ ಕೆರೆಗಳ ನಡುವಿನಲ್ಲಿ ಸ್ವಲ್ಪ ಎತ್ತರವಾಗಿರುವ ತಾವರೆ ಕೆರೆ (Lotus Tank)ಯನ್ನು ದಾಟಿ ಮುಂದರಿಸಿದರೆ ಮಹಲು ಕಟ್ಟಲ್ಪಟ್ಟ ಕಟ್ಟೆ (Platform) ಯ ಒಳಗೆ ಬರುವೆವು. ಅದಕ್ಕೆ ಮೇಲೆ ಹತ್ತುವರೆ ಮೆಟ್ಟಲುಗಳು ಎದುರಿಗೆ ಇರದೆ ಬದಿಗಳಲ್ಲಿವೆ. ಅವುಗಳನ್ನು ಹತ್ತಿ ಮೇಲೆ ಹೋದರೆ ಮಹಲಿನ ಭವ್ಯವಾದ ಮಹಾದ್ವಾರದ ಒಳಗೆ ಬರುವೆವು. ಈ ದ್ವಾರದ ಸುತ್ತಲೂ ಕರಿಯ ಸ್ಲೇಟುಕಲ್ಲಿನಿಂದ ಬರೆದಿದ ಕುರಾನಿನ ವಾಕ್ಯಗಳನ್ನು ಕೆತ್ತಿರುವರು. ಈ ಅಕ್ಷರಗಳು ಮೇಲಿಂದ ಕೆಳಗಿನ ವರೆಗೂ ಒಂದೇ ಆಕಾರವಾಗಿ ಕಾಣುತ್ತವೆ. ಬಿಳಿಯ ಅಮೃತ ಶಿಲೆಯ ಕಲ್ಲಿನಿಂದ ಕಟ್ಟಿದ ದ್ವಾರದ ಮೇಲಿರುವ ಈ ಅಕ್ಷರಗಳು ಬಹು ಸ್ಪಷ್ಟವಾಗಿಯೂ ಸುಂದರವಾಗಿಯೂ ಕಾಣುವುವು.

ಈ ಮಹಾದ್ವಾರದ ಒಳಗಿಂದ ಕೋಣೆಗೆ ಹೋಗಲು ೭–೮ ಅಡಿ ಎತ್ತರವಿರುವ ಬಾಗಿಲು ಇದೆ. ಅಲ್ಲಲ್ಲಿ ಕೋಣೆಯೊಳಗೂ ಕುರಾನಿನ ವಾಕ್ಯಗಳನ್ನು ಕೆತ್ತಿರುವರು.



ಇದನ್ನು ದಾಟಿದೊಡನೆ ಜಾಲಿಂದ್ರದ ಕೋಟೆಯಿಂದಾವೃತವಾದ ಶಹಜಾನನ ಮತ್ತು ಮಮತಾಜಳ ಕೃತಕ ಗೋರಿಗಳನ್ನು ಕಾಣಬಹುದು. ಆ ಗೋರಿಗಳ ಮೇಲೆ ಸುಂದರ ಚಿತ್ರಗಳನ್ನು ಕೆತ್ತಿರುವರು. ಆ ಕೋಣೆಯೊಳಗೆ ಒಬ್ಬ ಮನುಷ್ಯನು ಮಾತನಾಡಿದರೆ ನೂರಾರು ಮಂದಿ ಮಾತಾಡಿದಂತೆ ಕೇಳಿಸುತ್ತದೆ. ಅಲ್ಲಿಂದ ಕೆಳಗಿನ ನೆಲಮಾಳಿಗೆಯೊಳಗೆ ಹೋದರೆ ಶಹಜಾನನ ಮತ್ತು ಮಮತಾಜಳ ನಿಜವಾದ ಗೋರಿಗಳನ್ನು ಕಾಣಬಹುದು.

ಮಹಲನ್ನು ಎತ್ತರವಾದ ಕಟ್ಟೆ (Platform) ಯ ಮೇಲೆ ಕಟ್ಟಿರುವುದರಿಂದ ಬಹು ದೂರದ ವರೆಗೆ ಕಾಣಲು ಅವಕಾಶವಿದೆ. ಮಹಲಿನ ಆಕೃತಿಯು ಚೌಕಾಕಾರವಾಗಿದ್ದು, ಅದರ ನಾಲ್ಕು ಮೂಲೆಗಳನ್ನು ಮುರಿದು ಅಷ್ಟಕೋನಾಕಾರ ಮಾಡಿರುವರು. ಅದರ ಉದ್ದ ಮತ್ತು [illegible] ಬರೇ ಚೌಕವಾಗಿರುತ್ತಿದ್ದರೆ ೧೮೦ ಅಡಿ ಉದ್ದ ಮತ್ತು [illegible]ಲವಾಗಿರುತಿತ್ತು. ಅದರ ರಚನೆಯು ನಾಲ್ಕು ಬದಿಗಳಲ್ಲೂ ಒಂದೇ ತೆರನಾಗಿದೆ. ಕಟ್ಟೆಯ ನಾಲ್ಕು ಮೂಲೆಗಳಲ್ಲೂ ನಾಲ್ಕು ಎತ್ತರವಾದ [illegible] ಕಂಭಗಳಿವೆ. ಪ್ರತಿಯೊಂದಕ್ಕೂ ಮೇಲೆ ಹತ್ತಲು ಸುಮಾರು ನೂರೈವತ್ತರ ಮೇಲೆ ಮೆಟ್ಟಲುಗಳಿವೆ. ಮೇಲೆ ಮೂರು ನಾಲ್ಕು ಮಂದಿಗೆ ನಿಲ್ಲುವಷ್ಟು ಸ್ಥಳವಿದೆ. ಪಟ್ಟಣದ ಹಲವು ಭಾಗಗಳು ಇಲ್ಲಿಗೆ ಕಾಣುವುವು. ತೋಟದಿಂದ ಈ ಕಂಭದ ತುದಿಯ ವರೆಗೆ ಎತ್ತರವು ಸುಮಾರು ೧೬೪ ಅಡಿಗಳು

ತಾಜಾ ಮಹಲಿನ ಎತ್ತರವು ತೋಟದಿಂದ ಮುಖ್ಯ ಗುಮಟದ ವರೆಗೆ ಸುಮಾರು ೨೫೦ ಅಡಿಗಳು. ಅದರ ಮುಖ್ಯ ಗುಮಟವು ಬಹು ದೊಡ್ಡದಾಗಿದ್ದು, ಭವ್ಯವಾಗಿದೆ. ಈ ಮಹಲನ್ನು ಶಹಜಾನನೆಂಬ ಅರಸನು ತನ್ನ ಪ್ರೀತಿಯ ರಾಣಿಯ ಅಂತ್ಯದ ಹೇಳಿಕೆಗಳನ್ನು ಸಲಿಸುವುದಕ್ಕಾಗಿ ಕಟ್ಟಿಸಿದನು. ಇದನ್ನು ಕಟ್ಟಲು ೧೬೩೧ನೆ ಇಸವಿಯಲ್ಲಿ ಪ್ರಾರಂಭಿಸಿ ೧೬೪೮ರಲ್ಲಿ ಮುಗಿಸಿದರು. ಇದರ ಕೆಲಸಕ್ಕೆ ಪರ್ಶಿಯಾ, ಅರೇಬಿಯಾ, ಟರ್ಕಿ ಮತ್ತು ಭೂಲೋಕದ ಇತರ ಭಾಗಗಳಿಂದಲೂ ಜನರು ಬಂದಿದ್ದರು. ಆ ಎಲ್ಲಾ ಕಡೆಗಳಿಂದ ಪಚ್ಚೆ, ಕೆಂಪು, [illegible] ರತ್ನಗಳನ್ನೂ ತರಿಸಿದ್ದರು. ದಿನಕ್ಕೆ ೨೦,೦೦೦ ಕೂಲಿಯಂತೆ ಗೇದು ಹದಿನೇಳು ವರ್ಷಗಳಲ್ಲಿ ಕಟ್ಟಿ ಮುಗಿಸಿದರು. ಕಟ್ಟಲು ಆರು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಖರ್ಚಾಗಿರಬಹುದೆಂದು ಅಂದಾಜಾಗಿದೆ. ಎಲ್ಲಿಯೂ ಸರಿಯಾದ ಲೆಕ್ಕವು ದೊರೆಯುವುದಿಲ್ಲ.

ಇತ್ಮಾದ್ದೋಲ— ಇದು ಕೂಡಾ ತಾಜಾಮಹಲಿನಂತೆಯೇ ಒಂದು ಗೋರಿಯಾಗಿದೆ. ಹಿಂದೂದೇಶದ ಚರಿತ್ರೆಯಲ್ಲಿ ನೂರ್ಜಹಾನಳ ವಿಷಯವಾಗಿ ಓದದಿರುವವರು [illegible]. ಅವಳ ಮಾತಾಪಿತೃಗಳ ಗೋರಿಯೇ ಇದಾಗಿದೆ. ಇದಕ್ಕೂ ಎದುರಿನಲ್ಲಿ ಒಂದು ಮಹಾದ್ವಾರದ ಕಟ್ಟಡವಿದೆ. ಈ ಕಟ್ಟಡವನ್ನು ಕೆಂಪು, ಕಪ್ಪು, ಬಿಳಿ ಕಲ್ಲುಗಳಿಂದ ಕಟ್ಟಿರುವರು. ಇದರಲ್ಲಿಯೂ ಸುಂದರ ಚಿತ್ರ[illegible].

ಕೋಟೆ— ಕೋಟೆಯು [illegible] ಕಟ್ಟಿಸಿದನು. [illegible] ಅಚ್ಚಳಿಯದೆ ನಿಂತಿರುವುದನ್ನು [illegible] ಬೇಕಾಗಿದೆ. [illegible] ಕೋಟೆಯು [illegible] ಒಂದೆ [illegible] ಕೋಟೆಯು ಸುಮಾರು ೪೦ ಅಡಿ ಎತ್ತರವಾಗಿಯೂ, ಅದರೊಳಗಿನ ಕೋಟೆಯು ಸುಮಾರು ೭೫ ಅಡಿ ಎತ್ತರವಾಗಿಯೂ ಇದೆ. ಕಂದಕವು ಸುಮಾರು [illegible]

ಆಳವಾಗಿಯೂ ೨೫ ಅಡಿ ಅಗಲವಾಗಿಯೂ ಇದೆ. ಅದರಲ್ಲಿ ಮೊದಲು ಯಮುನಾ ನದಿಯ ನೀರು ಹರಿಯುತ್ತಿತ್ತು. ಆದರೆ ಈಗ ನೀರು ಬರದಂತೆ ಮಾಡಿರುವರು.

ಕೋಟೆಯೊಳಗೆ ಜಹಂಗೀರಿ ಮಹಲೇ ಮೊದಲಾದ ತುಂಬಾ ಕಟ್ಟಡಗಳಿವೆ. ಜಹಂಗೀರಿ ಮಹಲೆಂಬುದು ತುಂಬಾ ಕೆತ್ತನೆ ಕೆಲಸವಿರುವ ಮಹಲು. ಅದರ ಎದುರಿಗೆ ೫ ಅಡಿ ಎತ್ತರವಿದ್ದು, ಒಂದೇ ಕಲ್ಲಿನಿಂದ ಕೊರೆದ ಒಂದು ಮರಿಗೆ ಇದೆ. ಶೀಸಮಹಲು ಎಂಬುದು (Palace of Mirrors) ಇನ್ನೊಂದು ಮುಖ್ಯ ಕಟ್ಟಡವು. ಇದರಲ್ಲಿ ತುಂಬಾ ಸಣ್ಣ ಸಣ್ಣ ಕನ್ನಡಿಗಳಿಂದಲೇ ಕೆತ್ತಿ ಬಿಡಿಸಿದ ಚಿತ್ರಿಕೆಯಿದ್ದು, ಒಬ್ಬನು ಮಹಲಿನೊಳಗೆ ಪ್ರವೇಶಿಸಿದರೆ ಸಾವಿರಾರು ಮಂದಿ ಒಳಗಿದ್ದಂತೆ ಕಾಣುವುದು. ಅದರ ನಡುವಿನಲ್ಲಿ ಸ್ನಾನ ಮಾಡುವ ಕೃತಕ ಕೆರೆ ಇದೆ. ಸಮನ್ ಬುರುಜಿಯೆಂಬುದು ಕೋಟೆಯೊಳಗಿರುವ ಇನ್ನೊಂದು ಸುಂದರ ಕಟ್ಟಡವು. ಈ ಕಟ್ಟಡವನ್ನು ಶಹಜಾನನು ತನ್ನ ಪ್ರೀತಿಯ ರಾಣಿಯನ್ನು ನೋಡುವುದಕ್ಕಾಗಿ ಕಟ್ಟಿಸಿದನೆಂದು ತೋರುವುದು. ಇದರಲ್ಲಿ ತುಂಬಾ ಚಿತ್ರಿಕೆಗಳಿದ್ದು ಹಲವು ಬೆಲೆಯುಳ್ಳ ಕಲ್ಲುಗಳಿಂದ ಬೇಲುಗಳನ್ನೂ ಬಿಡಿಸಿರುವರು. ಇಲ್ಲಿಗೆ ತಾಜಾಮಹಲು ಅತೀ ರಮಣೀಯವಾಗಿ ತೋರುವುದು.

ಆಗ್ರಾದಲ್ಲಿರುವ ಮುಖ್ಯ ಕಟ್ಟಡಗಳಲ್ಲಿ ತಾಜಾಮಹಲನ್ನು ಬಿಟ್ಟರೆ ಎರಡನೆಯದಾಗಿ ಸಿಕಂದರ ಕಟ್ಟಡವು ನೋಡತಕ್ಕುದ್ದಿದೆ. ಇದಕ್ಕೆ ಅಕ್ಬರನ ಮಾಸುಲೀಂ (Mausoleum of Akbar) ಎನ್ನುವರು. ಇದು ಆಗ್ರಾ ಪಟ್ಟಣದಿಂದ ಸುಮಾರು ೫॥ ಮೈಲುಗಳ ದೂರದಲ್ಲಿದೆ. ಇದನ್ನು ಅಕ್ಬರನು ೧೬೧೩ರಲ್ಲಿ ೧೫೦೦೦೦೦ ರೂಪಾಯಿಗಳ ಖರ್ಚಿನಿಂದ ಕಟ್ಟಿಸಿದನು.

ಹಿಂದೂಸ್ಥಾನದಲ್ಲಿರುವ ಮಹಾದ್ವಾರಗಳಲ್ಲಿ ಅತೀ ದೊಡ್ಡದಾದ ದ್ವಾರವು ಬುಲಾಂದ ದಾರ್ವಾಜ (Buland Darwaza) ಎಂಬುದು. ಇದು ಫೇತಾಪುರ ಸಿಕ್ರಿ ಎಂಬಲ್ಲಿದೆ. ಉಳಿದವುಗಳಲ್ಲಿ ಬೀರಬಲನ ಅರಮನೆ, ಪಂಚ ಮಹಲು, ಜೋದಾಬಾಯಿ ಅರಮನೆ ಮೊದಲಾದುವು ನೋಡಬೇಕಾದ ಸ್ಥಳಗಳು.



ರೆವೆರೆಂಡ್ ಫಾದರ್. ಐ. ಎಚ್. ಲೋಬೊ ಇವರು
ಮೈಸೂರಿನ "ತಿರುಹೃದಯದ ದೂತ"ನ ಸಂಪಾದಕರು.



ಆಯುರ್ವೇದಭೂಷಣ ಎಮ್. ಕೆ. ವೈದ್ಯರು.

Harijans and the Great Fast.

By:-Swami Dharmathirthan, B. A., L.L. B.

The Harijan problem is not primarily a religious question. It is even more economic and educational than religious. Even if all the temples are thrown open to the Harijans, their appalling ignorance and poverty will continue to be as great an obstacle to national progress as they are to-day; and sustained work will have to be carried on for many years if any substantial progress is to be made. The popular feeling roused by the action of Mahatma Gandhi ought not, therefore be frittered away in mere sensational displays. Organisation and funds can achieve much. Education, of course, must receive the first consideration. We are not lacking in schools. We want Homes for Harijans even in villages, where the children of the school-going age will be lodged and fed free, and will grow up in an atmosphere of culture, love and liberty, the nearest public school being utilised for their education as in the case of other children. I am against special schools, which perpetuate the sense of exclusion both among the Harijans and the caste-Hindus. All available resources must, therefore be first used to establish a net-work of such Homes all over the country--Each Home must have a building and a permanent endowment to maintain a minimum number of scholars.

Temples come into prominence because they are essentially a caste institution. The most important caste institution of the Hindus and the question of social status of the Harijans is inextricably bound up with the caste system. Harijans are a bye-product of caste and they will exist as long as caste remains. By caste, I mean simply the social differences based on birth observed among the Hindus today without using any verbal jugglery or philosophical camaflouge. Give the Harijans social equality and you abolish caste. Keep caste, and you can never solve the Harijan problem. That is the secret and we must face it. Opening of the temples is just a small cleavage in the Chinese-wall of caste, through which the flood may rush in to engulf for ever the diabolical caste organisations of the Kali Yuga. Temple entry does not mean any immediate advantage to the Harijans. In Malabar among those who have already got admission into the temples there is as much ill-feeling between caste and caste as between caste-Hindus and Harijans. This must be so in other parts also. The blood of every non-Brahmin bubbles with indignation at the thought of the injustice and indignity to which he is subjected in the name of caste. He is only waiting for an opportunity to strike the crushing blow. Temple entry or no temple entry, the Harijan is not going to be taken in by any political considerations. He is an enternal enemy of the caste-Hindu. To put it otherwise, caste is irreconcilable with all idea of solidarity among the Hindus. White-wash the differences as much as you like, the volcano of suspicion and animosity will burst into devastating flames at every opportunity and involve the Hindu society in suicidal warfare within itself. Opening of the temples to Harijans is an act of self-purification of the caste-Hindus, a bonafides of their offer to give up caste and caste-mentality. In that light alone has it any importance on a national scale.

Temples can no doubt serve a great cultural purpose if properly used. The late Sree Narayana Guruswami, the great Prophet-Saint of Malabar, used the temple as the centre of his manifold reforms which raised within a single generation nearly twentyfive lakhs of people from the condition of the depressed to a higher state of social independence than many of the caste-Hindus themselves. This is an achievement which has no parallel in recent centuries and is of greater universal significance than most other world-movements of the present age. Every one interested in the Harijans or the caste-problem will find never-ending inspiration in the life and works of the late Guruswami. The wonder of it all is that his work is going on with increasing momentum though the great leader is gone and will not weaken until the goal is attained. It is not any sensational result achieved by sensational means, but the gradual evolving of a mighty spiritual power sent out by the guardians of

humanity. It is curious, that temple entry did not form an essential part of the programme of the late Guruswami's activities though he anticipated it would assume national importance even when the Congress refused to treat it as an All-India Problem at the time of the Vaikom Satyagraha agitation. (An account of the Guruswami's life and work will be found in the new book of the present writer. "A Prophet of Peace" published by the City Press, Trivandrum. Price Rupee 1.)

Mahatma Gandhi's fast can be fully understood only when the Harijan problem is looked at first and foremost as a caste-question. When the Mahatma started his great national work for India along political lines, he did not realise that the greatest enemy of Indian Swaraj was the ancient "culture" of the Hindu. Hindu culture is Caste-culture and not the wonderful philosophies and Sastras which today might, be as well German or Japanese as Indian. Even the Hindu-Muslim dispute might be solved by agreement, but the caste question of the Hindu requires revolutionary methods. The sacrifice of his life is such a revolutionary method.

The political agitations of nearly half a century have been wasted so far as the Hindu society is concerned. True Swaraj is as far away as it was before the Mahatma took up the fight. His own followers and even responsible workers and lieutenants have been found sadly wanting at every important stage. Even in the matter of admitting the Harijan into temples, which is but a first and elementary step to qualify ourselves for Swaraj, the Hindu community has been found to be deplorably narrow-minded and selfish. It is impossible to make any substantial headway along healthy lines in the near future. Swaraj is impossible. Even if possible by revolutionary methods, it would be a crime against humanity and true freedom will not be attained until the mentality of the Hindu is revolutionised. A life, be it that of the greatest Man of the world, is nothing in this laborious task. Many such lives have to be sacrificed in order to attain the goal. Not mere individual lives. Mahatma Gandhi means India's Freedom. Sacrificing the Mahatma means sacrificing Indian Swaraj. Let us recognise this terrible truth. Give up all idea of political Swaraj. Beg the Englishman to be a true friend of the Indian and help this vast country to save itself from its own iniquities, to abolish caste, to give education to the masses, to purify the mentality of the classes. If it were a lesser man than the Mahatma, the fast would be nothing but a veiled attempt at suicide made in despair. But the Mahatma is too great to despair. His every breath is hope and sacrifice. In sacrificing himself he is expressing his highest hope. Lesser means have failed. Here is the utmost he can give us. Were it not for considerations of human frailty which cannot understand his great purpose, Mahatma Gandhi would have undertaken not a fast of 21 days, but a fast unto death, because even such a sacrifice would not be sufficient to cleanse us of our sins.



ಶ್ರೀಮತಿ ಆರ್. ಕಲ್ಯಾಣಮ್ಮ, ಸಂಪಾದಕಿ:—"ಸರಸ್ವತಿ" ಬೆಂಗಳೂರು.

ನಮ್ಮ ಏಜಂಟರರಿಗೆ—

ಮುಂಬಾಯಿ, ಮದರಾಸು, ರಾಯಚೂರು, ಹೈದರಾಬಾದ್, ಮೈಸೂರು, ಬೆಂಗಳೂರು, ಚೆನ್ನಪಟ್ಟಣ, ಧಾರವಾಡ, ಬೆಳಗಾಂವಿ, ಕೊಡಗು, ವೀರರಾಜೇಂದ್ರ ಪೇಟೆ, ಶಿವಮೊಗ್ಗ, ಉಡುಪಿ, ಕಾಸರಗೋಡು, ಪುತ್ತೂರು, ಕಾರ್ಕಳ, ಬೆಳ್ತಂಗಡಿ, ಬಂಟ್ವಾಳ, ಮೊದಲಾದ ಕಡೆಗಳ ನಮ್ಮ ಎಲ್ಲಾ ಏಜಂಟರುಗಳು ತಮ್ಮ ಭವ್ರತೆ ಹಣವನ್ನು ಈ ತಿಂಗಳ ೩ನೇ ತಾರೀಕಿನೊಳಗೆ ನಮಗೆ ರವಾನಿಸಿ ರಶೀದಿ ಪಡೆಯ ತಕ್ಕುದು. ಅದನ್ನು ರವಾನಿಸಿದವರಿಗೆ ಮುಂದಿನ ಸಂಚಿಕೆಗಳು ಕಳುಹಲ್ಪಡುವುವು.

ಮೇನೆಜರ್, ಬ. ಬ.



...ದೀಯ ನರ್ತನವನ್ನು ಅಮೇರಿಕಾ, ಇಂಗ್ಲಾಂಡುಗಳಲ್ಲಿ ಪ್ರಚುರಿಸಿ, ಭಾರತಮಾತೆಯ ಸೇವೆ ಮಾಡಿದ ಅಗ್ರ ನರ್ತಕಿ ಶ್ರೀಮತಿ ರಾಗಿಣಿಯವರ ನರ್ತನದ ಮನಮುಗ್ಧಕರ ಶೈಲಿ.

(ಮಹಿಳಾ ಸ್ವದೇಶಾಭಿಮಾನಿಯ ಕೃಪೆಯಿಂದ.)

ಅಮ್ಮರ ಗೋಳು

ಅಯ್ಯೋ ನುಡಿ ನನ್ನ ನುಡಿಯೆ! ಜೀವದಾ ನುಡಿಯು
ಇಲ್ಲಿಂದಲು ನೂಕಿದರೆ ದಾಟಿಸಿ ಗಡಿಯು!
ಪರದೇಶಿ ಆಯಿತೇ ನನ ಮುದ್ದು ನುಡಿಯು!
ಇನ್ನಾವ ನಾಡಳಿಲ್ಲವ್ವ ಅದಕೆಡೆಯು!
ನಿನ್ನಬಲ ನಿನ್ನಾಸರೆನುಗೆ ಎಷ್ಟಿತ್ತು
ನಿನ್ನಂಜಿಕೆ ಉಳಿದ ಜನಕೆ ಎಷ್ಟಿತ್ತು
ಭಾವಿಕಟ್ಟೆಯು ಕೂಡ ಮುಟ್ಟಗೊಡುತಿದ್ದಿಲ್ಲ
ನಾವು ಕೊಡ ಜಗ್ಗುವವರೆಗೆ ಇದು ಸುಳ್ಳಲ್ಲ!
ದಾರಿಯೊಳು 'ಮುಟ್ಟಿಮುಟ್ಟಿ'ಯೆಂದು ಹುಸಿ ಗುಂಡು
ಹಾರಿಸುತ ನಾನು ನೂರು ನೂರುದ್ದ ಚಂಡು
ಪುಟಿದವೊಲು ಜಿಗಿಜಿಗಿದು ಹಾರುತ್ತಲಿದ್ದೆ
'ರಂಢೆಗಂಡ' ಎಂದೆರಡು ಬೈಕೊಳ್ಳುತಿದ್ದೆ!
ಈಗೇನು ಎಲ್ಲರೂ ಭಾಂವಿಯೊಳು ನುಗ್ಗಿ
ತುಂಬಲಿಕೆ ಬರುವರೆಮ್ಮ ಮೈ ಕೈ ತಾಗಿ
ಹಾಯಲಿಕೆ ನೂರು ದಾರಿ ಸಹ ಬಿಡುದಿಲ್ಲ
ಬಯ್ದರೆ ಅಯ್ಯೋ!— ಹಿಂದಿನ ದಿನವಿಲ್ಲ!
ನೆನೆ ನೆನೆಸಿ ಬಾಳುವೆನು ದುಃಖದೊಳು ಬಾಳು
ಪಾವು ಅನ್ನಕೆ ನಿಂತಿದೆ ನಮ್ಮ ಕೂಳು!
ಇಷ್ಟೆ ಉಂಡು ಬಾಳುವೆವೆಷ್ಟು ದಿನ ನಾವು
ಅಮ್ಮಾ!— ಬರುವದೆ ನಿಜ! ದಿನ ತುಂಬೆ ಸಾವು!!

— ಕನ್ನಡ ಕಂದ.
ಪ್ರೇಮಾಯತನ— ತುಂಗಭದ್ರಾ.

ದೇವನೆಲ್ಲಿಹನು?

ಸಿರಿಪತಿಗಳ ಮದ ಹೃದಯದ ಮರೆಯಲಿ,
ಮುರುಗಿನ ಗುಡಿಗೋಪುರಗಳ ಎಡೆಯಲಿ,
ಮರುಕವು ಇಲ್ಲದ ಮರಜನರೆದುರಿಗೆ,
ತರತರ ವ್ಯಸನದಿ ಕರಕರೆ ಬಡುತಿಹ
ಎರಕದ ಹೃದಯದ ನರಕುರಿಗಳ ಬಳಿ,
ಸರಸದ ಗೆಲವಿನ ಮದಿಸಿದ ನಗುವಿನ
ಭರದಲಿ ಸುರಿಯುವ ಕಂಬನಿ ಸರಸರ
ಹರಿಯುವ ತೊರೆ ಬಳಿ, ಸುಖಭರಿತೆಡೆಯಲಿ,
ಕರೆಯದ ಸ್ಮರಿಸದ ಜಡಜನರೊಳಗಡೆ,
ಸೇರನವ;
ಅವರನು ತೊರೆದಿಹನು.

ಬಡವರ ಬಲು ಮಿದು ಹೃದಯದ ಬಳಿಯಲಿ,
ಬಡವರು ವಾಸಿಪ ಮುರಿದಿಹ ಗುಡಿಯಲಿ,
ಹೃದಯದಿ ಪ್ರೇಮವು ಹುದುಗಿಹ ತಾಣದಿ,
ಜಡತನವಿಲ್ಲದ ವ್ಯಸನಗಳಿಲ್ಲದ
ಕಡುತರ ಚಿಂತೆಯ ಗೊಡವೆಯೆ ಇಲ್ಲದ
ಇಡಿದಿಹ ಮಮತೆಯ ಒಲವಿನ ನಲುಮೆಯ
ದುಡುಕುತ ಬರುತಿಹ ತಸಿದಹ ಕಣ್ಣನಿ
ಮಿಡುಕುತ ಹರಿಯುವ ಹೊನಲಿನ ಬಳಿಯಲಿ,
ಬಿಡದೆಯೆ ಕರೆಯುವ ಸ್ಮರಿಸುವ ಜನರಲಿ,
ಕಾಣಿಪನು;
ಅವರನು ಬಯಸುವನು.

ಬಿ. ಪದ್ಮನಾಭಾಚಾರ್ಯ, ಮಂಗಳೂರು.

ಹೊಲೆಯನೆಂದು ಊರ ಹೊರಗೆ ದೂಡಿಬಿಟ್ಟೆಯಲ್ಲ

೧

ಹೊಲೆಯನೆಂದು ಊರ ಹೊರಗೆ
ದೂಡಿ ಬಿಟ್ಟೆಯಲ್ಲ; ಬಂಧು!
ನಿನ್ನ ಹೃದಯ–ಕುಹರದೀಗ ಹೊಲೆಯ ಲೇಶವಿಲ್ಲವೆ?
ಹಾರ್ವ-ಹೊಲೆಯರೆಲ್ಲರೆಮ್ಮ
ಭರತಮಾತೆಯಿವಳ ತೊಡೆಯ
ಮೇಲೆ ನಲಿದು ಹಾಲ ಕುಡಿವ ಭ್ರಾತೃವರ್ಗವಲ್ಲವೆ?

೨

ಎಂದೊ ಒಂದು ಕಾಲದಲ್ಲಿ
ಗೈದದೊಂದು ಪಾಪವಿಸಿತು
ದಿನವು ಕಳೆದು ಹೋದರಿನ್ನು ತಾನು ಸವೆಯಲಾರದೆ?
ನಿನ್ನ ಎದೆಯೊಳಿಣಿಕಿ ನೋಡು;
ಅದರೊಳಿನಿತು ಕಲುಷವಿಲ್ಲ!
ನಾನು ಹೊಲೆಯನೆಂದು ನೀನು ಹೊರಗೆ ನಡೆಯಬಾರದೆ?

೩

ಹೊಲೆಯನೆಂದು, ಪತಿತನೆಂದು
ಒದೆದು ಹೊರಗೆ ದಬ್ಬುವಾಗ
ಪತಿತನೆದೆಯ ದೇವ ಒದೆಯ ಕೂಡ ತಿಂಬುದಿಲ್ಲವೆ?
ಹೊಲೆಯನೆಂದು ಮುಟ್ಟ ಹೇಸಿ
ನೋಯೆ ಬಯ್ದು ಓಡಿಪಾಗ,
ಪತಿತನೆದೆಯ ದೇವ ಮನದಿ ನೊಂದೆ ನೋವನಲ್ಲವೆ?

೪

ಹೊಲೆಯನೊಡಲ ದೇವ ನಿನ್ನ
ಒಡಲೊಳಿಲ್ಲವೇನು? ಅವನು
ನೊಂದು ತನ್ನ ನೋವ ನಿನ್ನ ಮನಕೆ ಪ್ರಕಟಿಸಿಲ್ಲವೆ?
ನಿನ್ನ ಸೊಕ್ಕಿನುಕ್ಕಿನಲ್ಲಿ—
ನಿನ್ನ ಕೊಬ್ಬಿನುಬ್ಬಿನಲ್ಲಿ—
ಅವನು ಪ್ರಕಟಿಸಿದ್ದ ನೋವ ತಿಳಿದುಕೊಳ್ಳಲಿಲ್ಲವೆ?

೫

ಆವ ಬಲದ ಕೊಬ್ಬಿನಿಂದ,
ಆವ ಚಲದ ಮಬ್ಬಿನಿಂದ
ದೀನ ಜನರ ನೋಯೆ ನುಡಿದು ಮಾನ ಹಾನಿ ಮಾಡಿದೆ?
ಅದುವೆ ಬಲವು, ಅದುವೆ ಚಲವು,
ನಿನ್ನ ಬಿಟ್ಟು ತೊಲಗಿ ಹೋಗಿ,
ಪರರ ಕೈಯ ಸೇರಿ ನಿನ್ನ ಮಾನ ಹಾನಿ ಮಾಡಿದೆ!

೬

ಎಲ್ಲಿ ನಿನ್ನ ಭೇದ ಭಾವ?—
ಕ್ಷಾಮ ಬಂದು ಕಾಡುವಾಗ,
ಹೊಟ್ಟೆಯಲ್ಲಿ ಹಸಿವು ಮಸಗಿ ಕನಲುತಿರುವ ಸಮಯದಿ,
ಉಚ್ಚ—ನೀಚ— ಹಾರ್ವ—ಹೊಲೆಯ—
ಎಲ್ಲರೊಂದೆ ಪಾತ್ರದಿಂದ
ಅನ್ನವನ್ನು ಪಾಲು ಮಾಡಿ ತಿಂಬದೊಂದು ದಶೆಯಲಿ!

೭

ಎಲ್ಲಿ ನಿನ್ನ ಭೇದ ಭಾವ?—
ಕಣ್ಣನೆತ್ತಿ ನೋಡು! ಮುಂದೆ
ಮೃತ್ಯುದೂತ ಒಂದು ಕದವ ತಟ್ಟುತಿರುವ; ಎಲ್ಲರೂ,
ಅವನ ಕೈಯ ಮುಟ್ಟದೊದನೆ
ಉಚ್ಚ– ನೀಚ– ಹಾರ್ವ—ಹೊಲೆಯ—
ಚಿತೆಯ ಸಾರ ಹೀನ ಭಸ್ಮದಲಿ ಸಮಾನರಪ್ಪರು!

೮

ಎಲ್ಲಿ ವರೆಗು ಹಾರ್ವನೆಂಬ
ಗರ್ವ ನಿನ್ನೊಳಿಂದ ತೊಲಗ—
ದೆಲ್ಲಿವರೆಗೆ ಹೊಲೆಯನೆಂಬ ತಿರಸ್ಕಾರ ತೊಲಗದು
ಎಲ್ಲಿವರೆಗು ಜನತೆಯಾ ಜ—
ನಾರ್ದನಂಗೆ ನಮಿಸೆ ನೀನು,
ಅಲ್ಲಿ ವರೆಗು ಪಾರತಂತ್ರ್ಯ ಶೃಂಖಲೆಯೂ ತಪ್ಪದು!

ವೆಂಕಟರಮಣಾಚಾರ್ಯ, (ಮಿತ್ರಮಂಡಲಿ, ಉಡುಪಿ).



'ಬಡವರ ಬಂಧು' ಮುನಿಗಳ ಉಪವಾಸ

ಮಹಾತ್ಮಾ ಗಾಂಧಿಯವರು ಹರಿಜನ ಸೇವಾ ಸಂಬಂಧವಾಗಿ ಮೇ ತಾ. ೮ರಿಂದ ೨೯ನೇ ಮಧ್ಯಾಹ್ನ ೧೨—೩೦ರ ತನಕ ಕಟುಗ್ರ ಉಪವಾಸ ದೀಕ್ಷೆಯನ್ನನುಭವಿಸಿ ತನ್ನ ಅರುವತ್ತನಾಲ್ಕು ವರ್ಷ ಮುದಿತನದಲ್ಲೂ ಒಂದು ಅದ್ಭುತ ಸಾಹಸವನ್ನು ಪ್ರದರ್ಶಿಸಿ, ಜಗತ್ತಿನ ಜನರ ಪ್ರೇಮಕ್ಕೆ ಮತ್ತಷ್ಟು ಪಾತ್ರರಾದರು. ಒಳಗಿನ ಇಂಗ್ಲಿಷ್ ಲೇಖನದಲ್ಲಿ ಸ್ವಾಮಿ ಧರ್ಮತೀರ್ಥನ್, ಬಿ. ಎ. ಎಲ್. ಎಲ್. ಬಿ ಯವರು ಹೇಳುವಂತೆ ಹಿಂದೂದೇಶೋದ್ಧಾರವಾಗಬೇಕಾದರೆ ಮಹಾತ್ಮಾಜೀಯವರಂತಹ ಸಾವಿರಾರು ಜೀವಿಗಳು ಯಜ್ಞವೇದಿಕೆಯಲ್ಲಿ ಬಲಿಯಾಗಿ ಅರ್ಪಿತವಾಗಬೇಕಾದರೂ, ಮಹಾತ್ಮರ ಈ ಉಪವಾಸದಿಂದಾಗಿ ಅವರಲ್ಲಿನ ನಿಸ್ವಾರ್ಥತೆ ಎಷ್ಟು, ಅವರ ಆತ್ಮತೇಜಸ್ಸು ಎಷ್ಟು ಎಂಬುದು ಪ್ರಪಂಚಕ್ಕೆ ತಿಳಿಯಿತು. ಬಡವರಿಗಾಗಿ ಯಜ್ಞಪೀಠವನ್ನೇರಿ. ಅನುಭವಿಸಿ. ಯಶಸ್ವೀರಿಗಳಾಗಿ ಬದುಕಿದ ಮಹಾಮುನಿಗಳ ಆಯುರಾರೋಗ್ಯಕ್ಕಾಗಿ ಜಗತ್ತಿನ ಬಡವರ ಪ್ರಾರ್ಥನೆಯೊಂದಿರಲಿ! ಅನಾಥೋ ದೇವ ರಕ್ಷಿತಃ.

ಕೊಂಗ್ರೆಸ್ ರಥವು ಬಿತ್ತೇ?


ಬ್ರಿಟಿಷ್ ಸರಕಾರದ ಬೆಂಬಲವಿರುವ ಇಂಡಿಯಾ ಸರಕಾರವು ಕೊಂಗ್ರೆಸ್ ರಥದ ಓಟವನ್ನು ಲಾಥಿಯ ಪೆಟ್ಟಿನಿಂದ ನಿಲ್ಲಿಸಿತೆಂದು ಕೆಲವರ ವಾದ. ಕೊಂಗ್ರೆಸ್ ಸಾಯಲಿಲ್ಲ—ಓರ್ಡಿನೆನ್ಸ್‌ಗಳು ಇನ್ನೂ ಜೀವಂತವಿರುವುದೊಂದು, ಕೊಂಗ್ರೆಸ್ಸಿನ ಜಯದ ಕುರುಹು ಎಂದೂ ಇನ್ನು ಕೆಲವರ ವಾದ. ಅಂತೂ ಇಂತೂ, ಈ ಹೋರಾಟಗಳ ಮಧ್ಯೆ ಸಿಲುಕಿ ಪುಡಿಪುಡಿಯಾದ ಬಡವರ ಪಾಡೇ ಪಾಡು! ಸ್ವರಾಜ್ಯ ಇದ್ದರೇನು? ಇಲ್ಲದಿದ್ದರೇನು? ಸರಕಾರವು ಆಳಿದರೇನು? ಆಳದಿದ್ದರೇನು?—ಬಡವರ ಕಷ್ಟವು ರಕ್ಕಸನ ಶಿಶುವಿನಂತೆ ದಿನೇ ದಿನೇ ಬೆಳೆಯುತ್ತಿದೆ. ಸ್ವಾರ್ಥದ [illegible] ಬಡವರ ಅರ್ಥವೇ ಸೂರೆಯಾಗುತ್ತಿದೆ. ಎಷ್ಟರ ತನಕ ಬಡತನದ [illegible] ಶಮನಾರ್ಥವಾಗಿ ಆಳುವವರ, ಆಳಲ್ಪಡುತ್ತಿರುವ ಮುಖಂಡರ ಯತ್ನವಿಲ್ಲವೋ ಅಂದಿನ ತನಕ, ಆ ಪೇಳಿಯ ಪರಿಯಂತ ಸಮಸ್ತ [illegible]. ಶಾಂತಿ ಇಲ್ಲವೆಂಬುದು ನಿಶ್ಚಯ ಮಾತು. ಕೊಂಗ್ರೆಸ್ ರಥವು ಬೀಳಲಿಲ್ಲ. ಅದು ಮುಂದಕ್ಕೂ ಉಳಿದು ಬಡವರುದ್ಧಾರದ ಬಗ್ಗೆ [illegible] ಚಾಚಲಿ!

ಲಂಡನ್‌ನಲ್ಲಿ ಬಿಸಿಲುಕುದುರೆ

ಕೊಂಗ್ರೆಸ್ [illegible] ಪರಿಷತ್ತುಗಳಾಗಿ ಬ್ರಿಟಿಷ ಸರಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಯಿತು. ಅದಲ್ಲದೆ. ನಾಲ್ಕನೇ ಜೊಯಿಂಟ್ ಸಿಲೆಕ್ಟ್ ಕಮಿಟಿಯು ಜರಗೋಣದಿಂದಲೂ ಈಗ ಲಂಡನ್‌ನಲ್ಲಿ [illegible] ಕಲಾಪಗಳನ್ನು ಪರಿಶೀಲಿಸುವಾಗ ಹಿಂದೀಯ ಪ್ರತಿನಿಧಿಗಳು ಬಿಸಿಲು ಕುದುರೆಯನ್ನು ಓಡಿಸಲು [illegible] ಭಾಸವಾಗುತ್ತಿದೆ. [illegible] ಸಪ್ರೂ. ಜಯಕರ. ಪುರುಷೋತ್ತಮದಾಸ [illegible] ರಾಷ್ಟ್ರ [illegible] ಹಿಂದೀಯ ಕೌನ್ಸಿಲು [illegible] ಗಳಿಗಾಗಿ ಸರಕಾರದ [illegible]. ಹಿಂದೀಯ [illegible] ಅಧಿಕಾರಿಗಳು ಲಂಚ ಪಡೆಯುತ್ತಿರುವರೆಂದೂ ಸರ್ ಮೈಕಲ ಓಡ್ವಾಯರರು ಆರೋಪಿಸಿದ ಅಪಮಾನಕರ ನುಡಿಗಳನ್ನು ಮಾತ್ರ ಈ ಹಿಂದೀಯ ಪ್ರತಿನಿಧಿಗಳೆಂಬವರು ಕೇಳುವ ದುರ್ದಶೆಯೊದಗಿತು! ಹಳ್ಳಿ ದೇವರ ತಲೆ ಹೊಡೆದು ದಿಲ್ಲಿ ದೇವರು [illegible]!

ಪ್ರಪಂಚದ ಬಡತನ

ಬಡತನದ [illegible] ಅಮೇರಿಕದಲ್ಲಿ ಈ [illegible] ಜಾಯ [illegible] ಇಂಗ್ಲೆಂಡ್, [illegible] ಐರ್ಲೆಂಡ್‌ಗಳು [illegible] ರಾಜಕೀಯ. [illegible] ಉಪ್ಪು ತಿಂದವನು ನೀರು ಕುಡಿಯುವುದು ಸ್ವಾಭಾವಿಕ. ಬಡವರನ್ನು ಪಣೆಸಿ ರಾಜ್ಯ [illegible]



'ಸ್ವಯಂವಾಣಿ'ಯೆಂದರೆ, "ನಮ್ಮ ಮಾತು." ನಮ್ಮ ಮಾತಿನಲ್ಲಿ ಏನನ್ನೆಲ್ಲ ಹೇಳಬೇಕು? ನಮ್ಮ ಕುರಿತು ಹೇಳುವುದಾದರೆ ಹೆಚ್ಚಿಗಿರುತ್ತದೆ. ಆದರೆ ಅವೆಲ್ಲವನ್ನು ಹೇಳುತ್ತಾ ಹೋದರೆ. ಒಂದು ದೊಡ್ಡ ಪುರಾಣವೇ ಆದೀತು. ಆದರೂ ಈ ಪುಟದಲ್ಲಿ, ಸಂಕ್ಷಿಪ್ತವಾಗಿ, ನಮ್ಮ ಪತ್ರಿಕೆಯ ಚಲನವಲನಗಳ ಕುರಿತು ಹೇಳುವೆವು.

ಪತ್ರಿಕೆಯು ತಡವಾದುದೇಕೆ? ಇದಕ್ಕೆ ಬಲವಾದ ಕಾರಣಗಳಿವೆ. ಆದರೆ ನಮ್ಮ ಕಾರಣಗಳು ತಡವಾದುದಕ್ಕೆ ಕ್ಷಮೆಗಳಲ್ಲ. ಅದು ನಿಜ ನಾವು ಈ ಮೊದಲೇ ಹೇಳಿದಂತೆ, ಒಂದು "ವಿಶೇಷ ಸಂಚಿಕೆ"ಯನ್ನು ಹೊರಡಿಸಬೇಕೆಂಬಾಶೆ ಯಲ್ಲಿದ್ದೆವು. ಅದಕ್ಕಾಗಿ ಮೇ ತಿಂಗಳ ಸಂಚಿಕೆಯನ್ನು ರದ್ದುಗೊಳಿಸಿ ಜೂನ್ ತಿಂಗಳಲ್ಲಿ ಅದನ್ನು ಹೊರಡಿಸುವೆವೆಂದಿದ್ದೆವು. ಹಾಗೆ ಹೇಳುವಾಗ, ನಾವು ಇಂತಹ ಅನಿರೀಕ್ಷಿತ ವಿಳಂಬವಾದೀತೆಂದು ಎಂದೂ ಭಾವಿಸಿರಲಿಲ್ಲ. ನಾವು ನೆನಸುದೊಂದು— ದೈವವು ಬಗೆದುದು ಇನ್ನೊಂದೆಂಬಂತಾಯಿತು! ಮೇ ತಿಂಗಳ ಆದಿಯಲ್ಲೇ ನಾವು ಆಗತ್ಯ ಬೇಕುವ ಲೇಖನ ಜಾಹೀರಾತುಗಳನ್ನು ಸಂಪಾದಿಸಿ ಮುದ್ರಕರಿಗೊಪ್ಪಿಸಿದೆವು. ಕೆಲಸವು ಎಂದು ಪ್ರಾರಂಭವಾದೀತೋ ಎಂಬ ನಿರೀಕ್ಷಣೆಯಲ್ಲಿದ್ದೆವು. ಅಷ್ಟರಲ್ಲಿ, ಮುದ್ರಣಾಲಯದ ಆಡಳಿತದಲ್ಲಿ ಸ್ವಲ್ಪ ಬದಲಾವಣೆಯಾಗುವ ಅಗತ್ಯವೊದಗಿತು. ಇದರ ಸಂಪಾದಕರು ಅಲ್ಲೇ ಇರುವವರಾದರೂ, ಅವರ ಶಕ್ತಿಯನ್ನು ಮೀರಿದ ವಿಳಂಬವು ಬಂದೊದಗುವಂತೆಯೇ ಆಯಿತು! ಕೊನೆಗೆ, ಸಮಯವು ದಾಟಿದ ನಂತರ ಈ ಸಂಚಿಕೆಯ ಮುದ್ರಣ ಕಾರ್ಯಕ್ಕಾರಂಭವಾಯಿತು. ಹಾಗೂ, ಜುಲಾಯಿ ತಿಂಗಳಲ್ಲಿ ಪುಸ್ತಕವು ದೊರೆಯಿತು. ನೂರು ಪುಟಗಳ ಸಂಚಿಕೆಯನ್ನು ವಾಚಕರಿ ಗರ್ಪಿಸಬೇಕೆಂದಿದ್ದರೂ, ಇದು ಶೀಘ್ರವಾಗಿ ಹೊರಬರಬೇಕೆಂದು ಅವಸರಿಸಿ, ಅನೇಕ ಮಹನೀಯರುಗಳ ಲೇಖನಗಳನ್ನು ಹಿಂತಡೆದು, ಇದನ್ನು ಐವತ್ತೆರಡು ಪುಟಗಳಲ್ಲೇ ಪೂರ್ಣಗೊಳಿಸಲಾಯಿತು.

ಜನರೇನೆಂದರು? ಈ ಮಧ್ಯೆ, ನಮ್ಮ ವಾಚಕರ ಗುಲ್ಲಿಗಾರಂಭವಾಯಿತು. ಎಷ್ಟೋ ಜನರು "ಬಡವರ ಬಂಧು"ವಿನ ಮೇಲಿನ ಪ್ರೇಮದಿಂದಾಗಿ "ಅದು ಹೋಯಿತು!" ಎಂದು ವ್ಯಾಕುಲ ಪ್ರದರ್ಶನವನ್ನು ಮಾಡಿದರು. ನಮ್ಮ ಹಿತಚಿಂತಕರನೇಕರು "ಬೇಡವಾದ "ವಿಷ ಸಂಚಿಕೆ" ಯನ್ನು ಹೊರಡಿಸ ಹೋಗಿ, ಕೆಟ್ಟ ಹುಡುಗರು ಇದ್ದ ಗೌರವವನ್ನೂ. ಹಣವನ್ನೂ ಕಳಕೊಂಡರು" ಎಂದು ವ್ಯಸನ ಸೂಚನೆಯನ್ನು ಮಾಡಿದರು. ಹಾಗೂ ಹೀಗೂ, ಬಂಧುವು ಮುಳುಗಿತೆಂಬ ಕಲ್ಪನೆಯನ್ನು ಮಾಡಿ ನಮ್ಮ ಎಲ್ಲಾ ವಾಚಕರು ಬೇಸರಿಸಿಕೊಂಡರು. ಬಂಧುವಿನ ಮೇಲೆ ನಮ್ಮವರಿಗೆ ಇಷ್ಟೊಂದು ಮಮತೆಯೂ, ಸೌಹಾರ್ದ್ರವೂ, ಗೌರವವೂ ಮತ್ತು ಭಾವವೂ ಇದ್ದಿತೆಂದು ನಾವು ಎಂದೂ ಭಾವಿಸಿರಲಿಲ್ಲ. ಈ ವಿಶೇಷ ಸಂಚಿಕೆಯು ತಡವಾದುದರಿಂದಾಗಿ ಅವರ ಅಂತರ ಪ್ರೇಮದ ಆಳವು ನಮಗೆ ತಿಳಿಯಿತು.

ಕಳೆದ ವರ್ಷ ನಾವು ನಮ್ಮ ಪತ್ರಿಕೆಯ ಹೆಸರಿಗೆ ತಕ್ಕುದಾಗಿ, ಬಡವರಿ (ನಮಗಿಂತ) ಕೂಡಿದಷ್ಟು ಸಹಾಯವನ್ನಿತ್ತಿದ್ದೇವೆ. ಒಟ್ಟು ೮೭—೬—೩ ಪೈಯನ ನಿರ್ಗತಿಕರು ಕೆಲವರಿಗೆ ದಾನ ಮಾಡಿರುತ್ತೇವೆ. ಐದು ಮಂದಿಗಳಿಗೆ ಸಾಧಾರ ವ್ಯಾಪಾರೀ ಸಂಸ್ಥೆಗಳಲ್ಲಿ ಕೆಲಸವನ್ನೊದಗಿಸಿ ಕೊಟ್ಟಿರುತ್ತೇವೆ. ಎಂಟು ಮಂದಿ ಬ ಕನ್ನಡ ವಿ ದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಇಡೀ ವರ್ಷ ಬಂಧುವನ್ನು ಕಳುಹಿಸಿದ್ದೇ ಒಬ್ಬ ಬಡ ವಿದ್ಯಾರ್ಥಿಗೆ ಅಲ್ಪ ಸ್ವಲ್ಪ ಸಹಾಯವನ್ನು ಪ್ರತ್ಯೇಕವಾಗಿ ಕೊಟ್ಟಿರುತ್ತೇ ನಮ್ಮ ಈ ಸೇವೆಗಳನ್ನೆಲ್ಲಾ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂಬ ಆಶೆಯು ನಮಗಿಲ್ಲವ ದರೂ, ನಮ್ಮ ವಾಚಕರು ನಮಗೆ "ನೀವು ಬಡವರಿಗಾಗಿ ಮಾಡಿದುದೇನು?" ಎಂ ಪ್ರಶ್ನಿಸಬಾರದೆಂದೇ ಈ ಕಿಂಚಿತ್ ಸೇವೆಯ ಕುರಿತು ಇಲ್ಲಿ ಉಲ್ಲೇಖಿಸಿದೆವ ಈ ಸೇವೆಯನ್ನು ನಿಜವಾಗಿಯೂ ನಾವು ಮಾಡಿರುವುದಲ್ಲ; ನಮ್ಮ ಸಾವಿರಾ ವಾಚಕರೇ ನಮ್ಮಿಂದ ಇದನ್ನು ಮಾಡಿಸಿದರೆಂದು ಮನಃಪೂರ್ವಕವಾಗಿ ಹೇಳ ಬಯಸ ತ್ತೇವೆ. ಕಳೆದ ವರ್ಷದಲ್ಲಿ ನಮ್ಮಿಂದ ತಪ್ಪುಗಳಾಗಿದ್ದರೆ ಅವು ನಮ್ಮ ಪಾಲಿಗ ಒಪ್ಪುಗಳಿದ್ದರೆ ಅವುಗಳ ಅಭಿವಂದನೆಯು ನಮ್ಮ ವಾಚಕರಿಗೆ ಸಲ್ಲತಕ್ಕುದಿದೆ.

ಬಹುಮಾನ— ಕಳೆದ ವರ್ಷ ನಮಗೆ ಬಹು ಮಂದಿ ವಾಚಕರು ಚಂದ ದಾರರನ್ನೊದಗಿಸಿ ಕೊಟ್ಟು ಸತ್ಸಹಾಯವನ್ನಿತ್ತರು. ಅಂತಹವರಲ್ಲಿ ಶ್ರೀ. ಮುಂಬಾಯ ಕೆ. ಟಿ. ಕರ್ಕೇರರೂ, ಶ್ರೀ ಎ. ಪಿ. ಕಿರೋಡಿಯನರೂ, ಶ್ರೀ. ಮಂಜುನಾ ಅಮೀನರೂ, ಶ್ರೀ. ಎಮ್. ಈಶ್ವರರೂ, ಶ್ರೀ. ಜಿ. ಎಮ್. ಕೋಟಿಯಾನರ ಶ್ರೀ. ಕೆ. ಎಫ್. ಸಾಲಿಯಾನರೂ, ಗೋವೆಯ ಶ್ರೀ. ಎಸ್. ವಿಶ್ವನಾಥರೂ, ಪುತ್ತೂ ರಿನ ಶ್ರೀ ಕೆ. ರಾಘವನವರೂ, ಮಂಗಳೂರಿನ ಕೆನರಾ ವಾಚ್ ವರ್ಕ್ಸ್ ಪ್ರೊಪ್ರೈಟ ಶ್ರೀ. ಎ. ಚೂಡಪ್ಪನವರೂ, ಪ್ಯಾಸ್ ಎಂಡ್ ಸನ್ಸ್ ಕದ್ರಿ, ಶ್ರೀ. ಮಂಜುನಾ ನವರೂ, ಶ್ರೀ. ಕೆ. ಈಶ್ವರನವರೂ, ಶ್ರೀ. ಎನ್. ಸುಂದರನವರೂ, ಶ್ರೀ. ಬಿ. ಗಂ ಧರ ದಾಸರೂ, ಶ್ರೀ. ಎ. ಚೆನ್ನಪ್ಪನವರೂ, ಶ್ರೀ. ಎ. ಆರ್. ಸಾಲಿಯಾನರೇ ಮೊ ಲಾದವರು ಚಿರಸ್ಮರಣೀಯರು. ಶ್ರೀ. ಕೆ. ಟಿ. ಕರ್ಕೇರರವರ ಸಾಹಸವು ಪ್ರಶಂ ನೀಯವಿದೆ. ಅವರ ಉದ್ಯಮಕ್ಕಾಗಿ ಕಮಿಟಿಯ ಅನುಮೋದನೆಯನೆಯಂತೆ, ಅವರಿ ರಜತ ಪದಕವೊಂದನ್ನು ಬಹುಮಾನಿಸಲಿದ್ದೇವೆ.

ಮುಂದಕ್ಕೆ? ಈ ವರ್ಷದಲ್ಲಿ ನಾವು ಪೋಷಕರನ್ನೂ, ಆಶ್ರಯದಾ ರನ್ನೂ ಸಂಪಾದಿಸಿದ್ದೇವೆ. ಅವರ ಸಹಾಯದಿಂದಲೂ, ಭಗವತ್ಕರುಣೆಯಿಂದಲ ಈ ವರ್ಷದಲ್ಲೂ, ನಾವು ಬಡವರ ಹಿತದ ಬಗ್ಗೆ ಹೆಚ್ಚಿನ ಶ್ರಮ ವಹಿಸಿ ಕೆಲಸ ನಡ ಬೇಕೆಂದು ನಿರ್ಧರಿಸಿದ್ದೇವೆ. ಬಡವರಿಗಾಗಿ (ನಮಗಿಂತ) ಉದ್ಯೋಗಗಳನ್ನು ಸಂಪಾ ದಿಸುವುದು, ಬಡವಿದ್ಯಾರ್ಥಿಗಳಿಗೆ ವಿದ್ಯಾವೇತನವನ್ನು ಕೂಡಿದಷ್ಟು ಕೊಡುವುದ

(೩೧ನೇ ಪುಟವನ್ನು ನೋಡುವುದು)

ಬಡವರ ಬಂಧು ಹಾಸ್ಯೌಷಧಾಲಯ.

ಸಂಗ್ರಹಕಾರರು:—ಡಾಕ್ಟರ್—ಮುಲಿನದ ಕೊಳಕು ಕಶ್ಮಲರಾವ್, L. E. G.

ರಾಮು—ಏನೋ ಬಾಲಕೃಷ್ಣ! ಕ್ಲಾಸಿನ ಕೊನೆಗೆ [illegible]ದ್ದಾರಂತಲ್ಲೋ ನಿನ್ನೆ?

ಬಾಲಕೃಷ್ಣ—ಎಲ್ಲಿ ಕುಳಿತರೇನಯ್ಯ? ಎಲ್ಲರಿಗೂ [illegible] ಪಾಠ ಹೇಳಿಕೊಡುತ್ತಾರೆ.

○ ○ ○ ○

ಗಂಡಹೆಂಡರಿಗೆ ದೊಡ್ಡ ಜಗಳವಾಯಿತು, ಕೊನೆಗೆ ಹೆಂಡತಿ ಬಹಳವಾಗಿ ಕೋಪಿಸಿಕೊಂಡು—ಛೀ! ನಾನು ಈ [illegible] ಇಲ್ಲಿ ಇರಲಾರೆ. ನಮ್ಮ ತವರು ಮನೆಗೆ [illegible] ಹೊರಡುತ್ತೇನೆ.

ಗಂಡ—ಹಾಗೆಯೇ ಮಾಡು. ಬೇಕಾದರೆ ಇಗೋ [illegible]ಟಾರಿನ ಟಿಕೇಟಿಗೆ ದುಡ್ಡು!

ಹೆಂಡತಿ—(ಎಣಿಸಿಕೊಂಡು) ಇದೇನಿದು? ಆ ಮೇಲೆ [illegible] ಬರುವ ಟಿಕೇಟಿಗೆಲ್ಲುಂಟು ಇದರಲ್ಲಿ ಹಣ?

○ ○ ○ ○

ಹೆಂಡತಿ—[illegible] ನೋವೆಂದು ಹೇಳುತ್ತಾ ತಿಂಗಳ [illegible]ಯಿತಲ್ಲ? ಔಷಧದ ಯೋಚನೆಯೇ ಇಲ್ಲವೇ?

ಗಂಡ—ಇದೆ; ಮಕ್ಕಳಿಗೆ ಹೇಳಿಸುತ್ತಿರುವ ಸಂಗೀತ [illegible].

ಸುವಾಸಿನಿ.

○ ○ ○ ○

ನ್ಯಾಯಾಧೀಶ—ನೀನು ಆ ಅಂಗಡಿಯಿಂದ ಜವುಳಿಯನ್ನು ತಕ್ಕೊಂಡು ಓಡಿ ಹೋದೆಯೋ?

ತಪ್ಪುಗಾರ—ಹೌದು ಸ್ವಾಮಿ.

ನ್ಯಾಯಾಧೀಶ—ಅದೇಕೆ?

ತಪ್ಪುಗಾರ—ಅಂಗಡಿಯ ಗೋಡೆಯಲ್ಲಿ ದೊಡ್ಡ ದೊಡ್ಡ ಅಕ್ಷರಗಳಿಂದ 'ಜವುಳಿ ತೆಗೆದುಕೊಂಡು ಹೋಗಿ. ತೆಗೆದುಕೊಂಡು ಹೋಗಿ, ಈ ಸಂದರ್ಭವನ್ನು ಬಿಡ [illegible]. ಬಿಟ್ಟರೆ ಮತ್ತೆ ಸಿಗಲಾರದು' ಎಂದು ಬರೆದಿತ್ತು.

ಭಾರತಿ

○ ○ ○ ○

ಧರ್ಮೋಪದೇಶಿ—(ಬೀದಿಯಲ್ಲಿ ನಿಂತು ಪ್ರಸಂಗ ಮಾಡುತ್ತ) ನಮ್ಮ ಪಾಪಗಳಿಗಾಗಿ ದೇವರ ಕ್ಷಮೆ [illegible]ಪ್ರಕ್ಕೆ ಮೊದಲು ನಾವೇನು ಮಾಡಬೇಕು?

ಪೋಕರಿ ಹುಡುಗ—ಪಾಪ ಮಾಡಬೇಕು.

○ ○ ○ ○

ಏನು ಸಾಬರೇ! ಕನ್ನಡಿ ಕೈಯಲ್ಲಿ ಹಿಡಿದು [illegible] ಕಣ್ಣು ಮುಚ್ಚಿದ್ದೀರಲ್ಲಾ! ಏನು [illegible]?

ಸಾಹೇಬ—ನಿದ್ದೆ ಮಾಡುತ್ತಿದ್ದಾಗ ನನ್ನ ಮೋರೆ ಹೇಗೆ [illegible]ಸುವುದೆಂದು ನೋಡುತ್ತಿದ್ದೇನೆ. ಪಿಸೋದಿ

○ ○ ○ ○

ಸತಿ—ನಾನು ಗಾಯನ ಹಾಡುವಾಗ ನೀವೇಕೆ [illegible]ಗೆ ಹೋಗಿ ನಿಲ್ಲುತ್ತೀರಿ?

ಪತಿ—ಮತ್ತೇನು ಮಾಡಲಿ ಪ್ರಿಯೇ? ನಾನೂ ಒಳಗೆ ಇದ್ದರೆ ಜನಗಳು ನೀನು ಹಾಡುವುದನ್ನು ಕೇಳಿ ನಿನ್ನನ್ನು ಹೊಡೆದು ಬಡಿದು ಕೂಗಿಸುತ್ತೇನೆಂದು ಯೋಚಿಸುವರಲ್ಲಾ? ಅದಕ್ಕಾಗಿಯೇ ನಾನು ಹೊರಗೆ ಬರುವುದು.

ತಿ. ದೂ.

○ ○ ○ ○

ಗೋವಿಂದ—ಏನ್ರೀ, ನೀವಿಷ್ಟು ಧನಿಕರಾಗಿದ್ದು ಇಂತಹ ಕೊಳಕು ಬಟ್ಟೆಯನ್ನು ಧರಿಸಿರುವಿರಲ್ಲಾ?

ಧನಿಕ ಲೋಭಿ—ನಾನು ಧನಿಕನೆಂದು ಈ ಊರಿನಲ್ಲಿ ಎಲ್ಲರೂ ಬಲ್ಲರು. ನಾನ್ಯಾವ ವಸ್ತ್ರವನ್ನು ಧರಿಸಿದರೆ ಏನು?

(ಇದೇ ಧನಿಕನನ್ನು ಇನ್ನೊಂದೂರಿನಲ್ಲಿ ನೋಡಿ)

ಗೋವಿಂದ—ಈ ಊರಿನಲ್ಲಾದರೂ ನೀವು ಒಳ್ಳೆಯ ವಸ್ತ್ರವನ್ನು ಧರಿಸಬಾರದೆ?

ಬಡತನ ಬಾರೆ!

ಬಡತನ! ಬಡತನ! ಬಡತನ! ಬಾರೆ ।
ಬಡತನ ನೀ ಬಂದೆನ್ನನು ಸೇರೆ; ।
ಬಡತನ ಮುದ್ದಿನ ಹೇ ಬಡತನವೇ, ।
ಬಿಡದಿರು ಕ್ಷಣವೂ—ಬಾ ನ್ಯೈದೋರೆ ।

ಬಿ. ನರ್ಸಪ್ಪ.

ಧನಿಕ ಲೋಭಿ—ನನ್ನ ಪರಿಚಯವೇ ಇಲ್ಲದ ಈ ಊರಲ್ಲಿ ನಾನು ಹೇಗಿದ್ದರೇನು?

○ ○ ○ ○

ಉಪಾಧ್ಯಾಯ—ನಿನ್ನ ಅಣ್ಣ ನಿನ್ನೆ ಯಾಕೆ ಶಾಲೆಗೆ ಬರಲಿಲ್ಲ?

ರಾಮು—ಅವನು ಅಜ್ಜಿ ಮನೆಗೆ ಹೋಗಿದ್ದಾನೆ. ಉಪಾಧ್ಯಾಯರು "ನಿನ್ನ ಅಣ್ಣ ಯಾಕೆ ಶಾಲೆಗೆ ಬರಲಿಲ್ಲ" ವೆಂದು ಕೇಳಿದರೆ ಅವನಿಗೆ ಹೊಟ್ಟೆ ನೋವೆಂದು ಹೇಳು ಎಂದು ಹೇಳಿದ್ದಾನೆ.

ಟಿ. ಸಿ. ಚಂದ್ರರಾಜ ಸೆಟ್ಟಿ.

○ ○ ○ ○

ಶಿಕ್ಷಕ—ಎಲೋ ಕೇಶವ! ಕಳೆದ ವರ್ಷ ನನ್ನಿಂದ ನಿನಗೆ ಹೆಚ್ಚಿಗೆ ಉಪಕಾರವಾದುದಾವಾಗ?

ಕೇಶವ—ನೀವು ಕೈ ನೋವಿನಿಂದಾಗಿ ಬೆತ್ತವನ್ನು ಮುಟ್ಟಲಿಕ್ಕಾಗದಿದ್ದಾಗ.

○ ○ ○ ○

ಚಿಕ್ಕ ಹುಡುಗ—ಆ ಕತ್ತಲೆಯಲ್ಲಿ ಏನನ್ನು ಹುಡುಕುತ್ತೀರಿ ಆಚಾರ್ಯರೇ? ದೀಪ ತೋರಿಸಲೇ?

ಆಚಾರ್ಯರು—ಹಗಲಪ್ಪಾ, ದೀಪ ತೋರಿಸು.

[illegible] ಹುಡುಗ—ಅದೋ ನೋಡಿ, ಆ ಬೀದಿಯ [illegible] ಕಡೇ ಮನೆಯಲ್ಲಿದೆ. ಕಾಣುತ್ತದಷ್ಟೆ?

ಎಮ್ ಅನಂತಯ್ಯ ಉಪಾಧ್ಯಾಯ.

೩೦ನೇ ಪುಟದಿಂದ ಮುಂದುವರಿಸಿದ್ದು)

ಆದರೆ ಇವೆಲ್ಲವನ್ನು ಮಾಡುವುದರ ಮೊದಲು ನಮ್ಮ ವಾಚಕರಿಗೂ, ಪೋಷಕರಿಗೂ ನಮ್ಮ ಮೇಲೆ ವಿಶ್ವಾಸ ಹುಟ್ಟಬೇಕಾಗಿದೆ. "ಬಡವರ ಬಂಧು"ವು ತಡವಾಗಿ ಬಂತೆಂದೊಡನೆ ಅದು "ಸತ್ತಿತು—ತಿಂದು ಹಾಕಿದರು" ಎಂಬಿವೇ ಮೊದಲಾದ ಅವಿಶ್ವಾಸದ ಉದ್ಗಾರಗಳಿಗೆಡೆಗೊಡುವುದು, ತಾವು ಕ್ಷಮಾಗುಣಸಂಪನ್ನರಲ್ಲವೆಂಬುದನ್ನು ತೋರಿಸುವುದು ಇವೆಲ್ಲ ನಮ್ಮ ವಾಚಕರ ಹೃದಯದಿಂದ ಹಾರಿ ಹೋಗಬೇಕಾಗಿದೆ. "ಬಡವರ ಬಂಧು"ವು ಒಬ್ಬಿಬ್ಬರು ಗೋಚರ ವ್ಯಕ್ತಿಗಳ ಸಾಧನೆಯ ಪರಿಣಾಮವಾದರೂ, ಅದಕ್ಕೆ ಬಹು ಮಂದಿ ಅಗೋಚರ ಸಾಧನೆಗಾರರ, ನಿಸ್ವಾರ್ಥಿಗಳ ಬೆಂಬಲವಿದೆಯೆಂದೂ, ಸಂಪಾದಕರು ಜೀವಂತವಿರುವ ವರೆಗೆ ಅದು ಎಷ್ಟು ಕ್ಷೀಣ ಹೊಂದಿದರೂ ಚಿಕಿತ್ಸೆಯಿಲ್ಲದೆ ಸಾಯದೆಂದೂ, ನಮ್ಮವರು ತಿಳಿದಿರಬೇಕಾಗಿದೆ. ಹಾಗೆ ಅದು ಸಾಯಲಿರುತ್ತದೆಂದು ನಮಗೆ ತಿಳಿದು ಬಂದೊಡನೆ, ಆ ವಿಷಯವನ್ನು ನಮ್ಮ ಸಮಸ್ತ ವಾಚಕರಿಗೂ, ಮೊದಲೇ ನೋಟೀಸು ಮೂಲಕವಾದರೂ ತಿಳುಹಿಸದಿರಲಾರೆವು.

ಲಾಭವೋ ನಷ್ಟವೋ? ಕೆಲವರು ಈ ಪ್ರಶ್ನೆಯಲ್ಲೇ ನಿರತರಿರುವರು. ಸೇವೆಗೆ ಲಾಭವುಂಟೇ? ಸಾಧನೆಗೆ ನಷ್ಟವುಂಟೇ? ವಿಶಾಲ ಮತ್ತು ಶುದ್ಧಾಂತಃಕರಣವೊಂದಿಷ್ಟರೆ ನಮ್ಮ ಇಡೀ ಕನ್ನಡ ನಾಡನ್ನೇ ಉದ್ಯಾನವನ್ನಾಗಿ ಮಾಡಿ. ಕೆಲವು ಪತ್ರಿಕೆಗಳ ಮರಣದಿಂದುಂಟಾದ ಭಯವನ್ನು ನಮ್ಮ ವಾಚಕರ ಹೃದಯದಿಂದ ನಿರ್ಮೂಲಿಸಬಹುದೆಂದು ಖಂಡಿತ ತಿಳಿದಿದ್ದೇವೆ. "ತಲಪಲಿಲ್ಲ!" ಇದೊಂದು ಶಬ್ದವು ಅನೇಕ ವಾಚಕರ ಪತ್ರಗಳಲ್ಲಿ ಕಾಣ ಬರುತ್ತದೆ. ಕೆಲವರು 'ಮೇ ತಿಂಗಳ ಸಂಚಿಕೆಯು ತಲಪಲಿಲ್ಲ" ಎನ್ನುತ್ತಾರೆ. "ನೀವು ಉತ್ತರ ಕೊಡುವುದಿಲ್ಲವೇಕೆ?" ಎಂದು ಕೆಲವರ ಪ್ರಶ್ನೆ. "ಮೇ ತಿಂಗಳಲ್ಲಿ ಸಂಚಿಕೆಯಿಲ್ಲ"ವೆಂದು ನಾವು ಎಪ್ರಿಲ್ ಸಂಚಿಕೆಯಲ್ಲಿ ಹೇಳಿದ ಮೇಲೂ, ಈ ದೂರನ್ನು ನಾವು ಸಹಿಸುವುದೆಂತು? ತಿಂಗಳಿಗೆ ೨೦೦–೨೫೦ ಪತ್ರಗಳು ನಮಗೆ ತಲಪಿ ನಾವು ಅವುಗಳಲ್ಲಿ ಅನಗತ್ಯವಾದವುಗಳಿಗೂ ಉತ್ತರ ಕೊಡುತ್ತಾ ಹೋದರೆ ಟಪ್ಪಾಲಾಫೀಸಿನವರು ಆ ಹಣ [illegible]ಲ್ಲ! 'ಬಂಧು'ವು ಬದುಕುವುದು ಹೇಗೆ? ಆದುದರಿಂದ ಈ ವಿಷಯವಾಗಿ ಸಂಬಂಧಪಟ್ಟವರು ನಮ್ಮನ್ನು ಕ್ಷಮಿಸಿ, ಮುಂದಕ್ಕೆ ನಮ್ಮೊಡನೆ ಪತ್ರವ್ಯವಹಾರ ನಡೆಸುವಾಗ ದಯವಿಟ್ಟು ("ಬಂಧು"ವು ಸದಾ ಬದುಕಿ ಬಾಳುವಂತೆ) ಜವಾಬಿಗಾಗಿ ಅಂಚೆವೆಚ್ಚವನ್ನು ಕಳುಹಿಸಬೇಕಾಗಿ ಬೇಡುತ್ತೇವೆ.

ಸಂಪಾದಕ.

ಗುಡ್ ಮೋರ್ನಿಂಗ್ ಸಾರ್! ಗುಡ್ ಮೋರ್ನಿಂಗ್ !!

ಜೈ:— ಮಿಸ್ಟರ್ ಮೈಸೂರ್ ನರ್ಸಣ್ಣ.

ಜೈ! ಪುಂಡಲೀಕ ವರದ ಪಾಂಡುರಂಗ ಹರಿ ವಿಠ್ಠಲ್ । ಜೈ! ಜೈ!! ಜೈ!!! ಮೈಸೂರ್ ನರ್ಸಣ್ಣನ ವಿಶೇಷ ನುಡಿಗಳಿಗೆ ಜೈ! ಬಡವರ ಬಂಧು ಸಂಪಾದಕರಿಗೆ ಜೈ! ವಿಶೇಷ ಸಂಚಿಕೆಯ ಓದುಗರಿಗೆ ಆಶೀರ್ವಾದದ ಜೈ! "ಬಡವರ ಬಂಧು" ಹೋಯಿತೆಂದು ಬೊಬ್ಬೆ ಹಾಕಿ, ನಕ್ಕು ಹಾರಿದವರಿಗೆ ಫಸ್ಟ್‌ಕ್ಲಾಸ್ ಜೈ! ಈ ವರ್ಷ ಬಡವರ ಬಂಧುವನ್ನು ಬಿಟ್ಟವರಿಗೆ ಉದ್ದುದ್ದ ಜೈ! ಬಡವರ ಬಂಧುವಿಗೆ ಎಕ್ಸ್‌ಚೇಂಜ್ ಕಳುಹಿಸದ ಹಿರಿಯಣ್ಣ ಜಯಕರ್ನಾಟಕಕೇ ಮಂಗಳ ಜೈ! ಬಡವರ ಬಂಧುವಿನ ಜಾಹೀರಾತು ಹಣ ತಿಂದು ಹಾಕಿದವರಿಗೆ ಥೆಂಕ್‌ಲೆಸ್ ಜೈ! ಕಳೆದ ವರ್ಷದ ಚಂದಾ ಹಣ ಕೊಡದ ೬ ಜನರಿಗೊಂದು ಬಹು ದೊಡ್ಡ ಜೈ! ವಿಶೇಷ ಸಂಚಿಕೆಗೆ ಜಾಹೀರಾತು ಕೊಡದವರಿಗೆ ಅವ್ವಲ್ ಜೈ! "ಬಂಧು"ವಿನ ಮೇಲೆ ಅವಿಶ್ವಾಸ ತೋರಿ ಅದಕ್ಕೆ ಬೈದ ಎಲ್ಲರಿಗೂ ಶೇಕ್‌ಹೇಂಡ್ ಜೈ! ಜೈ ಹ್ಯೊಗೆ ರಾಂ! ಜೈ ನೆಲ್ಲೂರ್ ರಾಮ್! ಜೈ ತಲ್ಚೇರಿ ರಾಮ್! ಜೈ ಬೆಂಗಳೂರ್ ರಾಮ್! ಜೈ ಚುಡ್ಸೆಗಲ್ಲಿ ರಾಮ್! ಜೈ!! ಜೈ!! ಜೈ!!! ಅಯ್ಯಾ ವಾಚಕರೆ. ಗುಡ್‌ಮೋರ್ನಿಂಗ್ ಅಯ್ಯಾ! ಗುಡ್‌ಮೋರ್ನಿಂಗ್, ಹೌ ಆರ್ ಯೂ? ನಾನು ಈ ವರ್ಷವೂ ಬಂದೆ ರಾಜಾ! ನನ್ನ ಅಳಿಯ 'ಧೂಮಕೇತು'ವನ್ನು ಈ ಸಲ ಬಡವರ ಬಂಧು ರಾಜ್ಯಕ್ಕೆ ಕಳುಹಿಸಬೇಕೆಂದಿದ್ದೆ; ಆದರೆ ಅವನ ಹೆಂಡ್ತಿ ಹೊಟ್ಟೆಯಲ್ಲಿ ಒಂದು ಮಗು ಚೆಂಡಾಟವಾಡುತ್ತಾ ಇದೆ ರಾಜಾ! ಅವಳಿಗೆ ಭಾರೀ ಹೊಟ್ಟೆ ನೋವಿದೆ. ಅವನಿಗೆ ಇತ್ತ ಬರಲು ಸಾಧ್ಯವಿಲ್ಲ ಕೇಳಿ, ಪಾಕಂಪ್ನಿಯಿಂದ ಮದ್ದು ತೆಗೆದು ಕೊಟ್ಟು ಕೊಟ್ಟು ಬೀಲು ಉದ್ದುದ್ದವಾಗಿ ಹೋಗಿದೆ ರಾಜಾ! ಅವಳು ಬದುಕಿಕೊಳ್ಳಲು ಯತ್ನಿಸುವುದು ನಮ್ಮಿಚ್ಛೆ; ಬದುಕಿಕೊಳ್ಳುವುದು ದೈವೇಚ್ಛೆ! ಅವನು ಇತ್ತಲಾಗೆ ಬರುತ್ತಿದ್ದರೆ ಕೆಲವರ ಹಿತ್ತಾಳಿ ಹೊರಗಾಗುತ್ತಿತ್ತು! ಮೊನ್ನೆ ಕಳ್ಳರಿಗೆ ಕೈದಾಗಿ ಊರಲ್ಲಿ ಬೊಬ್ಬೆಯೆದ್ದಿದೆ ಅನ್ಯಾಯದಿಂದ ಗಳಿಸಿದ್ದು ಮೊಮ್ಮಕ್ಕಳ ತನಕ ನಿಲ್ಲದು ಎಂದು ತಿಳಿದೂ ಬೊಂಬಾಯಿ ಸ್ಟೋರ್ಸ್, ನಿಕೇರಾ ವಾಚ್‌ಶೋಪ್, ಶೈಮನ್ಸ್‌ಸ್ಟುಡಿಯೋ, ಎಮ್. ಕೆ. ವೈದ್ಯರುಗಳ ಅಂಗಡಿಗಳಿಗೆ ಕನ್ನ ಹಾಕಿದವರನ್ನು ಅವನು ಖಂಡಿತ ಹಿಡಿದುಕೊಡುತ್ತಿದ್ದ. ಹರಿಜನ ಸಂಘದವರು ಹ್ಯಾಗೆ ಕೆಲ್ಸಮಾಡಬೇಕೆಂದು ಅವನು ನಿಜವಾಗಿ ಕೇಳಿಕೊಡುತ್ತಿದ್ದ; ನಮ್ಮೂರ ಜೈಲುಗಳಲ್ಲಿನ ಕೆಲವು ಬಡ ಕೈದಿ ಮತ್ತು ಅಧಿಕಾರಿಗಳ ಭವಿಷತ್ತನ್ನೇ ಹೇಳಿಬಿಡುತ್ತಿದ್ದ. ಊರಲ್ಲಿ ಕಳ್ಳತನ ನಡೆಯುವ ಈ ದಿವಸಗಳಲ್ಲಿ ಪೋಲೀಸರು ಏನು ಮಾಡುತ್ತಿದ್ದರೆಂದು ಅವನು ಹೇಳುತ್ತಿದ್ದ. ಬಡವರ ಬಂಧು ವಿಶೇಷ ಸಂಚಿಕೆಗೆ ಲೇಖನ ಕೊಡದ ಕರ್ನಾಟಕ ಕೇಸರಿಗಳು ಕೆಲವರ ಕತೆ ಬರಿಯುತ್ತಿದ್ದ—ಇಷ್ಟೆಲ್ಲ ಕೆಲಸ ಅವನು ಮಾಡುತ್ತಿದ್ದ. ಅವನ ಹೆಂಡ್ತಿಯ ಹೊಟ್ಟೆ ತಣ್ಣಗಾಗಿ ಹೋಗಲಿ! ಊರಲ್ಲಿ ಭಜನೆ ಸಪ್ತಾಹ—ಶಿಕ್ಷಣ ಸಪ್ತಾಹ ಎಲ್ಲಾ ಭಾರಿ ಗೌಜೀಲಿ ಜರಗುತ್ತದಯ್ಯ! ಎಜುಕೇಶನಲ್ ಅಧಿಕಾರಿಗಳ ಬೆಂಬಲವಿಲ್ಲದ ಅವು ಎಲ್ಲ ವ್ಯಾಪಾರ ಅಂತ ಕೆಲವರ ಮಾತು! ಕೆಲವು ಬ್ರಾಹ್ಮಣರು ಹರಿಜನರನ್ನು ದೇವಸ್ಥಾನಕ್ಕೆ ಬಿಡಬಾರದು ಎಂತಾರೆ ನೋಡಿ! ಆದರೆ ಕತ್ತಲಾಗುತ್ತಲೇ ಬೊಂಬಾಯಿ ಮದ್ರಾಸ್ ವೆಲ್ಕಂ ಹೋಟ್ಲುಗಳಲ್ಲಿ ಬಿರಿಯಾಣಿ ಹೊಡೀತಾರೆ. ಕೆ- ವರು ಕನ್ನಡ ರೈಟರರಿಗೆ ತೆಳು ಪತ್ರಿಕೆ ಆದ್ರೆ ಅದಕ್ಕೆ ಆರ್ಟಿಕಲ್ಲು ಕೊಡಲು ಮನಸ್ಸು ಬರೋದೇ ಇಲ್ಲ ಕಾಣಿ! ಅರೆ ಪಾವಿನವರ ಆರ್ಭಟ ಬಹಳ ಕಾಣಿ! ತಾವು ದೊಡ್ಡೋರು, ತಮ್ಮ ಆರ್ಟಿಕಲ್ಲುಗಳಿಗೂ ದೊಡ್ಡ ದೊಡ್ಡ ಪತ್ರಿಕೆ ಬೇಕು ಎಂ- ಅವರ ಆಶೆ ರಾಜಾ! ಆದರೆ ಅರಸನ ಮಾನ ಅರಸನಿಗೆ, ಅಗಸನ ಮಾನ ಅಗಸನಿಗೆ— ಸಣ್ಣ ಪತ್ರಿಕೆಗಳಿಗೂ ಮಾನವಿದೆಯಲ್ಲಾ ರಾಜಾ! ಕಳೆದ ವರ್ಷ ನಿಮ್ಮೂರ ಮೇಲೆಲ್ಲಾ ತಿರುಗಿ ನಿಮ್ಮೂರವರ ಆಟನೋಟ ನೋಡಿ ಕಂಡದ್ದನ್ನು ಹೇಳಿದ್ದಕ್ಕೆ ಅವರಿಗೆ ಬ್ರಹ್ಮಾಂ- ಕೋಪ! ಅಂಕೆ ಇಲ್ಲದ ಕಪಿ ಲಂಕೆ ಸುಟ್ಟಿತು ಎಂದು ಒಬ್ಬರು ನನಗೆ ಪಾಸ್- ಮಾಡಿದರು. ಒಬ್ಬರು ನನ್ನ ಕಿವಿ ಹಿಂಡ ಬಂದರು! ಅಹಂಕಾರದಿಂದ ಹರಿ ಕೆಟ್ಟ ಭೀಂಕಾರದಿಂದ ಬಲಿ ಕೆಟ್ಟ ಎಂಬುದನ್ನು ಇವರು ಮರೆತರು, ಆದರೆ ಅನಾಥೋ- ದೇವ ರಕ್ಷಿತ! ನಾನು ಉಳಿದೆ. ಅವರನ್ನು ಪೋಲೀಸರು ಲಾಕಪ್ಪಿನಲ್ಲಿರಿಸಿದರು ಕೆಲವರು ಅಂದ ನೋಡಿದರೆ ತಿಂದುಕೊಳ್ಳುವ ಹಾಗಿದ್ದಾರೆ. ಗುಣ ನೋಡಿದರೆ ಗುದ್ದಿಕೊಳ್ಳುವ ಹಾಗಿದ್ದಾರೆ; ಬಾಯಿಯಲ್ಲಿ ಬಸಪ್ಪನೆಂತಾರೆ; ಹೊಟ್ಟೆಯಲ್ಲಿ ವಿಷಪ್ಪ- ನೆಂತಾರೆ. ಈ ವರ್ಷ ನಾನು ಬಡವರ ಬಂಧುವನ್ನು ಸೇರಬಾರದೆಂದು ಕೆಲವರು ಹೇಳಿದ್ರು. ಸಂಪಾದಕರೂ ಬೇಡಾ ಎಂದರು. ಕಡೆಗೆ ಸಂಪಾದಕರ ಕಾಲು ಹಿಡಿದು ಹೇಗೂ ಈ ವಿಶೇಷ ಸಂಚಿಕೆಯಲ್ಲಿ ತಲೆ ಹಾಕಿದೆ. ಬಡವರ ಬಂಧು ಕೆಲವರಿಗೆ ತಲೆ- ಲಿಲ್ಲ ಎಂದು ದೂರು ಬಂದಿದೆ ಅಂತೆ. ಮುದಿ ಗಾಂಧಿ ಮಹಾತ್ಮರು ೨೧ ದಿನಗಳ ಉಪವಾಸ ಮಾಡಿ ಬಿದ್ದು ಸಾಯಲಿಕ್ಕಾಗಿ ಬದುಕಿದುದು ಇಂದು ಮಹದಾಶ್ಚರ್ಯ! ಆದರೆ ಇದು ಅದಕ್ಕಿಂತ ಡಬ್ಬಲ್ ಪರಮಾಶ್ಚರ್ಯ! ಕೆಲವರಿಗೆ ಕನ್ನಡ ಪತ್ರಿಕೆಗಳೆಂದರೆ ಭಾರೀ ಅಪನಂಬಿಕೆ ನೋಡಿ! ಪತ್ರಿಕೆಗೆ ಸ್ವಲ್ಪ ಸೀಕ್ ಆದೊಡನೆ ಅದು ಪಡ್ಚ ಎಂದು ಬೊಬ್ಬೆ ಹಾಕುತ್ತಾರೆ. ಮೈಸೂರಲ್ಲಿ ಹೀಂಗಿಲ್ಲ ನೋಡಿ! ಇಲ್ಲಿ ಒಂದು ಪತ್ರಿಕೆಯು ಚೆನ್ನಾಗಿ ನಡೆಯುತ್ತದೆ ಎಂದು ತಿಳಿದೊಡನೆ ಕೆಲವರ ಹೊಟ್ಟೆ ಬಿಸಿಯೇರುತ್ತದೆ ಕೆಲವರ ಕಣ್ಣು ಕೆಂಪೇರುತ್ತದೆ ಕಡೆಗೆ "ಯಾಕ್ರಯ್ಯಾ ಆ ಪತ್ರಿಕೆ? ಅದರಲ್ಲೇ- ನುಂಟು? ಬದನೆಕಾಯಿಯೋ? ಅದರಲ್ಲಿ ಜಾಹೀರಾತು ಕೊಡಬೇಡಿ" ಎಂದು ಪ್ರಚಾರ ಮಾಡುತ್ತಾರೆ. ಬಂಧುವಿನ ಪ್ರತಿನಿಧಿ ಒಬ್ಬರು ಹಾರ್ಮೋನಿ ಕಂಪೆನಿ ಒಂದಕ್ಕೆ ಹೋಗಿ ಜಾಹೀರಾತು ಕೇಳಿದ್ದಕ್ಕೆ ಹೊರಗಿನ ಬೀಲು ರಾಜರೊಬ್ಬರು "ಅದರಲ್ಲಿ ಕೊಡಬೇಡ್ರಯ್ಯಾ" ಎಂದು ನಂಜು ನೀರನ್ನು ಕರೆದರಂತೆ! ಥೇಂಕ್‌ಯೂ ಬೀಲು ರಾಜಾ! ಥೇಂಕ್‌ಯೂ! ಅಕ್ಕ ಸತ್ತರೆ ಅಮವಾಸ್ಯೆ ನಿಲ್ಲುವುದಿಲ್ಲ; ಅಣ್ಣ ಸತ್ತರೆ ಹುಣ್ಣಿಮೆ ನಿಲ್ಲುವುದಿಲ್ಲ! ಒಬ್ಬರು ಜ್ಯಾಹೀರಾತು ಕೊಡದಿದ್ದರೆ ಇಬ್ಬರು ಕೊಡುತ್ತಾರೆ! ಅಯ್ಯಾ ಸಂಪಾದಕ್ರೆ ಆಗೋದು ಹೋಗೋದು ದೇವರ ಇಚ್ಛೆ, ಬಿತ್ತೋದು ಉಳೋದು ನಿಮ್ಮ ಇಚ್ಛೆ! ನಡೀರಿ ಮುಂದೆ! ಬರ್ತೇನೆ ಗುಡ್ ನ್ಯಾಟ್!

ಈ ಸಂಚಿಕೆಯಲ್ಲಿನ ಶ್ರೀ। ಶಂಕರ ಭಟ್ಟರ ಪಡಿಯಚ್ಚು "ವಿಶ್ವಕರ್ನಾಟಕ"ದ ಕೃಪೆಯಿಂದ; ಶ್ರೀಮತಿ ಆರ್. ಕಲ್ಯಾಣಮ್ಮನವರ ಪಡಿಯಚ್ಚು "ರಾಷ್ಟ್ರಬಂಧು"ವಿನ ಕೃಪೆಯಿಂದ. ಸ್ವೀಕಾರ ವಿಮರ್ಶೆಯು ಮುಂದಿನ ಸಂಚಿಕೆಗಳಲ್ಲಿ.

Popular Tailoring Shop,

Cloth Merchants, Tailors & Outfitters.

NICE CUT —————— CHEAP RATES.

TRIAL ORDER SOLICITED

Sir Pherozshah Mehta Road, Fort,

BOMBAY.

ಪೊಪ್ಯುಲರ್ ಟೈಲರಿಂಗ್ ಶೋಪ್

ವಸ್ತ್ರ ವ್ಯಾಪಾರಿಗಳೂ ಹೊಲಿಯುವವರೂ, ಔಟ್‌ಫಿಟ್ಟರ್ಸ್.

ಉತ್ತಮ ತರದ ಕೆಲಸ!

ಬೆಲೆ ಅಗ್ಗ! ಒಮ್ಮೆ ಪರೀಕ್ಷಿಸಿರಿ!

ಸರ್. ಫಿರೋಜಷಾ ಮೆಥಾ ರೋಡ್,

ಫೋರ್ಟ್ ಮುಂಬಾಯಿ.

ಡಾಕ್ಟರ್ ಯು. ಆರ್. ಭಟ್,

ಸರ್ಜನ್ ದಂತವೈದ್ಯ,


(ಮದ್ರಾಸು ಮಧುರೆ, ಮುತ್ತು ಮೈಸೂರು ಮೊದಲಾದ ಕಡೆಗಳಲ್ಲಿ ಖ್ಯಾತಿ ಹೊಂದಿರುವರು.)

ಬೇಂಕ್ ಒಫ್ ಮುಂಗಳೂರಿನ ಮಾಳಿಗೆ,

ರಥಬೀದಿ. ಮುಂಗಳೂರು.

ನವೀನ ತರದ ಸಾಮುಗ್ರಿಗಳಿಂದ ಯುಕ್ತವಾಗಿರುವ ಸರ್ಜರಿ!

ಐದು ವರ್ಷಗಳ ಅಪಾರ ಅನುಭವ.



ಪ್ಲೇಟುಗಳಿಲ್ಲದೆ ಹಲ್ಲುಗಳನ್ನು ಕಟ್ಟುವುದು (ಹೊಸ ನಮೂನೆ) ಎಂದೆಂದು ಒಡೆದು ಹೋಗದ ದಂತ ಮಾಲೆಗಳು; ಚಿನ್ನ ಬೆಳ್ಳಿ, ಎಲ್ಯೂಮಿನಿಯಮ್, ವಲ್ಕೆನೈಟ್ ಮುಂತಾದವುಗಳಲ್ಲಿ ಕಟ್ಟಿರುವ ದಂತಮಾಲೆಗಳು; ಒಂದಿಷ್ಟೂ ನೋವಾಗದಂತೆ ಹಾಳು ಹಲ್ಲುಗಳನ್ನು ಕೀಳುವುದು; ಮುಂತಾದ ಯಾ[...]ತ್ತೂ ದಂತಚಿಕಿತ್ಸೆಗಳನ್ನು ಆಧುನಿಕ ಶಾಸ್ತ್ರೀಯ ರೀತಿಯಲ್ಲಿ ತೃಪ್ತಿಕರವಾಗಿ ಮಾಡ[...]ವರು.

ದರಗಳು ಅತ್ಯಂತ ಸುಲಭ! ದಂತಪರೀಕ್ಷೆ ಧರ್ಮಾರ್ಥ!

ನಿಜವಾದ ಬಡಬಗ್ಗರಿಗೆ ಧರ್ಮಾರ್ಥ ದಂತಚಿಕಿತ್ಸೆ!

ಅಲಭ್ಯ ಲಾಭ! ಇಂದೇ ಬರೆಯಿರಿ!!

ಶ್ರೀ

ರಾಮಕೃಷ್ಣ ಧರ್ಮವೈದ್ಯಾಶ್ರಮ,

ಹೆಡ್ ಆಫೀಸು: ಮುಂಗಳೂರು, ದ. ಕನ್ನಡ.

ಬ್ರಾಂಚ್, ಮುಲ್ಕಿ ದ. ಕ.

ನಮ್ಮಲ್ಲಿ ಆಯುರ್ವೇದ ಶಾಸ್ತ್ರ ರೀತ್ಯಾ ತಯಾರಿಸಿದ ಎಲ್ಲಾ ಬಗೆಯ ಆಸವ, ಅರಿಷ್ಟ, ಲೇಹ, ತೈಲ, ಮಾತ್ರೆ, ಭಸ್ಮಾದಿಗಳು ಬಹಳ ಸುಲಭ ಬೆಲೆಗೆ ದೊರೆಯುತ್ತವೆ.

ಇಲ್ಲಿಯ ಔಷಧಿಗಳಿಗೆ ಅನೇಕ ಸುವರ್ಣ ಪದಕಗಳೂ, ಉತ್ತಮ ತರದ ಯೋಗ್ಯತಾ ಪತ್ರಗಳೂ ಸಿಕ್ಕಿವೆ.

ಹೆಚ್ಚಿನ ವಿಷಯಗಳಿಗೆ ಕೂಡಲೇ ಕಾಗದ ಬರೆಯಿರಿ.

ಡಾಕ್ಟರ್ ಕೆ. ಗೋಪಾಲಾಚಾರ್,

ಆಯುರ್ವೇದ ವಿದ್ವಾನ್,

ಪೋಸ್ಟು ಕೊಡಿಯಾಲ್‌ಬೈಲ್,

ಮುಂಗಳೂರು, ದ. ಕ.

(ಕೆಟಲಾಗು ಪುಗಸಟ್ಟೆ)

L u s t r e .

A MAGIC

POLISHING POWDER.

This Powder is used for Polishing Gold, Silver, Brass, Copper, Glass, Tin, Steel or any other materia[l] where a Brilliant Lustre is required.

Caution, Take little quantity & rub with Solt Ra[g]

Price Annas 0—6—0 per Box.

Manufacturd by:

Dr. N. A. Ms. S. L. Pand. l. Works,

DHARWAR

Agents.

SHAH Coy. Mangalore.

ಅನುಭವಸಿದ್ಧ ಔಷಧಗಳು.

ಧಾತುಪುಷ್ಟಿ ಲೇಹ— ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ಥಬಾಧೆ, ರಕ್ತಪಿತ್ತ, ಚಳಿಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ ೧ಕ್ಕೆ ರೂ. ೨-೮-೦. ೨ಕ್ಕೆ ೪-೧೨-೦.

ಅಶೋಕಾರಿಷ್ಟ ಮತ್ತು ಮಾತ್ರೆ— ಹೆಂಗಸರ ಮುಟ್ಟಿದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈಕಾಲು ಸೆಳಿತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣ ಪಡಿಸುವುದು.

ಬಾಟ್ಲಿ ೧ರ ೧-೨-೦; ೧ ಡಬ್ಬಿ ಮಾತ್ರೆಗೆ ೧-೦-೦; ೨ ಬಾಟ್ಲಿ ಔಷಧಕ್ಕೂ ೨ ಡಬ್ಬಿ ಮಾತ್ರೆಗೂ ೪-೪-೦.

(ಕಸ್ತೂರಿಮಿಶ್ರಣ) ದಶಮೂಲಾರಿಷ್ಟ— ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಅಕುಂಚಿಸಿ ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗಭಕೋಶದ ವೇದನೆಗಳನ್ನು ಸಮಾಧಾನ ಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ನಿರಾಂತಕವಾಗುವುದು. ಪ್ರಸವಿಸಿದ ತರುವಾಯ ೩ ದಿನಗಳ ಮಾತ್ರೆಗೆ ಆ. ೩; ದಶಮೂಲ ಬೆಲೆ ಬಾಟ್ಲಿ ೧ರ ರೂ. ೧-೮-೦; ೨ ಬಾಟ್ಲಿಗಳಿಗೆ ೩-೦-೦.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

೧ ಡಬ್ಬಿ ಮಾತ್ರೆಗೆ ರೂ. ೨-೮-೦; ೨ ಡಬ್ಬಿಗಳಿಗೆ ರೂ. ೪-೧೨-೦.

ಮಲೇರಿಯಾ ನಿವಾರಿಣಿ— ಇದರ ಸೇವನೆಯಿಂದ ಮಲೇರಿಯಾ, ೧ ದಿನ ಯಾ ೨ ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಚಳಿಜ್ವರ, ಜ್ವರಗಡ್ಡೆ, ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ ೧ಕ್ಕೆ ರೂ. ೧-೮-೦; ೨ ಬಾಟ್ಲಿಗಳಿಗೆ ರೂ. ೨-೧೨-೦.

ಬಾಲಗ್ರಹ ಗುಟಿಕೆ— ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ಧ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ೧ರ ೦-೧೦-೦; ೩ರ ೧-೧೨-೦.

ಮಹಾಮದನಕಾಮೇಶ್ವರೀ ಲೇಹ— ಡಬ್ಬಿ ೧ರ ೨-೦-೦; ೨ರ ೩-೧೨-೦;

ಮಹಾಜ್ವರಾಂಕುಶ— ಇನ್‌ಫ್ಲೂಯೆಂಜಾ, ನಿಮೋನಿಯಾ, ಶೀತ ಜ್ವರ ಇವುಗಳ ಮೇಲೆ ದಿವ್ಯ ಔಷಧಿ. ಬಾಟ್ಲಿ ೧ರ ೦-೧೦-೦; ೩ಕ್ಕೆ ೧-೧೨-೦.

ಖಾಸುಕುಠಾರ ಗುಟಿಕೆ— ಎಲ್ಲಾ ವಿಧದ ಕಫ, ಕೆಮ್ಮು, ಖಾಸ ಶ್ವಾಸಕ್ಕೆ. ಬಾಟ್ಲಿ ೧ರ ೦-೧೦-೦; ೩ಕ್ಕೆ ೧-೧೨-೦;

ಸ್ಯೆಂದ ವಟಿ— ಜ್ವರ ನಿಂತು ಜ್ವರಗಡ್ಡೆ ಕರಗಿ ಮಲವಿಸರ್ಜನೆ ಆಗುವುದು. ಬಾಟ್ಲಿ ೧ರ ೧-೦-೦; ೩ಕ್ಕೆ ೨-೧೨-೦.

ಕೆಟಲಾಗಿಗೆ ಬರೆಯಿರಿ: **ಎಂ. ಗಣಪಯ್ಯ ಎಂಡ್ ಸನ್ಸ್. ಆಯುರ್ವೇದಿಕ್ ಫಿಜಿಶಿಯನ್ಸ್ ರಥಬೀದಿ, ಮಂಗಳೂರು.**

ನಮ್ಮಲ್ಲಿಯ ಔಷಧಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರೆಯುತ್ತವೆ.

ಕಾಮತ್ ಎಂಡ್ ಕೋ. ತಾರಾಹೌಸ್, ಗಿರಗಾಂವ್ ಬೇಕ್ ರೋಡ್, ಮುಂಬಾಯಿ ನಂ. 4. ಡಾ। ಶ್ರೀನಿವಾಸ ಪೈ, ಪುತ್ತೂರು, ದ. ಕ.

ಡಾಕ್ಟರ್ ಸುವರ್ಣರ

ಮಲೇರಿಯಾಹಾರಿ

(ಮಲೆಜ್ವರಕ್ಕೆ ಸಿದ್ಧೌಷಧ)

ಮಲೆನಾಡು ನಿವಾಸಿಗಳಿಗೂ, ಕಾಫಿ, ಚಾ, ರಬ್ಬರ್ ತೋಟಗಳಲ್ಲಿ ಕೆಲಸ ಮಾಡುವವರಿಗೂ, ಮುಂಬಾಯಿ, ಖಂಡಾಲ, ಬೆಂಗಳೂರು, ಕೊಲೊಂಬೊ, ಕೊಡಗು ಮೈಸೂರು ಮೊದಲಾದ ಪ್ರಾಮುಖ್ಯ ಪಟ್ಟಣಗಳ ನಿವಾಸಿಕರಿಗೂ ವ್ಯಾಪಾರ ಸಂಬಂಧವಾಗಿ ನಾನಾ ಕಡೆಗಳಲ್ಲಿ ಸಂಚರಿಸುವವರಿಗೂ, ಏಕಾಹಿಕ, ದ್ವಾಹಿಕ, ತ್ರಾಹಿಕ ಮತ್ತು ಚಾತುರ್ಥಿಕವೆಂಬ ಮಲೆಜ್ವರವು ಹಲವರನ್ನು ದುರ್ಬಲರನ್ನಾಗಿಯೂ, ಕ್ಷಯರೋಗ ಪೀಡಿತರನ್ನಾಗಿಯೂ ಮಾಡುವುದಲ್ಲದೆ, ಅನೇಕ ಮರಣಕ್ಕೂ ಕಾರಣವಾದ ಭಯಂಕರ ಶತ್ರುವಾಗಿದೆ ಎಂಬುದು ಸರ್ವರಿಗೆ ತಿಳಿದೇ ಇದೆ. ಮಲೆಜ್ವರ ಪೀಡಿತರು, ಯಕೃತ್, ಪ್ಲೀಹ, ಗುಲ್ಮಾದಿ ರೋಗಗಳಿಂದ ವಿಕಾರವನ್ನು ಹೊಂದಿ, ಕಾಯಕಷ್ಟ ಮಾಡಲಾರದೆ, ಮರಣಾವಧಿ ನರಳುತ್ತಿರಬೇಕಾಗುವುದು ತಕ್ಕ ಔಷಧಿಯಿಂದ ಈ ರೋಗ ಬಾಧೆಯನ್ನು ನಿವಾರಿಸಿಕೊಳ್ಳುವುದು ಅಗತ್ಯವು. ಮಲೆಜ್ವರದ ಪರಿಮಾಣುಗಳನ್ನು ನಾಶಗೊಳಿಸಿ ಶರೀರಕ್ಕೆ ರಕ್ತವೃದ್ಧಿಯನ್ನೂ, ಹೃದಯಬಲವನ್ನೂ, ಜೀರ್ಣಶಕ್ತಿಯನ್ನೂ ಉಂಟುಮಾಡುವುದಕ್ಕೆ



ಮಲೇರಿಯಾಹಾರಿಯು ಸಂಜೀವನ ಸದೃಶ್ಯವಾದ ದಿವ್ಯೌಷಧವಾಗಿರುವುದು.

Dr. Suvarna's Aartha Chikithsa Bhavana,

Mangalore.

The Asian Assurance Co., Ltd.

ದಿ ಏಶಿಯಾನ್ ಎಶ್ಶೂರೆನ್ಸ್

ಕಂಪೆನಿ, ಲಿಮಿಟೆಡ್.

ರೂಪಾಯಿ 1400,000 ಕ್ಲೈಮ್‌ಗಳನ್ನು ತೆತ್ತುದು ಇದೇ ಇದರ ಭದ್ರತೆಯ ಹೆಗ್ಗುರುತು.

ಗೋಲ್ಡನ್ ಪೋಲಿಸಿಯೇ ಮೊದಲಾದ ನವೀನ ಪೋಲಿಸಿಗಳು ತಯಾರಿವೆ.

ಜೆ. ಎ. ಪುತ್ರನ್,

ಬ್ರೇಂಚ್ ಮೆನೇಜರ್,

ಹಂಪನಕಟ್ಟೆ,

ಮಂಗಳೂರು.

ವೆಸ್ಟ್ ಇಂಡಿಯಾ

ಸೋಪ್ ಎಂಡ್ ಇಂಡಸ್ಟ್ರಿಯಲ್ ಕಂಪೆನಿ,

ಹೂವಾರ್ಕೆಟಿನ ದಕ್ಷಿಣ ರಸ್ತೆ, ಮಂಗಳೂರು, ದ. ಕ.

ಪರದೇಶದ ಕೈಗಾರಿಕೆಗೆ ಯಾವ ವಿಧದಲ್ಲೂ ಕಡಿಮೆಯೆನಿಸದಂತೆ

ನಮಲ್ಲಿ ಈ ಕೆಳಗಿನ ಸಾಬೂನುಗಳು ತಯಾರಾಗುತ್ತಿವೆ.

ಡ್ಯೂರೆಕ್ಸ್:— ಬಟ್ಟೆ ಒಗೆಯಲು ಅತ್ಯುತ್ಕೃಷ್ಟವಾದುದು; ಸಣ್ಣ ಸಣ್ಣ ತುಂಡುಗಳಾಗಿ ಒಂದು ಪೆಕೆಟಿನಲ್ಲಿ ಆರರಂತೆ ಸಿಕ್ಕುವುವು. ಎಷ್ಟು ಮಾಸಿದ ವಸ್ತ್ರಗಳಾದರೂ ಅಲ್ಪ ಶ್ರಮದಿಂದ ಸ್ವಚ್ಛವಾಗುವುವು. ಇದಲ್ಲದೆ, ಬಟ್ಟೆ ಒಗೆಯುವ ಸಾಬೂನುಗಳಲ್ಲಿ ಹಲವು ಬಗೆಯನ್ನು ನಾವು ತಯಾರಿಸುತ್ತೇವೆ.

ಟರ್ಕಿಷ್ ಬಾತ್‌ಸೋಪ್:— ಸ್ನಾನಕಾಲಕ್ಕೆ ಅತ್ಯಾವಶ್ಯಕ; ಅತ್ಯುತ್ತಮ; ಅಮೋಘವಾದ ಪರಿಮಳವಿದೆ; ತಂಪಾದ ನೊರೆ; ಗಟ್ಟಿಯಾಗಿದೆ; ಹೊಳಪಾಗಿದೆ; ಚರ್ಮದ ಸೌಂದರ್ಯವನ್ನು ಹೆಚ್ಚಿಸುವ ಔಷಧಗಳೇ ಇದರಲ್ಲಿವೆ. ಎಷ್ಟು ಕಾಲಕ್ಕೂ ಪರಿಮಳ ಕೆಡುವುದಿಲ್ಲ; ಅಲ್ಪ ಬೆಲೆ!

ಇದಲ್ಲದೆ ಬೇರೆ ಹಲವು ವಿಧದ ಸಾಬೂನುಗಳಿವೆ.

ಇದರ ವಿವರವನ್ನು ಪತ್ರದ್ವಾರಾ ತಿಳಿಯಬಹುದು. ಅಥವಾ ಖುದ್ದಾಗಿ ಬಂದು ಕಾಣಬಹುದು.

ಬಿಸ್ಕೂಟುಗಳು

ಬಟ್ಟರ್, ಅರಾರೊಟ್ ಮೊದಲಾದ ಹಲವು ಬಗೆಯ ಬಿಸ್ಕೂಟುಗಳು ಅನುಭವಸ್ಥ ಮೇಲ್ವಿಚಾರದಲ್ಲಿ ನಮ್ಮ ಕಾರ್ಖಾನೆಯಲ್ಲಿ ತಯಾರಾಗುತ್ತಿವೆ. ಹಿಂದೆ ಪರದೇಶದ ಬಿಸ್ಕೂಟುಗಳನ್ನು ಕೊಂಡುಕೊಳ್ಳುತ್ತಿದ್ದವರು ಈಗ ನಮ್ಮ ಗಿರಾಕಿಗಳಾಗಿರುವರು- ಬ್ರಾಹ್ಮಣರೇ ಎಲ್ಲವನ್ನೂ ತಯಾರಿಸುವರು; ನೆನಪಿರಲಿ!

ಸ್ವದೇಶೀ ಕೈಗಾರಿಕೆ! **ನಿಮ್ಮ ಪ್ರೋತ್ಸಾಹವಿರಲಿ!**

ಏಜಂಟರಿಗೂ ವರ್ತಕರಿಗೂ ಧಾರಾಳ ಕಮಿಷನ್ ಕೊಡಲಾಗುವುದು.

LOOK SHARP!

Bath and Washing Soaps that match any foreign make, Biscuits of various tastes!

PURLY INDIAN!

OUR TRADE MARK **WISICO** OUR TRADE MARK

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. **Agents are Wanted at Unrepresented Districts.**

Apply to:—

West. India Soap & Industrial Co.,

Flower Market, South MANGALORE, S. K.

Reg. No. M. 2771. "ಬಡವರ ಬಂಧು" ಮಂಗಳೂರು.

Printed by V. S. Kudva at the Sharada Press, Mangalore and published by Mangalore Jarappa at the Badavara Bandhu Office, Hampankatta, Mangal